# ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961

(ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ 4 2006, ಭಾಗ – IVಎ, ಪುಟ 636 ರಿಂದ 684ರ ವರೆಗೆ ಪ್ರಕಟಿಸಲಾಗಿದೆ).

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**


**ಅಧ್ಯಾಯ – I**

**ಪ್ರಾರಂಭಿಕ**

**ಪ್ರಸ್ತಾವನೆ:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ – II**

**ಮಂಡಲಿಯ ಸ್ಥಾಪನೆ**

3. ಮಂಡಲಿಯ ಸ್ಥಾಪನೆ, ರಚನೆ ಮತ್ತು ನಿಗಮನ
4. ಚುನಾಯಿಸದಿದ್ದರೆ ಸದಸ್ಯರ ನೇಮಕಾತಿ
5. ಸದಸ್ಯರ ಚುನಾವಣೆ
6. ಪದಾವಧಿ
7. ಖಾಲಿ ಸ್ಥಾನಗಳು
8. ರಾಜೀನಾಮೆ
9. ಸದಸ್ಯರನ್ನು ತೆಗೆದುಹಾಕುವುದು
10. ಅನರ್ಹತೆ
11. ವ್ಯವಹರಣೆಗಳ ಸಿಂಧುತ್ವ
12. ಮಂಡಲಿಯ ಸಭೆಗಳ ಕಾಲ ಮತ್ತು ಸ್ಥಳ
13. ಮಂಡಲಿಯ ಸಭೆಗಳಲ್ಲಿನ ಪ್ರಕ್ರಿಯೆ
14. ಮಂಡಲಿಯ ರಿಜಿಸ್ಟ್ರಾರ್ ಮತ್ತು ಇತರ ಉದ್ಯೋಗಿಗಳು
15. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

**ಅಧ್ಯಾಯ – III**

**ಪರೀಕ್ಷಕರ ಸಮಿತಿ**

16. ಪರೀಕ್ಷಕರ ಸಮಿತಿ

**ಅಧ್ಯಾಯ – IV**

**ನೋಂದಣಿ**

17. ಮೊದಲನೇ ರಿಜಿಸ್ಟರನ್ನು ಸಿದ್ಧಪಡಿಸುವುದು
18. ನೋಂದಣಿ ನ್ಯಾಯಾಧಿಕರಣ
19. ರಿಜಿಸ್ಟರಿನ ಅಭಿರಕ್ಷೆ
20. ತರುವಾಯದ ನೋಂದಣಿಗೆ ಅರ್ಹತೆಗಳು
21. ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸುವುದಕ್ಕಾಗಿ ಮುಚ್ಚಳಿಕೆ ಕೊಡುವುದು
22. ರಿಜಿಸ್ಟರಿನ ನಿರ್ವಹಣೆ
23. ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು
24. ನವೀಕರಣ ಫೀಜು
25. ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗಾರರು
26. ಮರಣದ ಬಗ್ಗೆ ನೋಟೀಸು

## ಅಧ್ಯಾಯ – V

### ಅಧ್ಯಯನ ಕ್ರಮ, ಅರ್ಹತಾದಾಯಕ ಪರೀಕ್ಷೆಗಳು ಮತ್ತು ಸಂಸ್ಥೆಗಳಿಗೆ ಮನ್ನಣೆ


27. ಅಧ್ಯಯನ ಕ್ರಮ ಮತ್ತು ಅರ್ಹತಾ ಪರೀಕ್ಷೆಗಳು

28. ಸಂಸ್ಥೆಗಳಿಗೆ ಮನ್ನಣೆ

29. ಅರ್ಹತಾದಾಯಕ ಪರೀಕ್ಷೆಗಳನ್ನು ನಡೆಸಲು ಅಧಿಕೃತಗೊಳಿಸಿದ ಸಂಸ್ಥೆಯ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು

30. ಅನುಸೂಚಿಯ ಬದಲಾವಣೆ


## ಅಧ್ಯಾಯ – VI

### ಸಂಕೀರ್ಣ


31. ಮರಣ ವಿಚಾರಣೆ ಇತ್ಯಾದಿಗಳ ಸಂಬಂಧದಲ್ಲಿ ಸೇವೆ ಸಲ್ಲಿಸುವುದರಿಂದ ವಿನಾಯಿತಿ

32. ಸದಸ್ಯರಿಗೆ ಫೀಜುಗಳು ಮತ್ತು ಭತ್ಯೆಗಳು

33. ಮಂಡಲಿಯ ಆದಾಯ ಮತ್ತು ವೆಚ್ಚಗಳು

34. ವೃತ್ತಿಗಾರರ ಪಟ್ಟಿಯ ಪ್ರಕಟಣೆ

35. ನಿಯಮಗಳು

36. ವಿನಿಯಮಗಳು

37. ರಾಜ್ಯ ಸರ್ಕಾರದ ನಿಯಂತ್ರಣ

37ಎ. ಮಂಡಲಿಯನ್ನು ರಚಿಸದೇ ಇರುವಾಗ ಉಪಬಂಧ

38. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ

39. ನಿರಸನ

**ಅನುಸೂಚಿ**

**ಅಧಿಸೂಚನೆಗಳು**


### ಉದ್ದೇಶ ಮತ್ತು ಕಾರಣಗಳ ಹೇಳಿಕೆ

**I**

**1961ರ ಅಧಿನಿಯಮ 35.**- ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಂಬಯಿ ಹೋಮಿಯೋಪತಿ ಅಧಿನಿಯಮ, 1951 (1951ರ ಮುಂಬಯಿ ಅಧಿನಿಯಮ XLVIII) ಇದನ್ನು ಹೊರತುಪಡಿಸಿ ಮೈಸೂರು ರಾಜ್ಯದಲ್ಲಿ ಹೋಮಿಯೋಪತಿ ವೈದ್ಯ ಪದ್ಧತಿಯ ವೃತ್ತಿಯನ್ನು ವಿನಿಯಮಿಸುವ ಯಾವುದೇ ಕಾನೂನು ಇಲ್ಲ. ಈ ವೈದ್ಯ ಪದ್ಧತಿಯ ವೃತ್ತಿಗಾರರು ಮತ್ತು ಸಂಸ್ಥೆಗಳು, ತಮಗೆ ಶಾಸನಬದ್ಧ ಮನ್ನಣೆ ನೀಡುವಂತೆ ಕೋರಿ ಚಳುವಳಿ ನಡೆಸುತ್ತ ಬಂದಿದ್ದಾರೆ. ಅಲ್ಲದೆ, ಮೈಸೂರು ರಾಜ್ಯದಲ್ಲಿ ಹೋಮಿಯೋಪತಿ ವೈದ್ಯ ಪದ್ಧತಿಯ ವೃತ್ತಿಯನ್ನು ಮತ್ತು ಶಿಕ್ಷಣವನ್ನು ವಿನಿಯಮಿಸಲು ಏಕರೂಪದ ಕಾನೂನು ರಚಿಸುವುದು ವಿಹಿತವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಸಂಬಂಧಪಟ್ಟ ಕಡತದಲ್ಲಿ ಅಧಿಸೂಚನೆ 346 ಎಲ್.ಎ. ದಿನಾಂಕ 9ನೇ ಏಪ್ರಿಲ್, 1960 ರಿಂದ ಪಡೆಯಲಾಗಿದೆ).

**II**

**1969ರ ತಿದ್ದುಪಡಿ ಮಾಡುವ ಅಧಿನಿಯಮ 9.**- ನೋಂದಾಯಿತ ವೃತ್ತಿಗಾರರ ಮೊದಲನೇ ರಿಜಿಸ್ಟರು ಈವರೆಗೂ ಸಿದ್ಧವಾಗಿಲ್ಲದ ಕಾರಣ ಮೈಸೂರು ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 3ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಹೋಮಿಯೋಪತಿ ವೈದ್ಯ ಪದ್ಧತಿಯ ಮೊದಲನೇ ಮಂಡಲಿಯನ್ನು ಸ್ಥಾಪನೆ ಮಾಡಿರುವುದಿಲ್ಲ. ಹೋಮಿಯೋಪತಿ ವೈದ್ಯ ಪದ್ಧತಿಯ ಸಂಸ್ಥೆಗಳಿಗೆ ತೊಂದರೆಯುಂಟಾಗಬಾರದೆಂಬ ಉದ್ದೇಶದಿಂದ ಅಂಥ ಮಂಡಲಿಯ ರಚನೆಯಾಗುವವರೆಗೆ ಕಾಲೇಜುಗಳಿಗೆ ಮನ್ನಣೆ ನೀಡಲು ಒಂದು ವ್ಯವಸ್ಥೆಯನ್ನು ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

*(1968ರ ಡಿಸೆಂಬರ್ 12ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ - IV-2ಎ, ಪುಟ 55 ರಲ್ಲಿ ಪ್ರಕಟಿಸಲಾಗಿದೆ)*

### III

**1972ರ ತಿದ್ದುಪಡಿ ಮಾಡುವ ಅಧಿನಿಯಮ 14.-** ಮೈಸೂರು ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 5ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ, ಮೈಸೂರು ಹೋಮಿಯೋಪತಿ ವೈದ್ಯ ಪದ್ಧತಿ ಮಂಡಲಿಗೆ ನಿಗದಿಪಡಿಸಬಹುದಾದಂಥ ವೇಳೆ ಮತ್ತು ಸ್ಥಳದಲ್ಲಿ ಚುನಾವಣೆಗಳನ್ನು ನಡೆಸಬೇಕು. ಮತದಾರರ ಸಮೂಹವು ಇಡೀ ರಾಜ್ಯದಲ್ಲಿ ಇರುವ ವೃತ್ತಿಗಾರರನ್ನು ಒಳಗೊಂಡಿದ್ದು ಅವರೆಲ್ಲರೂ ಒಂದೆಡೆ ಸೇರುವುದು ಕಾರ್ಯ ಸಾಧ್ಯವಲ್ಲ. ಆದ್ದರಿಂದ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಈ ತೊಂದರೆಯನ್ನು ನಿವಾರಿಸುವ ಸಲುವಾಗಿ, ಅಂಚೆಯ ಮೂಲಕ ಮತ ಚಲಾಯಿಸಿ ಚುನಾವಣೆಗಳನ್ನು ನಡೆಸಲು ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಯಿತು.

ಮೈಸೂರು ವಿಧಾನಸಭೆಯಾಗಲಿ ಅಥವಾ ಮೈಸೂರು ವಿಧಾನ ಪರಿಷತ್ತಾಗಲಿ ಅಧಿವೇಶನದಲ್ಲಿಲ್ಲದ್ದರಿಂದ, ಮೈಸೂರು ಹೋಮಿಯೋಪತಿ ವೃತ್ತಿಗಾರರ (ತಿದ್ದುಪಡಿ) ಅಧ್ಯಾದೇಶ 1972 (1972ರ ಮೈಸೂರು ಅಧ್ಯಾದೇಶ ಸಂಖ್ಯೆ 3) ಇದನ್ನು ರಾಜ್ಯಪಾಲರು ಹೊರಡಿಸಿದ್ದರು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

*(ದಿನಾಂಕ 22ನೇ ನವೆಂಬರ್, 1972ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ - IV-2ಎ ಯಲ್ಲಿ ಪುಟ 3 ರಲ್ಲಿ ಸಂಖ್ಯೆ 554 ಎಂದು ಪ್ರಕಟಿಸಲಾಗಿದೆ)*

### IV

**1976ರ ತಿದ್ದುಪಡಿ ಮಾಡುವ ಅಧಿನಿಯಮ 8.-** ಕರ್ನಾಟಕ ಹೋಮಿಯೋಪತಿ ಅಧಿನಿಯಮ, 1961ರ 16ನೇ ಪ್ರಕರಣದ (1)ನೇ ಉಪಪ್ರಕರಣದ ಪ್ರಕಾರ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ನಿರ್ದೇಶಕರು ಈ ರಾಜ್ಯದಲ್ಲಿ ಹೋಮಿಯೋಪತಿ ಪರೀಕ್ಷೆಗಳನ್ನು ನಡೆಸುವ ಪರೀಕ್ಷಕ ಮಂಡಲಿಯ ಅಧ್ಯಕ್ಷರಾಗಿರತಕ್ಕದ್ದು. ಅದೇ ರೀತಿ ಅಧಿನಿಯಮದ 37ಎ ಪ್ರಕರಣದ ಅಡಿಯಲ್ಲಿ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ನಿರ್ದೇಶಕರು ಕರ್ನಾಟಕ ಹೋಮಿಯೋಪತಿ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು.

ಭಾರತೀಯ ವೈದ್ಯ ಶಾಸ್ತ್ರದ ಒಂದು ಪ್ರತ್ಯೇಕ ವಿಭಾಗವನ್ನು ಖಾಯಂ ಆಧಾರದ ಮೇಲೆ ರಚಿಸಲಾಗಿದ್ದು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರ ಹುದ್ದೆಯನ್ನು ಸಹ ರೂ. 1300-1800 ಶ್ರೇಣಿಯಲ್ಲಿ ಮಂಜೂರು ಮಾಡಲಾಗಿದೆ.

ಹೋಮಿಯೋಪತಿಯು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯ ಆಡಳಿತ ನಿಯಂತ್ರಣದ ಅಡಿಯಲ್ಲಿ ಬರುವುದರಿಂದ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರನ್ನು ಹೋಮಿಯೋಪತಿಯ ಪರೀಕ್ಷೆಗಳನ್ನು ನಡೆಸಲು ಪರೀಕ್ಷಾ ಮಂಡಲಿಯ ಅಧ್ಯಕ್ಷರನ್ನಾಗಿ ಮತ್ತು ಕರ್ನಾಟಕ ಹೋಮಿಯೋಪತಿ ಸಮಿತಿಯ ಪರೀಕ್ಷಕ ಮಂಡಲಿ ಅಧ್ಯಕ್ಷರನ್ನಾಗಿ ಮತ್ತು ಕರ್ನಾಟಕ ಹೋಮಿಯೋಪತಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವುದು ಸೂಕ್ತವಾದುದು.

ಈ ಮೇಲೆ ಹೇಳಲಾದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ (ತಿದ್ದುಪಡಿ) ಅಧ್ಯಾದೇಶ, 1975 ಇದನ್ನು ಹೊರಡಿಸಲಾಯಿತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

*(ದಿನಾಂಕ 22ನೇ ಜನವರಿ 1976ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ - IV-2ಎ ಯಲ್ಲಿ ಪುಟ 23-24 ರಲ್ಲಿ ಪ್ರಕಟಿಸಲಾಗಿದೆ)*

### V

**1979ರ ತಿದ್ದುಪಡಿ ಮಾಡುವ ಅಧಿನಿಯಮ 34.-** ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 6ನೇ ಪ್ರಕರಣದಲ್ಲಿ ಸದಸ್ಯರು ಚುನಾಯಿತರಾಗಿದ್ದಿರಲಿ ಅಥವಾ ನಾಮನಿರ್ದೇಶಿತರಾಗಿದ್ದಿರಲಿ ಅವರ ಪದಾವಧಿಯು, ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಸದಸ್ಯನ ಚುನಾವಣೆಯ ತರುವಾಯ ನಡೆಸಲಾಗುವ ಮಂಡಲಿಯ ಮೊದಲ ಸಭೆಯ ದಿನಾಂಕಗಳಿಂದ ಪ್ರಾರಂಭವಾಗಿ 5 ವರ್ಷಗಳವರೆಗೆ ಇರತಕ್ಕದ್ದು. ಸದಸ್ಯನೊಬ್ಬನು ಗಂಭೀರ ಸ್ವರೂಪದ ಅಕ್ರಮ ಅಥವಾ ದುರ್ನಡತೆಯ ಅಪರಾಧವನ್ನು ಎಸಗಿದ್ದರೆ, ಆಗ ಆ ಸದಸ್ಯನನ್ನು ಸಂಸ್ಥೆಯ/ಮಂಡಲಿಯ ಹಿತದೃಷ್ಟಿಯಿಂದ ತೆಗೆದುಹಾಕಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಅಂಥ

ಸದಸ್ಯನನ್ನು ಪದದಿಂದ ತೆಗೆದುಹಾಕುವ ಸಲುವಾಗಿ ಉಪಬಂಧ ಕಲ್ಪಿಸಲು ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವಾಗಿದೆ.

ಸದರಿ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ನೋಂದಣಿ ಶುಲ್ಕ ಮತ್ತು ನವೀಕರಣ ಶುಲ್ಕವನ್ನು ಕ್ರಮವಾಗಿ 30 ರೂ ಮತ್ತು 10 ರೂ.ಗಳಿಗೆ ಹೆಚ್ಚಿಸುವುದು ಅವಶ್ಯವೆಂದು ಸಹ ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

*(ದಿನಾಂಕ 16ನೇ ಮೇ, 1979ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ – IV-2ಎ ಯಲ್ಲಿ, ಪುಟ 3 ರಲ್ಲಿ ಸಂಖ್ಯೆ 472 ಎಂದು ಪ್ರಕಟಿಸಲಾಗಿದೆ)*

## VI

**1992ರ ತಿದ್ದುಪಡಿ ಮಾಡುವ ಅಧಿನಿಯಮ 13**.– ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ ಈಗಿರುವ ಉಪಬಂಧವು, ಯಾವ ವೃತ್ತಿಗಾರರ ಹೆಸರನ್ನು ರಿಜಿಸ್ಟರಿನ 'ಎ' ಭಾಗದಲ್ಲಿ ನಮೂದಿಸಲಾಗಿದೆಯೋ ಅವರ ಪೈಕಿ ನಾಲ್ವರು ಸದಸ್ಯರನ್ನು ಮತ್ತು ಯಾವ ವೃತ್ತಿಗಾರರ ಹೆಸರುಗಳನ್ನು ರಿಜಿಸ್ಟರಿನ 'ಬಿ' ಭಾಗದಲ್ಲಿ ನಮೂದಿಸಲಾಗಿದೆಯೋ ಅವರ ಪೈಕಿಯಿಂದ ಇಬ್ಬರು ಸದಸ್ಯರನ್ನು ಚುನಾಯಿಸಲು ಅವಕಾಶ ಕಲ್ಪಿಸುತ್ತದೆ. ಹಾಗೆ ಚುನಾಯಿಸಬೇಕಾದ ಸದಸ್ಯರ ಸಂಖ್ಯೆಯು ಕ್ರಮವಾಗಿ 'ಎ' ಭಾಗದಲ್ಲಿ ಮತ್ತು 'ಬಿ' ಭಾಗದಲ್ಲಿ ನೋಂದಾಯಿಸಿದ ವೃತ್ತಿಗಾರರ ಸಂಖ್ಯೆಗೆ ಪ್ರಮಾಣಾನುಸಾರವಾಗಿಲ್ಲವೆಂದು ಪರಿಗಣಿಸಲಾಗಿದೆ. ಆದ್ದರಿಂದ 'ಎ' ಭಾಗ ಮತ್ತು 'ಬಿ' ಭಾಗಗಳಲ್ಲಿ ನೋಂದಾಯಿತರಾದ ವೃತ್ತಿಗಾರರನ್ನು ಒಟ್ಟಿಗೆ ಸೇರಿಸಿ, ಅವರ ಪೈಕಿ ಆರು ಮಂದಿ ಸದಸ್ಯರನ್ನು ಚುನಾಯಿಸಲು ಉಪಬಂಧ ಕಲ್ಪಿಸಬೇಕೆಂದು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

*(1992ರ ವಿಧಾನಸಭಾ ವಿಧೇಯಕ ಸಂ. 1 ರಿಂದ ಪಡೆಯಲಾಗಿದೆ).*

## 1961ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 35

(1961ರ ಡಿಸೆಂಬರ್ ಮೂವತ್ತನೆಯ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961

(1961ರ ಡಿಸೆಂಬರ್ ಇಪ್ಪತ್ತೇಳನೆಯ ದಿನದಂದು ರಾಷ್ಟ್ರಪತಿಗಳ ಅನುಮತಿಯನ್ನು ಪಡೆಯಿತು).

(1969ರ 9, 1972ರ 14, 1976ರ 8, 1979ರ 34 ಮತ್ತು 1992ರ 13 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ).

[1][ಕರ್ನಾಟಕ ರಾಜ್ಯ][1] ದಲ್ಲಿ ಹೋಮಿಯೋಪತಿ ಔಷಧ ಪದ್ಧತಿಯ ಬಗೆಗಿನ ಅರ್ಹತೆಗಳನ್ನು ಮತ್ತು ವೃತ್ತಿ ನಡೆಸುವುದನ್ನು ನಿಯಂತ್ರಿಸುವ ಮತ್ತು ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಗಾರರನ್ನು ನೋಂದಣಿ ಮಾಡಲು ಉಪಬಂಧಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ, ಹೋಮಿಯೋಪತಿ ಔಷಧ ಪದ್ಧತಿಯ ಬಗೆಗಿನ ಅರ್ಹತೆಗಳನ್ನು ಮತ್ತು ವೃತ್ತಿ ನಡೆಸುವುದನ್ನು ನಿಯಂತ್ರಿಸುವುದು ಮತ್ತು ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಗಾರರನ್ನು ನೋಂದಣಿ ಮಾಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ - I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು [1][ಕರ್ನಾಟಕ][1] ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗುತ್ತದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) I, IV ಮತ್ತು VI ನೆಯ ಅಧ್ಯಾಯಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

1. ಇತರ ಉಪಬಂಧಗಳು 17.7.1970 ರಿಂದ ಅಧಿಸೂಚನರಯ ಮೂಲಕ ಜಾರಿಗೆ ಬಂದಿರುತ್ತವೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ 3ನೆಯ ಪ್ರಕರಣದ ಮೇರೆಗೆ ಸ್ಥಾಪಿಸಿದ [1][ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ;][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) "ಸಮಿತಿ" ಎಂದರೆ 16ನೆಯ ಪ್ರಕರಣದ ಮೇರೆಗೆ ರಚಿತವಾದ ಪರೀಕ್ಷಕರ ಸಮಿತಿ;

(ಸಿ) "ಹೋಮಿಯೋಪತಿ" ಎಂದರೆ ಡಾ. ಹಾನೆಮನ್ ಸ್ಥಾಪಿಸಿದ ಔಷಧ ಪದ್ಧತಿ ಮತ್ತು ಅದು ಡಾ. ಷುಸ್ಲರ್ ಸ್ಥಾಪಿಸಿದ ಜೀವ ರಸಾಯನ ಶಾಸ್ತ್ರ ಸಂಬಂಧಿತ ಶಾಖೆಗಳನ್ನು ಒಳಗೊಳ್ಳುತ್ತದೆ. ಮತ್ತು "ಹೋಮಿಯೋಪತಿ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಡಿ) "ಪರಿಶೀಲಕ" ಎಂದರೆ 14ನೆಯ ಪ್ರಕರಣದ (4)ನೆಯ ಉಪಪ್ರಕರಣದ ಮೇರೆಗೆ ಮಂಡಲಿಯು ನೇಮಕ ಮಾಡಿದ ಪರಿಶೀಲಕ;

(ಇ) "ಸದಸ್ಯ" ಎಂದರೆ ಮಂಡಲಿಯ ಸದಸ್ಯ;

(ಎಫ್) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜಿ) "ವೃತ್ತಿಗಾರ" ಎಂದರೆ ಹೋಮಿಯೋಪತಿ ವೈದ್ಯಪದ್ಧತಿಯನ್ನು ತನ್ನ ಮುಖ್ಯ ವೃತ್ತಿಯಾಗಿ ನಡೆಸುವ ವ್ಯಕ್ತಿ;

(ಎಚ್) “ನಿಯಮಿಸಲಾದುದು” ಎಂದರೆ ನಿಯಮಗಳ ಮೂಲಕ ನಿಯಮಿಸಲಾದುದು;

(ಐ) “ಅಧ್ಯಕ್ಷ” ಎಂದರೆ ಮಂಡಲಿಯ ಅಧ್ಯಕ್ಷ;

(ಜೆ) “ಅರ್ಹತಾದಾಯಕ ಪರೀಕ್ಷೆ” ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹೋಮಿಯೋಪತಿ ಔಷಧ ಪದ್ಧತಿಯಲ್ಲಿನ ಪರೀಕ್ಷೆ;

(ಕೆ) “ರಿಜಿಸ್ಟರ್” ಎಂದರೆ ಈ ಅಧಿನಿಯಮದ ಮೇರೆಗೆ ಸಿದ್ಧಪಡಿಸಿದ ಮತ್ತು ಇಟ್ಟಿರುವ, ವೃತ್ತಿಗಾರರ ರಿಜಿಸ್ಟರು;

(ಎಲ್) “ರಿಜಿಸ್ಟರ್ಡ್ ಪ್ರಾಕ್ಟೀಷನರ್” ಎಂದರೆ ಆ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ಹೆಸರು ನಮೂದಾಗಿರುವ ವೃತ್ತಿಗಾರ;

(ಎಂ) “ರಿಜಿಸ್ಟ್ರಾರ್” ಎಂದರೆ 14ನೆಯ ಪ್ರಕರಣದ ಮೇರೆಗೆ ನೇಮಕಗೊಂಡ ರಿಜಿಸ್ಟ್ರಾರ್;

(ಎನ್) “ವಿನಿಯಮಗಳು” ಎಂದರೆ 36ನೇ ಪ್ರಕರಣದ ಮೇರೆಗೆ ರಚಿಸಲಾದ ವಿನಿಯಮಗಳು;

(ಓ) “ನಿಯಮಗಳು” ಎಂದರೆ 35ನೆಯ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು.

## ಅಧ್ಯಾಯ - II

## ಮಂಡಲಿಯ ಸ್ಥಾಪನೆ

**3. ಮಂಡಲಿಯ ಸ್ಥಾಪನೆ, ರಚನೆ ಮತ್ತು ನಿಗಮನ.-** (1) ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಬೇಗ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ [1][ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ][1]ಯೆಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸಬಹುದು. ಆ ಮಂಡಲಿಯು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅದು ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಮಂಡಲಿಯು, ಅಧ್ಯಕ್ಷನೂ ಸೇರಿದಂತೆ ಹನ್ನೊಂದು ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಅದನ್ನು ಈ ಕೆಳಕಂಡ ರೀತಿಯಲ್ಲಿ ರಚಿಸತಕ್ಕದ್ದು, ಎಂದರೆ :-

(i) ನೋಂದಾಯಿತ ವೃತ್ತಿಗಾರನಾಗಿರತಕ್ಕ ಒಬ್ಬ ಅಧ್ಯಕ್ಷರು;

(ii) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐವರು ಸದಸ್ಯರು, ಅವರ ಪೈಕಿ ಕನಿಷ್ಠ ಪಕ್ಷ ಇಬ್ಬರು ನೋಂದಾಯಿತ ವೃತ್ತಿಗಾರರಾಗಿರತಕ್ಕದ್ದು;

[1][(iii) ರಿಜಿಸ್ಟರಿನ 'ಎ' ಮತ್ತು 'ಬಿ' ಭಾಗದಲ್ಲಿ ಹೆಸರು ನಮೂದಾಗಿರುವ ನೋಂದಾಯಿತ ವೃತ್ತಿಗಾರರು ತಮ್ಮ ಪೈಕಿ ಚುನಾಯಿಸಿದ ಆರು ಸದಸ್ಯರು:][1]

1. 1992ರ ಅಧಿನಿಯಮ ಸಂಖ್ಯೆ 13ರ ಮೂಲಕ24.4.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು,-

(ಎ) ಈ ಅಧ್ಯಾಯವು ಜಾರಿಗೆ ಬಂದ ತರುವಾಯ ಐದು ವರ್ಷಗಳ ಅವಧಿಗೆ ರಾಜ್ಯ ಸರ್ಕಾರವು ಅಧ್ಯಕ್ಷನನ್ನು ನೇಮಕ ಮಾಡತಕ್ಕದ್ದು;

(ಬಿ) ಐದು ವರ್ಷಗಳ ಸದರಿ ಅವಧಿಯು ಮುಕ್ತಾಯವಾದ ತರುವಾಯ ಮೊದಲನೆಯ ಮತ್ತು ತರುವಾಯದ ಮಂಡಲಿಯ ರಚನೆಯಲ್ಲಿ ಸದಸ್ಯರು ತಮ್ಮ ಪೈಕಿ ಅಧ್ಯಕ್ಷನನ್ನು ಚುನಾಯಿಸತಕ್ಕದ್ದು. [1][XXX][1]

1. 1992ರ ಅಧಿನಿಯಮ ಸಂಖ್ಯೆ 13ರ ಮೂಲಕ24.4.1992 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**4. ಚುನಾಯಿಸದಿದ್ದರೆ ಸದಸ್ಯರ ನೇಮಕಾತಿ.-** ಯಾವುದೇ ಚುನಾವಣೆಯಲ್ಲಿ ಮತದಾರರು ಅವಶ್ಯ ಸಂಖ್ಯೆಯ ಸದಸ್ಯರನ್ನು ಚುನಾಯಿಸಲು ವಿಫಲರಾದರೆ, ರಾಜ್ಯ ಸರ್ಕಾರವು ಉಳಿದ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಅದು ಸೂಕ್ತವೆಂದು ಭಾವಿಸುವಂಥ ನೋಂದಾಯಿತ ವೃತ್ತಿಗಾರರರನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ವೃತ್ತಿಗಾರರು, 3ನೆಯ ಪ್ರಕರಣದ ಉದ್ದೇಶಕ್ಕಾಗಿ ಸದರಿ ಪ್ರಕರಣದ ಮೇರೆಗೆ ಕ್ರಮಬದ್ಧವಾಗಿ ಚುನಾಯಿತರಾಗಿರುವುದಾಗಿ ಭಾವಿಸತಕ್ಕದ್ದು.

**5. ಸದಸ್ಯರ ಚುನಾವಣೆ.–** (1) 3ನೆಯ ಪ್ರಕರಣದ ಮೇರೆಗೆ ಸದಸ್ಯರ ಚುನಾವಣೆಯನ್ನು ನಿಯಮಿಸಬಹುದಾದಂಥ [1][XXX][1] ರೀತಿಯಲ್ಲಿ ನಡೆಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಅಧಿನಿಯಮದ ಮೇರೆಗಿನ ಎಲ್ಲಾ ಚುನಾವಣೆಗಳನ್ನು ಹಂಚಿಕೆ ಮತದಾನದ ಪದ್ಧತಿಗೆ ಅನುಸಾರವಾಗಿ ನಡೆಸತಕ್ಕದ್ದು.

**ವಿವರಣೆ.–** ಹಂಚಿಕೆಯ ಮತದಾನ ಪದ್ಧತಿ ಎಂದರೆ, ಎಷ್ಟು ಸ್ಥಾನಗಳನ್ನು ಭರ್ತಿ ಮಾಡಬೇಕಾಗಿದೆಯೋ ಅಷ್ಟು ಮತಗಳನ್ನು ಕೊಡಲು ಪ್ರತಿಯೊಬ್ಬ ಮತದಾರನು ಹಕ್ಕುಳ್ಳವನಾಗಿರತಕ್ಕ ಮತದಾನ ಪದ್ಧತಿ:

ಪರಂತು, ಯಾರೇ ಮತದಾರನು ಯಾರೇ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ:

ಮತ್ತು ಪರಂತು, ಮತದಾರನು ತಾನು ಕೊಡಲು ಹಕ್ಕುಳ್ಳವನಾಗಿರುವ ಎಲ್ಲ ಮತಗಳನ್ನು ದಾಖಲು ಮಾಡಿದ್ದ ಹೊರತು ಯಾವುದೇ ಮತಪತ್ರವು ಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**6. ಪದಾವಧಿ.–** (1) ಈ ಅಧಿನಿಯಮದ ಮೂಲಕ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಚುನಾಯಿತರಾದ ಅಥವಾ ನಾಮನಿರ್ದೇಶಿತರಾದ ಸದಸ್ಯರ ಪದಾವಧಿಯು, 3ನೆಯ ಪ್ರಕರಣದ ಮೇರೆಗೆ ಆ ಸದಸ್ಯರ ಚುನಾವಣೆಯ ತರುವಾಯ ಮಂಡಲಿಯ ಮೊದಲನೆಯ ಸಭೆಯು ನಡೆದ ದಿನಾಂಕದಿಂದ ಪ್ರಾರಂಭವಾಗುವ ಐದು ವರ್ಷಗಳ ಅವಧಿವರೆಗೆ ಇರತಕ್ಕದ್ದು.

(2) ನಿರ್ಗಮಿಸುವ ಸದಸ್ಯನು, ಸಂಧರ್ಭಾನುಸಾರ ಅವನ ಉತ್ತರಾಧಿಕಾರಿಯ ಚುನಾವಣೆ ಅಥವಾ ನಾಮನಿರ್ದೇಶನವಾಗುವವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(3) ನಿರ್ಗಮಿಸುವ ಸದಸ್ಯನು ಮರು ಚುನಾವಣೆ ಅಥವಾ ಮರು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

**7. ಖಾಲಿ ಸ್ಥಾನಗಳು.–** ಸದಸ್ಯನ ಅಥವಾ ಅಧ್ಯಕ್ಷನ ಪದದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅವನ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅಸಮರ್ಥತೆ ಅಥವಾ ಅನರ್ಹತೆಯಿಂದ ಅಥವಾ ಅನ್ಯಥಾ ಖಾಲಿ ಸ್ಥಾನವು ಉಂಟಾದ ಸಂದರ್ಭದಲ್ಲಿ, ಆ ಖಾಲಿ ಸ್ಥಾನವನ್ನು ನಿಯಮಿಸಿದ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು. ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಯಾರೇ ವ್ಯಕ್ತಿಯು, 6ನೇ ಪ್ರಕರಣದಲ್ಲಿ ಏನೇ ಇದ್ದರೂ, ಆ ಖಾಲಿ ಸ್ಥಾನವು ಉಂಟಾಗದಿದ್ದರೆ ಯಾವ ಸದಸ್ಯನ ಸ್ಥಾನಕ್ಕೆ ಅವನು ಚುನಾಯಿತನಾಗಿರುವನೋ ಅಥವಾ ನಾಮನಿರ್ದೇಶಿತನಾಗಿರುವನೋ ಆ ಸದಸ್ಯನು ಪದಧಾರಣ ಮಾಡಬಹುದಾಗಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

**8. ರಾಜೀನಾಮೆ.–** (1) ಯಾರೇ ಸದಸ್ಯನು ಯಾವುದೇ ಕಾಲದಲ್ಲಿ ಅಧ್ಯಕ್ಷನಿಗೆ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು.

(2) ಅಧ್ಯಕ್ಷನು, ರಾಜ್ಯ ಸರ್ಕಾರದಿಂದ ನೇಮಕಗೊಂಡಿದ್ದರೆ ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ಸಲ್ಲಿಸಬಹುದು. ಅಧ್ಯಕ್ಷನು ಚುನಾಯಿತ ಅಧ್ಯಕ್ಷನಾಗಿದ್ದರೆ ಅವನು ಮಂಡಲಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು.

**9. [1][ಸದಸ್ಯರನ್ನು ತೆಗೆದುಹಾಕುವುದು][1].–** ಯಾರೇ ಸದಸ್ಯನು,–

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಮಂಡಳಿಯ ಅಧ್ಯಕ್ಷನಾಗಿದ್ದು ರಾಜ್ಯ ಸರ್ಕಾರದ ಮತ್ತು ಯಾರೇ ಇತರ ಸದಸ್ಯನಾಗಿದ್ದು ಮಂಡಳಿಯ ಅಭಿಪ್ರಾಯದಲ್ಲಿ ಸಾಕಾಗಬಹುದಾದಷ್ಟು ಕಾರಣಗಳಿಲ್ಲದೇ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಬಿ) 10ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ; [1][ಅಥವಾ][1]

[1][(ಸಿ) ಸದಸ್ಯನಾಗಿ ಅವನು ಮುಂದುವರಿಯುವುದು ಮಂಡಲಿಯ ಹಿತಾಸಕ್ತಿಗೆ ಬಾಧಕವಾಗುತ್ತದೆನ್ನುವ ಹಾಗೆ ಅವನು ತನ್ನ ಸದಸ್ಯ ಪದವನ್ನು ದುರುಪಯೋಗಪಡಿಸಿ ಕೊಂಡಿದ್ದರೆ; ಅಥವಾ

(ಡಿ) ಸದಸ್ಯನಾಗಿ ಮುಂದುವರೆಯಲು ಅನ್ಯಥಾ ಅನರ್ಹನಾಗಿದ್ದರೆ][1]

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

– ರಾಜ್ಯ ಸರ್ಕಾರವು [1][ಅಂಥ ಸದಸ್ಯನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, ಯಾರೇ ಸದಸ್ಯನನ್ನು ಅವನಿಗೆ ವಿವರಣೆಯನ್ನು ನೀಡಲು ಅವಕಾಶವನ್ನು ಕೊಟ್ಟ ಹೊರತು (ಸಿ) ಖಂಡ ಅಥವಾ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.][1]

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**10. ಅನರ್ಹತೆ.**- (ಎ) ನೈತಿಕ ಅಧಃಪತನವನ್ನೊಳಗೊಳ್ಳುವ ಮತ್ತು ಮೂರು ತಿಂಗಳುಗಳಿಗೆ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾಗಬಹುದಾದ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿದ್ದರೆ ಮತ್ತು ಅಂಥ ಶಿಕ್ಷೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ ಅಥವಾ ಮಾಫೀ ಮಾಡಿರದಿದ್ದರೆ ಮತ್ತು ರಾಜ್ಯ ಸರ್ಕಾರವು ಈ ಮೂಲಕ ಈ ಸಂಬಂಧದಲ್ಲಿ ಮಾಡಲು ಸಶಕ್ತವಾಗಿರುವ ಒಂದು ಆದೇಶದ ಮೂಲಕ ಅವನನ್ನು ಅಂಥ ಶಿಕ್ಷೆ ಕಾರಣದಿಂದ ಉದ್ಭವಿಸುವ ಅನರ್ಹತೆಯಿಂದ ಮುಕ್ತಗೊಳಿಸಿರದಿದ್ದರೆ;

(ಬಿ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ;

(ಸಿ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ನ್ಯಾಯಾಲಯವು ಘೋಷಿಸಿದ್ದರೆ;

(ಡಿ) ಅವನ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಿದ್ದರೆ;

(ಇ) ಅವನು ಮಂಡಲಿಯ ಪೂರ್ಣಕಾಲಿಕ ಅಧಿಕಾರಿ ಅಥವಾ ನೌಕರನಾಗಿದ್ದರೆ

– ಮಂಡಳಿಯ ಸದಸ್ಯನಾಗಿ ಆಯ್ಕೆಗೊಳ್ಳಲು ಮತ್ತು ಸದಸ್ಯನಾಗಿರಲು ಅನರ್ಹನನ್ನಾಗಿ ಮಾಡತಕ್ಕದ್ದು.

**11. ವ್ಯವಹರಣೆಗಳ ಸಿಂಧುತ್ವ.**– ಯಾರೇ ವ್ಯಕ್ತಿಯನ್ನು ಸದಸ್ಯನಾಗಿ ಅಥವಾ ಅಧ್ಯಕ್ಷನಾಗಿ ಅಥವಾ ಸಭೆಯ ಅಧ್ಯಕ್ಷತೆ ವಹಿಸಬೇಕಾದ ವ್ಯಕ್ತಿಯಾಗಿ ಚುನಾಯಿಸುವಲ್ಲಿನ, ನಾಮನಿರ್ದೇಶನ ಮಾಡುವಲ್ಲಿನ ಅಥವಾ ನೇಮಕ ಮಾಡುವಲ್ಲಿನ ಯಾವುದೇ ಅನರ್ಹತೆ ಅಥವಾ ದೋಷವೇ ಅಂಥ ವ್ಯಕ್ತಿಯು ಪಾಲುಗೊಂಡಿರುವ ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಅಸಿಂಧುಗೊಳಿಸತಕ್ಕದ್ದಲ್ಲ.

**12. ಮಂಡಲಿಯ ಸಭೆಗಳ ಕಾಲ ಮತ್ತು ಸ್ಥಳ.**- ಮಂಡಲಿಯು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಪ್ರತಿಯೊಂದು ಸಭೆಯನ್ನು ಅಂಥ ರೀತಿಯಲ್ಲಿ ಕರೆಯತಕ್ಕದ್ದು:

ಪರಂತು, ಅಂಥ ವಿನಿಯಮಗಳನ್ನು ರಚಿಸುವವರೆಗೆ ಅಧ್ಯಕ್ಷನು ತಾನು ವಿಹಿತವೆಂದು ಭಾವಿಸುವಂಥ ಕಾಲ ಮತ್ತು ಸ್ಥಳದಲ್ಲಿ ಪ್ರತಿಯೊಬ್ಬ ಸದಸ್ಯನಿಗೆ ನೋಟೀಸನ್ನು ಸುತ್ತೋಲೆಯ ಮೂಲಕ ಕಳಿಸಿ ಮಂಡಳಿ ಸಭೆಯನ್ನು ಕರೆಯುವುದು ಕಾನೂನು ಸಮ್ಮತವಾಗಿರತಕ್ಕದ್ದು.

**13. ಮಂಡಲಿಯ ಸಭೆಗಳಲ್ಲಿನ ಪ್ರಕ್ರಿಯೆ.**- (1) ಅಧ್ಯಕ್ಷನು ಹಾಜರಿದ್ದರೆ ಅವನು ಮಂಡಲಿಯ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು. ಅಧ್ಯಕ್ಷನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಚುನಾಯಿಸತಕ್ಕದ್ದು.

(2) ಮಂಡಲಿಯ ಸಭೆಯಲ್ಲಿ ಎಲ್ಲ ವಿಷಯಗಳನ್ನು ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು.

(3) ಅಧ್ಯಕ್ಷನೂ ಸೇರಿದಂತೆ ಆರು ಸದಸ್ಯರಿದ್ದರೆ ಕೋರಂ ಆಗಿರತಕ್ಕದ್ದು.

(4) ಅಧ್ಯಕ್ಷನು ಅಥವಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಮತಗಳು ಸಮವಾಗಿದ್ದ ಸಂದರ್ಭದಲ್ಲಿ ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**14. ಮಂಡಲಿಯ ರಿಜಿಸ್ಟ್ರಾರ್ ಮತ್ತು ಇತರ ಉದ್ಯೋಗಿಗಳು.**- (1) ಮಂಡಲಿಯು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ರಿಜಿಸ್ಟ್ರಾರ್‌ನನ್ನು ನೇಮಕ ಮಾಡತಕ್ಕದ್ದು. ರಿಜಿಸ್ಟ್ರಾರನು ನಿಯಮಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು.

(2) ಮಂಡಲಿಯು ಕಾಲಕಾಲಕ್ಕೆ ಅವನಿಗೆ ರಜೆ ಕೊಡಬಹುದು ಮತ್ತು ಅವನ ರಜೆ ಅವಧಿಯಲ್ಲಿ ಅಥವಾ ಗೈರು ಹಾಜರಿಯಲ್ಲಿ ಅವನ ಸ್ಥಾನದಲ್ಲಿ ಕಾರ್ಯ ನಿರ್ವಹಿಸಲು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಒಬ್ಬ ವ್ಯಕ್ತಿಯನ್ನು ನೇಮಿಸಬಹುದು; ಪರಂತು ಅಂಥ ರಜಾ ಅವಧಿಯು ಎರಡು ತಿಂಗಳುಗಳನ್ನು ಮೀರದಿದ್ದರೆ, ಅಂಥ ರಜೆಯನ್ನು ಅಧ್ಯಕ್ಷನು ಮಂಜೂರು ಮಾಡಬಹುದು; ಮತ್ತು ಅಧ್ಯಕ್ಷನು, ಸದರಿ ಅವಧಿಯಲ್ಲಿ ಕಾರ್ಯ ನಿರ್ವಹಿಸಲು ಯಾರೇ ಇತರ ವ್ಯಕ್ತಿಯನ್ನು ತಾತ್ಕಾಲಿಕವಾಗಿ ನೇಮಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಆ ನೇಮಕಾತಿಯನ್ನು ವರದಿ ಮಾಡತಕ್ಕದ್ದು. ರಿಜಿಸ್ಟ್ರಾರನಾಗಿ ಕಾರ್ಯ ನಿರ್ವಹಿಸಲು ಕ್ರಮಬದ್ಧವಾಗಿ ನೇಮಕಗೊಂಡ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ರಿಜಿಸ್ಟ್ರಾರನಾಗಿರುವುದಾಗಿ ಭಾವಿಸತಕ್ಕದ್ದು.

(3) ರಿಜಿಸ್ಟ್ರಾರನ ಪದದಲ್ಲಿರುವ ಯಾರೇ ವ್ಯಕ್ತಿಯನ್ನು ಶಿಕ್ಷಿಸುವ ಅಥವಾ ತೆಗೆದುಹಾಕುವ ಮಂಡಲಿಯ ಪ್ರತಿಯೊಂದು ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(4) ಮಂಡಲಿಯು ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿಶೀಲಕರು ಮತ್ತು ಅವಶ್ಯವಾಗಬಹುದಾದಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡಬಹುದು.

(5) ಈ ಪ್ರಕರಣದ ಮೇರೆಗೆ ನೇಮಕಗೊಂಡ ರಿಜಿಸ್ಟ್ರಾರನನ್ನು ಮತ್ತು ಯಾರೇ ಇತರ ಅಧಿಕಾರಿ ಅಥವಾ ನೌಕರನನ್ನು, ಭಾರತದ ದಂಡ ಸಂಹಿತೆಯ 21ನೆಯ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

(6) ರಿಜಿಸ್ಟ್ರಾರನು ಮಂಡಲಿಯ ಕಾರ್ಯದರ್ಶಿ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು.

**15. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಮಂಡಲಿಯು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ನಿಯಮಿಸಬಹುದಾದಂಥ ಅಥವಾ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

## ಅಧ್ಯಾಯ – III

### ಪರೀಕ್ಷಕರ ಸಮಿತಿ

**16. ಪರೀಕ್ಷಕರ ಸಮಿತಿ.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪರೀಕ್ಷಕರ ಸಮಿತಿಯನ್ನು ರಚಿಸಬಹುದು, ಅದು ಅಧ್ಯಕ್ಷನೂ ಸೇರಿದಂತೆ ಈ ಕೆಳಕಂಡಂತೆ ಏಳು ಜನರನ್ನು ಒಳಗೊಂಡಿರತಕ್ಕದ್ದು:–

(i) [1][ಕರ್ನಾಟಕ ರಾಜ್ಯದ ಭಾರತೀಯ ಔಷಧ ಮತ್ತು ಹೋಮಿಯೋಪತಿ ಪದ್ಧತಿಗಳ ನಿರ್ದೇಶಕ][1] ನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು;

1. 1976ರ ಅಧಿನಿಯಮ ಸಂಖ್ಯೆ 8ರ ಮೂಲಕ 16.4.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಮಂಡಲಿಯ ಸದಸ್ಯರು ತಮ್ಮ ಪೈಕಿ ಚುನಾಯಿಸಿದ ಮೂವರು ವ್ಯಕ್ತಿಗಳು; ಮತ್ತು

(iii) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಗಳನ್ನು ಹೊಂದಿರುವ ಮೂವರು ವ್ಯಕ್ತಿಗಳು:

ಪರಂತು, (ii) ನೆಯ ಖಂಡದ ಮೇರೆಗೆ ಚುನಾಯಿತನಾದ ಪ್ರತಿಯೊಬ್ಬ ವ್ಯಕ್ತಿಯು ಮಂಡಲಿಯ ಸದಸ್ಯನಾಗಿರುವವರೆಗೆ ಮಾತ್ರ ಸಮಿತಿಯ ಸದಸ್ಯನಾಗಿ ಪದಧಾರಣ ಮಾಡಿರುವುದು ಮುಂದುವರೆಯತಕ್ಕದ್ದು:

ಮತ್ತೂ ಪರಂತು, ಮಂಡಲಿಯು ಮೊದಲ ಬಾರಿಗೆ ರಚಿತವಾದ ತರುವಾಯ ಅದು ಅಂಥ ವ್ಯಕ್ತಿಗಳನ್ನು ಚುನಾಯಿಸುವವರೆಗೆ ರಾಜ್ಯ ಸರ್ಕಾರವು, ನೋಂದಾಯಿತ ವೃತ್ತಿಗಾರರಾಗಿರತಕ್ಕ ಅಥವಾ ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕ ಮೂವರು ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡತಕ್ಕದ್ದು. ಹಾಗೆ ನಾಮ ನಿರ್ದೇಶಿತರಾದ ವ್ಯಕ್ತಿಗಳು, ಈ ಉಪಪ್ರಕರಣದ ಮೇರೆಗೆ ಮಂಡಲಿಯು ಎಲ್ಲ ಮೂವರು ವ್ಯಕ್ತಿಗಳನ್ನು ಚುನಾಯಿಸುವವರೆಗೆ ಪದಧಾರಣ ಮಾಡತಕ್ಕದ್ದು.

(2) ಸಮಿತಿಯ ಸದಸ್ಯರು ಎರಡು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(3) ಸಮಿತಿಯ ಸದಸ್ಯರ ಪದದಲ್ಲಿ ಉಂಟಾದ ಯಾವುದೇ ಖಾಲಿ ಸ್ಥಾನವನ್ನು ನಿಯಮಿಸಲಾದ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು ಮತ್ತು ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಯಾವನೇ ವ್ಯಕ್ತಿಯು, ಖಾಲಿ ಸ್ಥಾನ ಉಂಟಾಗಿರದಿದ್ದರೆ, ಯಾರ ಸ್ಥಾನದಲ್ಲಿ ಅವನು ಚುನಾಯಿತನಾಗಿರುವನೋ ಅಥವಾ ನಾಮ ನಿರ್ದೇಶಿತನಾಗಿರುವನೋ ಆ ವ್ಯಕ್ತಿಯು ಪದವನ್ನು ಧಾರಣ ಮಾಡಬಹುದಾಗಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(4) ಅಧ್ಯಕ್ಷನನ್ನು ಹೊರತುಪಡಿಸಿ ಸಮಿತಿಯ ಇತರ ಯಾರೇ ಸದಸ್ಯನು ಯಾವುದೇ ಕಾಲದಲ್ಲಿ ಅಧ್ಯಕ್ಷನಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು.

(5) ಪರೀಕ್ಷಕರನ್ನು ನೇಮಕ ಮಾಡುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು, ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಂಡಲಿಯ ಮೂಲಕ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವುದು, ಮತ್ತು ನಿಯಮಿಸಬಹುದಾದಂಥ ಇತರ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವುದು ಸಮಿತಿಯ ಕರ್ತವ್ಯವಾಗಿರತಕ್ಕದ್ದು.

(6) ಸಮಿತಿಯು ನಿಯಮಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಕೆಲಸದ ಬಗೆಗಿನ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ - IV

## ನೋಂದಣಿ

**17. ಮೊದಲನೇ ರಿಜಿಸ್ಟರನ್ನು ಸಿದ್ಧಪಡಿಸುವುದು.-** (1) ರಾಜ್ಯ ಸರ್ಕಾರವು, ಸಾಧ್ಯವಾದಷ್ಟು ಬೇಗನೇ ರಾಜ್ಯಕ್ಕಾಗಿ ಹೋಮಿಯೋಪತಿ ವೃತ್ತಿಗಾರರ ರಿಜಿಸ್ಟರನ್ನು ಸಿದ್ಧಪಡಿಸುವ ವ್ಯವಸ್ಥೆ ಮಾಡತಕ್ಕದ್ದು.

(2) ಆ ರಿಜಿಸ್ಟರು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು,

ಎಂದರೆ :-

(ಎ) ನೋಂದಾಯಿತ ವೃತ್ತಿಗಾರನ ಪೂರ್ಣ ಹೆಸರು, ರಾಷ್ಟ್ರೀಯತೆ ಮತ್ತು ನಿವಾಸದ ವಿಳಾಸ;

(ಬಿ) ರಿಜಿಸ್ಟರಿನಲ್ಲಿ ಅವನ ಮೊದಲ ಸೇರ್ಪಡೆಯ ದಿನಾಂಕ;

(ಸಿ) ನೋಂದಣಿಗೆ ಬೇಕಾದ ಅರ್ಹತೆ ಮತ್ತು ಹೋಮಿಯೋಪತಿಯಲ್ಲಿ ಅವನ ಪದವಿ ಅಥವಾ ಡಿಪ್ಲೊಮಾ ಯಾವುದಾದರೂ ಇದ್ದರೆ ಅದನ್ನು ಪಡೆದುಕೊಂಡಂಥ ದಿನಾಂಕ ಮತ್ತು ಅದನ್ನು ಪ್ರದಾನ ಮಾಡಿದ ಅಥವಾ ನೀಡಿದ ಪ್ರಾಧಿಕಾರ;

(ಡಿ) ಅವನ ವೃತ್ತಿಯ ವಿಳಾಸ; ಮತ್ತು

(ಇ) ನಿಯಮಿಸಬಹುದಾದಂಥ ಹೆಚ್ಚಿನ ವಿವರಗಳು.

(3) ರಿಜಿಸ್ಟರನ್ನು ಕೆಳಗೆ ಕಂಡಂತೆ ಮೂರು ಭಾಗಗಳಾಗಿ ವಿಂಗಡಿಸತಕ್ಕದ್ದು :-

(i) ಭಾಗ ಎ:- ಈ ಭಾಗವು,-

(ಎ) ಈ ಅಧ್ಯಾಯವು ಜಾರಿಗೆ ಬಂದ ದಿನಾಂಕದ ನಿಕಟಪೂರ್ವದ ಮತ್ತು ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ಹೋಮಿಯೋಪತಿ ಔಷಧದ ಪದ್ಧತಿಯ ವೃತ್ತಿಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಿರುವ ವ್ಯಕ್ತಿಗಳು;

(ಬಿ) ಒಳ ರೋಗಿಗಳನ್ನು ಇಟ್ಟಿರುವ ಮತ್ತು ಶಸ್ತ್ರಚಿಕಿತ್ಸೆ, ಸ್ತ್ರೀರೋಗ ಚಿಕಿತ್ಸೆ ಮತ್ತು ಪ್ರಸವ ಚಿಕಿತ್ಸೆ ಇವುಗಳ ಸೇವೆಗಳನ್ನು ಮತ್ತು ಹೋಮಿಯೋಪತಿ ಔಷಧ ಪದ್ಧತಿಯನ್ನು ಒಳಗೊಂಡಿರುವ ಆಸ್ಪತ್ರೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ವೈಯಕ್ತಿಕ ಚಿಕಿತ್ಸಾ ಶಿಕ್ಷಣವನ್ನು ಪಡೆದಿರುವ ಮತ್ತು ನೋಂದಣಿ ನ್ಯಾಯಾಧಿಕರಣವು ಅನುಮೋದಿಸಿದ ಸದರಿ ವಿಷಯಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವ್ಯಕ್ತಿಗಳು;

(ii) ಭಾಗ ಬಿ:- ಈ ಭಾಗವು, [1][ಕರ್ನಾಟಕ][1] ವೈದ್ಯಕೀಯ ನೋಂದಣಿ ಅಧಿನಿಯಮ, 1961 ಅಥವಾ [1][ಕರ್ನಾಟಕ][1] ಆಯುರ್ವೇದ ಮತ್ತು ಯುನಾನಿ ವೃತ್ತಿಗಾರರ ನೋಂದಣಿ ಮತ್ತು ವೈದ್ಯಕೀಯ ವೃತ್ತಿಗಾರರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 ಇವುಗಳ ಮೇರೆಗೆ ನೋಂದಾಯಿತರಾದ ಮತ್ತು ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಯನ್ನು ನಡೆಸುತ್ತಿರುವ ವೈದ್ಯಕೀಯ ವೃತ್ತಿಗಾರರನ್ನು ಒಳಗೊಳ್ಳತಕ್ಕದ್ದು; ಮತ್ತು

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(iii) ಭಾಗ ಸಿ:- ಈ ಅಧ್ಯಾಯವು, ಜಾರಿಗೆ ಬಂದ ದಿನಾಂಕದಂದು ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಯನ್ನು ಮುಖ್ಯ ವೃತ್ತಿಯಾಗಿ ನಡೆಸುತ್ತಿರುವ ಇತರ ವ್ಯಕ್ತಿಗಳು:

ಪರಂತು, ಸಿ ಭಾಗದಲ್ಲಿನ ವ್ಯಕ್ತಿಗಳ ಹೆಸರುಗಳ ನಮೂದುಗಳು ತಾತ್ಕಾಲಿಕವಾಗಿರತಕ್ಕದ್ದು ಮತ್ತು ಅವರ ಹೆಸರುಗಳನ್ನು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಎಲ್.ಸಿ.ಇ.ಎಚ್. ಡಿಪ್ಲೊಮಾದ ಭಾಗ I ಮತ್ತು II ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಮೂರನೆಯ ಮತ್ತು ಅಂತಿಮ ಪರೀಕ್ಷೆಯಲ್ಲಿ ಮಾತ್ರ, ಸದರಿ ದಿನಾಂಕದಿಂದ ಏಳು ವರ್ಷಗಳ ಅವಧಿಯೊಳಗೆ ಅವರು ಉತ್ತೀರ್ಣರಾದ ಹೊರತು, ರಿಜಿಸ್ಟರಿನಿಂದ ಅವರ ಹೆಸರುಗಳನ್ನು ತೆಗೆದುಹಾಕತಕ್ಕದ್ದು:

ಮತ್ತೂ ಪರಂತು, ಯಾರೇ ಅಂಥ ವ್ಯಕ್ತಿಯು ಮೇಲಿನ ಪರಂತುಕದಲ್ಲಿ ಉಲ್ಲೇಖಿಸಿದ ವಿಷಯಗಳಲ್ಲಿ ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಅಂಥ ವ್ಯಕ್ತಿಗಳ ಹೆಸರುಗಳ ನಮೂದುಗಳನ್ನು ರಿಜಿಸ್ಟರಿನ ಸಿ ಭಾಗದಿಂದ ಎ ಭಾಗಕ್ಕೆ ವರ್ಗಾಯಿಸತಕ್ಕದ್ದು.

**18. ನೋಂದಣಿ ನ್ಯಾಯಾಧಿಕರಣ.-** (1) ಮೊದಲನೆಯ ರಿಜಿಸ್ಟರನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಮೂವರು ವ್ಯಕ್ತಿಗಳನ್ನು ಒಳಗೊಂಡಿರುವ ನೋಂದಣಿ ನ್ಯಾಯಾಧಿಕರಣವನ್ನು ರಚಿಸಬಹುದು, ಅವರ ಪೈಕಿ ಇಬ್ಬರು ತಮ್ಮ ಹೆಸರುಗಳನ್ನು ಆ ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು ಹಕ್ಕುಳ್ಳವರಾಗಿರುವ ವ್ಯಕ್ತಿಗಳಾಗಿರತಕ್ಕದ್ದು ಮತ್ತು ಆ ನ್ಯಾಯಾಧಿಕರಣವು ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ನೋಂದಣಿಗಾಗಿ ನೋಂದಣಿ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಯಾವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸಲ್ಲಿಸತಕ್ಕುದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಅಂಥ ಅರ್ಜಿಯೊಂದಿಗೆ [1][ಮೂವತ್ತು][1] ರೂಪಾಯಿಗಳ ಫೀಜನ್ನು ಸಂದಾಯ ಮಾಡಿರತಕ್ಕದ್ದು.

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ನೋಂದಣಿ ನ್ಯಾಯಾಧಿಕರಣವು ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು ಪರೀಕ್ಷಿಸತಕ್ಕುದು ಮತ್ತು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ 17ನೆಯ ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿದಾರನು ಅರ್ಹನಾಗಿದ್ದನೆಂದು ಅದಕ್ಕೆ ಮನದಟ್ಟಾದರೆ ಅದು ರಿಜಿಸ್ಟರಿನ ಯಾವ ಭಾಗದಲ್ಲಿ ಅರ್ಜಿದಾರನು ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರುವನೋ ಆ ಭಾಗದಲ್ಲಿ ಅವನ ಹೆಸರನ್ನು ನಮೂದಿಸಲು ನಿರ್ದೇಶಿಸತಕ್ಕದ್ದು.

(4) ಹಾಗೆ ಸಿದ್ಧಪಡಿಸಿದ ರಿಜಿಸ್ಟರನ್ನು ಆ ತರುವಾಯ ರಾಜ್ಯ ಸರ್ಕಾರವು ನಿರ್ದೇಶಿಸ ಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಹಾಗೆ ಪ್ರಕಟಿಸಿದ ರಿಜಿಸ್ಟರಿನಲ್ಲಿ ವ್ಯಕ್ತವಾದ ಅಥವಾ ಇಂಗಿತವಾದ ನೋಂದಣಿ ನ್ಯಾಯಾಧಿಕರಣದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಆ ರಿಜಿಸ್ಟರನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಐದು ರೂಪಾಯಿಗಳ ಫೀಜನ್ನು ಸಂದಾಯ ಮಾಡಿ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(5) ಕಾರ್ಯದರ್ಶಿಯು, (4)ನೆಯ ಉಪಪ್ರಕರಣದ ಮೇರೆಗಿನ ರಾಜ್ಯ ಸರ್ಕಾರದ ತೀರ್ಮಾನಕ್ಕೆ ಅನುಸಾರವಾಗಿ ರಿಜಿಸ್ಟರನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತರುವಾಯ ರಿಜಿಸ್ಟರಿನಲ್ಲಿ ನಮೂದಿಸಿದ ಹೆಸರಿನ ಪ್ರತಿಯೊಬ್ಬ ವೃತ್ತಿಗಾರನಿಗೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ಕೊಡತಕ್ಕದ್ದು.

**19. ರಿಜಿಸ್ಟರಿನ ಅಭಿರಕ್ಷೆ.-** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಮೊದಲ ಬಾರಿಗೆ ಮಂಡಲಿಯನ್ನು ರಚಿಸಿದ ಮೇಲೆ, ರಿಜಿಸ್ಟರನ್ನು ಅದರ ಅಭಿರಕ್ಷೆಗೆ ಒಪ್ಪಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಮೊದಲನೆಯ ರಿಜಿಸ್ಟರಿನಲ್ಲಿ ನೋಂದಣಿಗಾಗಿ ಇರುವ ಅರ್ಜಿ ಫೀಜಿನ ಎಲ್ಲವನ್ನು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ಭಾಗವನ್ನು ಮಂಡಲಿಗೆ ಜಮಾ ಮಾಡುವಂತೆ ನಿರ್ದೇಶಿಸತಕ್ಕದ್ದು. ರಾಜ್ಯ ಸರ್ಕಾರವು ಮಂಡಲಿಯ ಅಭಿರಕ್ಷೆಗೆ ರಿಜಿಸ್ಟರನ್ನು ಒಪ್ಪಿಸಿದ ದಿನಾಂಕವನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(2) ಈ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗನುಸಾರವಾಗಿ ರಿಜಿಸ್ಟರನ್ನು ಇಡುವುದು ಮತ್ತು ಪರಿಷ್ಕರಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

**20. ತರುವಾಯದ ನೋಂದಣಿಗೆ ಅರ್ಹತೆಗಳು.-** 19ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಂಡಲಿಯ ರಚನೆಯ ತರುವಾಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅರ್ಹತೆಗಳನ್ನು ಅವನು ಹೊಂದಿದ್ದರೆ ಮಾತ್ರ [1][ಮೂವತ್ತು][1] ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ "ರಿಜಿಸ್ಟರಿನಲ್ಲಿ" ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**21. ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸುವುದಕ್ಕಾಗಿ ಮುಚ್ಚಳಿಕೆ ಕೊಡುವುದು.-** ಭಾರತೀಯ ವೈದ್ಯಕೀಯ ಪದವಿಗಳ ಅಧಿನಿಯಮ, 1916 ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956ರ ಮೇರೆಗೆ ಅಧಿಕೃತಗೊಳಿಸಿದ ನಿಕಾಯ ಅಥವಾ ಸಂಸ್ಥೆಯು ನೀಡಿದ ಯಾವುದೇ ಪದವಿ, ಡಿಪ್ಲೊಮಾ ಅಥವಾ ಲೈಸೆನ್ಸ್‌ನ ತದ್‌ರೂಪದ ಅಥವಾ ಅದರ ಕೃತಕ ಅನುಕರಣವಾದಂಥ ಯಾವುದೇ ಪದವಿ, ಡಿಪ್ಲೊಮಾ ಅಥವಾ ಲೈಸೆನ್ಸನ್ನು ಅವನು ಬಳಸುವುದಿಲ್ಲವೆಂದು ಲಿಖಿತದಲ್ಲಿ ಅವನು ಮುಚ್ಚಳಿಕೆಯನ್ನು ನೀಡಿದ್ದ ಹೊರತು ಯಾರೇ ವೃತ್ತಿಗಾರನ ಹೆಸರನ್ನು ಮೊದಲನೇ ರಿಜಿಸ್ಟರಿನಲ್ಲಿ ಅಥವಾ 19ನೇ ಪ್ರಕರಣದ ಮೇರೆಗೆ ನಿರ್ವಹಿಸಲಾದ ರಿಜಿಸ್ಟರಿನಲ್ಲಿ, ನಮೂದು ಮಾಡತಕ್ಕದ್ದಲ್ಲ. ಅಂಥ ವ್ಯಕ್ತಿಗಳು ತಮ್ಮ ಹೆಸರಿನ ಮುಂದೆ ಪೂರ್ಣವಾಗಿ "ನೋಂದಾಯಿತ ಹೋಮಿಯೋಪತಿ ವೃತ್ತಿಗಾರ" ಎಂಬ ಪದವನ್ನು ರಿಜಿಸ್ಟರಿನಲ್ಲಿ ತಮ್ಮ ಹೆಸರನ್ನು ನಮೂದಿಸಲಾಗಿದೆ ಎಂಬುದನ್ನು ಸೂಚಿಸಲು ಬಳಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**22. ರಿಜಿಸ್ಟರಿನ ನಿರ್ವಹಣೆ.-** (1) ಈ ಅಧಿನಿಯಮದ ಉಪಬಂಧಗಳು, ನಿಯಮಗಳು ಮತ್ತು ಮಂಡಲಿಯ ಆದೇಶಗಳು - ಇವುಗಳಿಗೆ ಅನುಸಾರವಾಗಿ ರಿಜಿಸ್ಟರಿನಲ್ಲಿ ನಮೂದುಗಳನ್ನು ಮಾಡುವುದು, ಕಾಲಕಾಲಕ್ಕೆ ಅದನ್ನು ಪರಿಷ್ಕರಿಸುವುದು ಮತ್ತು ನೋಂದಣಿ ಪ್ರಮಾಣ ಪತ್ರಗಳನ್ನು ನೀಡುವುದು ರಿಜಿಸ್ಟ್ರಾರನ ಕರ್ತವ್ಯವಾಗಿರತಕ್ಕದ್ದು.

(2) ಮರಣ ಹೊಂದಿದ ನೋಂದಾಯಿತ ವೃತ್ತಿಗಾರರ ಹೆಸರುಗಳನ್ನು ಅಥವಾ 23ನೇ ಪ್ರಕರಣದ ಮೇರೆಗೆ ಯಾರ ಹೆಸರುಗಳನ್ನು ರಿಜಿಸ್ಟರಿನಿಂದ ತೆಗೆದುಹಾಕಬೇಕೆಂದು ನಿರ್ದೇಶಿ ಸಲಾಗಿದೆಯೋ ಆ ನೋಂದಾಯಿತ ವೃತ್ತಿಗಾರರ ಹೆಸರುಗಳನ್ನು ಅದರಿಂದ ತೆಗೆದುಹಾಕತಕ್ಕದ್ದು.

(3) ಹೆಚ್ಚಿನ ಅರ್ಹತೆಗಳ ಸಂಬಂಧದಲ್ಲಿ ನಮೂನೆಗಳಲ್ಲಿನ ಯಾವುದೇ ಮಾರ್ಪಾಟನ್ನು ನಿಯಮಿಸಬಹುದಾದಂಥ ಫೀಜನ್ನು ಮಾಡಿರದಿದ್ದರೆ ಸಂದಾಯ ಮಾಡತಕ್ಕದಲ್ಲವೆಂದು ಮಂಡಲಿಯು ನಿರ್ದೇಶಿಸಬಹುದು.

**23. ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು.-** (1) ಮಂಡಲಿಯ ಅಭಿಪ್ರಾಯದಲ್ಲಿ ಯಾರೇ ವ್ಯಕ್ತಿಯು ತನ್ನ ವೃತ್ತಿಯನ್ನು ನಡೆಸಲು ಅನರ್ಹವಾಗಿಸಲು, ಸಾಕಷ್ಟಾಗ ಬಹುದಾದಂಥ ನೈತಿಕ ಚಾರಿತ್ರ್ಯದ ನ್ಯೂನತೆಯನ್ನು ಬಹಿರಂಗ ಪಡಿಸುವಂಥ ದಂಡ ಪ್ರಕ್ರಿಯಾ ಸಂಹಿತೆ, 1898 (ಕೇಂದ್ರ ಅಧಿನಿಯಮ 1898ರ V) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಪರಿಭಾಷಿಸಿದಂತೆ ಸಂಜ್ಞೇಯ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ ಕ್ರಮಬದ್ಧವಾದ ವಿಚಾರಣೆಯ ತರುವಾಯ, ಮಂಡಲಿಯ ಅಭಿಪ್ರಾಯದಲ್ಲಿ ವೃತ್ತಿಗೆ ಸಂಬಂಧಿಸಿದಂತೆ ಹೇಯವಾದಂಥ ನಡತೆಯ ತಪ್ಪಿತಸ್ಥನೆಂದು ಕಂಡುಬಂದಿರುವ ಯಾರೇ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕತಕ್ಕದ್ದೆಂದು ಮಂಡಳಿಯು ನಿರ್ದೇಶಿಸಬಹುದು. ಹಾಗೆ ತೆಗೆದುಹಾಕಿದ ಮೇಲೆ, ವೃತ್ತಿಗಾರನಿಗೆ ನೀಡಿದ ನೋಂದಣಿ ಪ್ರಮಾಣ ಪತ್ರವು ರದ್ದಾಗಿರುವುದಾಗಿ ಭಾವಿಸತಕ್ಕದ್ದು. ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ಮತ್ತು ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ, ಹಾಗೆ ತೆಗೆದುಹಾಕಲಾದ ವೃತ್ತಿಗಾರನ ಹೆಸರನ್ನು ರಿಜಿಸ್ಟರಿನಲ್ಲಿ ಪುನಃ ನಮೂದಿಸತಕ್ಕದ್ದೆಂದು ಮಂಡಳಿಯು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಬೇಕೆಂದು ನಿರ್ದೇಶಿಸುವ ಮಂಡಳಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶವನ್ನು ತನಗೆ ತಿಳಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ರಾಜ್ಯ ಸರ್ಕಾರವು ಅದರ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು.

(3) [1][ಕರ್ನಾಟಕ][1] ವೈದ್ಯಕೀಯ ನೋಂದಣಿ ಅಧಿನಿಯಮ, 1961 ಅಥವಾ [1][ಕರ್ನಾಟಕ][1] ಆಯುರ್ವೇದ ಮತ್ತು ಯುನಾನಿ ವೃತ್ತಿಗಾರ ನೋಂದಣಿ ಮತ್ತು ವೈದ್ಯಕೀಯ ವೃತ್ತಿಗಾರರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961ರ ಮೇರೆಗೆ ಇಟ್ಟಿರುವ ರಿಜಿಸ್ಟರಿನಲ್ಲಿ ವೃತ್ತಿಗಾರನ ಹೆಸರನ್ನು ನಮೂದು ಮಾಡಲಾಗಿದ್ದರೆ ಸದರಿ ರಿಜಿಸ್ಟರನ್ನು ಇಡಲು ಹಕ್ಕುಳ್ಳ ಪ್ರಾಧಿಕಾರಕ್ಕೆ ಹಾಗೆ ತೆಗೆದುಹಾಕುವುದಕ್ಕೆ ಸೂಚನೆಯನ್ನು ಕೊಡುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 2.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**24. ನವೀಕರಣ ಫೀಜು.-** (1) 18 ಅಥವಾ 20ನೇ ಪ್ರಕರಣದಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ನೋಂದಾಯಿತ ವೃತ್ತಿಗಾರನು ಪ್ರತಿ ವರ್ಷದ ಡಿಸೆಂಬರಿನ ಮೂವತ್ತೊಂದನೇ ದಿವಸದಂದು ಅಥವಾ ಅದಕ್ಕೆ ಮುಂಚೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಮುಂದುವರಿಸಲು ಮಂಡಲಿಗೆ [1][ಹತ್ತು][1] ರೂಪಾಯಿಗಳ ನವೀಕರಣ ಫೀಜನ್ನು ಸಂದಾಯ ಮಾಡತಕ್ಕದ್ದು.

1. 1979ರ ಅಧಿನಿಯಮ ಸಂಖ್ಯೆ 34ರ ಮೂಲಕ 6.11.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ನವೀಕರಣದ ಫೀಜನ್ನು ನಿಗದಿತ ದಿನಾಂಕಕ್ಕಿಂತ ಮುಂಚೆ ಸಂದಾಯ ಮಾಡದಿದ್ದರೆ, ರಿಜಿಸ್ಟ್ರಾರನು ಹಾಗೆ ಸಂದಾಯ ಮಾಡಲು ತಪ್ಪಿದವನ ಹೆಸರನ್ನು ರಿಜಿಸ್ಟರಿನಿಂದ ತೆಗೆದು ಹಾಕತಕ್ಕದ್ದು. ಹಾಗೆ ತೆಗೆದುಹಾಕಿದ ಮೇಲೆ, ಆ ವೃತ್ತಿಗಾರನಿಗೆ ನೀಡಿರುವ ನೋಂದಣಿ ಪ್ರಮಾಣ ಪತ್ರವು ರದ್ದಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, ಹಾಗೆ ತೆಗೆದುಹಾಕಲಾದ ಹೆಸರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತಿಗೊಳಪಟ್ಟು ನವೀಕರಣ ಫೀಜನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟರಿನಲ್ಲಿ ಪುನಃ ನಮೂದಿಸಬಹುದು ಮತ್ತು ಹೊಸ ನೋಂದಣಿ ಪ್ರಮಾಣ ಪತ್ರವನ್ನು ಪುನಃ ನೀಡಬಹುದು.

**25. ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗಾರರು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ,-

(i) "ಕಾನೂನು ಸಮ್ಮತವಾಗಿ ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗಾರ" ಅಥವಾ "ಕ್ರಮಬದ್ಧವಾಗಿ ಅರ್ಹತೆಯನ್ನು ಪಡೆದ ವೈದ್ಯಕೀಯ ವೃತ್ತಿಗಾರ" ಎಂಬ ಪದಗಳು ಅಥವಾ ವೈದ್ಯಕೀಯ ವೃತ್ತಿಗಾರ ಅಥವಾ

ವೈದ್ಯಕೀಯ ವೃತ್ತಿಯ ಸದಸ್ಯನೆಂದು ಕಾನೂನಿನ ಮೂಲಕ ಮನ್ನಣೆ ಪಡೆದ ವ್ಯಕ್ತಿಯೆಂದು ಅರ್ಥ ಕೊಡುವ ಯಾವುದೇ ಪದವು [1][ಕರ್ನಾಟಕ ರಾಜ್ಯ][1] ದಲ್ಲಿನ ವಿಧಾನ ಮಂಡಲದ ಎಲ್ಲ ಅಧಿನಿಯಮಗಳಲ್ಲಿ, ಮತ್ತು ಸಂವಿಧಾನದ VIIನೇ ಅನುಸೂಚಿಯ IIನೇ ಪಟ್ಟಿ ಅಥವಾ IIIನೇ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಅಧಿನಿಯಮಗಳಲ್ಲಿ [1][ಕರ್ನಾಟಕ ರಾಜ್ಯ][1]ಕ್ಕೆ ಅಂಥ ಅಧಿನಿಯಮಗಳು ಅನ್ವಯವಾಗುವಷ್ಟರ ಮಟ್ಟಿಗೆ ರಿಜಿಸ್ಟರಿನ 'ಎ' ಭಾಗ ಅಥವಾ 'ಬಿ' ಭಾಗದಲ್ಲಿ ನಮೂದಾಗಿರುವ ಹೆಸರಿನ ವೃತ್ತಿಗಾರನನ್ನು ಒಳಗೊಳ್ಳತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 2.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ii) ಯಾರೇ ವೈದ್ಯಕೀಯ ವೃತ್ತಿಗಾರನಿಂದ ಅಥವಾ ವೈದ್ಯಾಧಿಕಾರಿಯಿಂದ ಯಾವುದೇ ಅಧಿನಿಯಮದ ಮೂಲಕ ಅಗತ್ಯಪಡಿಸಿದ ಪ್ರಮಾಣ ಪತ್ರವು, ರಿಜಿಸ್ಟರಿನ ಎ ಭಾಗ ಅಥವಾ ಬಿ ಭಾಗದಲ್ಲಿ ತನ್ನ ಹೆಸರು ನಮೂದಾಗಿರುವ ವೃತ್ತಿಗಾರನು ಅಂಥ ಪ್ರಮಾಣ ಪತ್ರಕ್ಕೆ ರುಜು ಮಾಡಿದ್ದರೆ ಅದು ಸಿಂಧುವಾಗತಕ್ಕದ್ದು.

(iii) ರಿಜಿಸ್ಟರಿನ ಎ ಭಾಗ ಅಥವಾ ಬಿ ಭಾಗದಲ್ಲಿ ತನ್ನ ಹೆಸರು ನಮೂದಾಗಿರುವ ವೃತ್ತಿಗಾರನು ಹೋಮಿಯೋಪತಿ ಔಷಧದ ಪದ್ಧತಿಗೆ ಅನುಸಾರವಾಗಿ ರೋಗಿಗಳನ್ನು ಉಪಚರಿಸಲು ಅರ್ಹನಾಗಿರತಕ್ಕದ್ದು ಅಥವಾ ರಾಜ್ಯ ಸರ್ಕಾರದಿಂದ ಪೋಷಿತವಾದ ಅಥವಾ ಅನುದಾನವನ್ನು ಸ್ವೀಕರಿಸುತ್ತಿರುವ ಮತ್ತು ಹೋಮಿಯೋಪತಿ ಔಷಧ ಪದ್ಧತಿಗೆ ಅನುಸಾರವಾಗಿ ರೋಗಿಗಳನ್ನು ಉಪಚರಿಸುತ್ತಿರುವ ಯಾವುದೇ ಹೋಮಿಯೋಪತಿ ಔಷಧಾಲಯ, ಆಸ್ಪತ್ರೆ ಅಥವಾ ರೋಗ ಚಿಕಿತ್ಸಾಲಯದಲ್ಲಿ ಅಥವಾ ಅಂಥ ಔಷಧ ಪದ್ಧತಿಯೊಂದಿಗೆ ವ್ಯವಹರಿಸುತ್ತಿರುವ ಯಾವುದೇ ಸಾರ್ವಜನಿಕ ಕಾರ್ಯ ಸಂಸ್ಥೆ, ನಿಕಾಯ ಅಥವಾ ಸಂಸ್ಥೆಯಲ್ಲಿ ವೈದ್ಯ ಅಥವಾ ಇತರ ವೈದ್ಯಕೀಯ ಅಧಿಕಾರಿಯಾಗಿ ಯಾವುದೇ ನೇಮಕಾತಿಯನ್ನು ಹೊಂದಲು ಅರ್ಹನಾಗಿರತಕ್ಕದ್ದು.

(iv) ರಿಜಿಸ್ಟರಿನ ಎ ಭಾಗದಲ್ಲಿ ತನ್ನ ಹೆಸರು ನಮೂದಾಗಿರುವ ವೃತ್ತಿಗಾರನು ಹೋಮಿಯೋಪತಿ ಔಷಧ ಚಿಕಿತ್ಸಾ ಪದ್ಧತಿಗೆ ಸಂಬಂಧಪಟ್ಟ ಔಷಧಿಗಳನ್ನು ಮಾತ್ರ ಹೊಂದಿರಬಹುದು ಮತ್ತು ಅವುಗಳನ್ನು ಸೂಚಿಸಬಹುದು.

**26. ಮರಣದ ಬಗ್ಗೆ ನೋಟೀಸು.–** ಪ್ರತಿಯೊಬ್ಬ ರಿಜಿಸ್ಟ್ರಾರ್ ಆಫ್‌ಡೆತ್ಸ್‌ನೂ ನೋಂದಾಯಿತ ವೃತ್ತಿಗಾರನ ಮರಣದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ಮೇಲೆ ಕೂಡಲೇ ರಿಜಿಸ್ಟ್ರಾರನಿಗೆ ಅಂಚೆ ಮೂಲಕ ಮರಣದ ಕಾಲ ಮತ್ತು ಸ್ಥಳದ ವಿವರಗಳೊಂದಿಗೆ ಅಂಥ ಮರಣದ ಪ್ರಮಾಣ ಪತ್ರವನ್ನು ತನ್ನ ಸಹಿಯೊಂದಿಗೆ ರವಾನಿಸತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರದ ಮತ್ತು ರವಾನೆಯ ಖರ್ಚನ್ನು ತನ್ನ ಕಚೇರಿಯ ವೆಚ್ಚಕ್ಕೆ ಹಾಕಬಹುದು.

## ಅಧ್ಯಾಯ - V

## ಅಧ್ಯಯನ ಕ್ರಮ, ಅರ್ಹತಾದಾಯಕ ಪರೀಕ್ಷೆಗಳು ಮತ್ತು ಸಂಸ್ಥೆಗಳಿಗೆ ಮನ್ನಣೆ

**27. ಅಧ್ಯಯನ ಕ್ರಮ ಮತ್ತು ಅರ್ಹತಾ ಪರೀಕ್ಷೆಗಳು.–** (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನ ಕ್ರಮ ಮತ್ತು ಪರೀಕ್ಷೆಗಳು ಮತ್ತು ಮಂಡಲಿಯ ಶಿಫಾರಸಿನ ಮೇಲೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ಸೇರಿಸಬಹುದಾದಂಥ ಇತರೆ ಅಧ್ಯಯನ ಕ್ರಮ ಮತ್ತು ಪರೀಕ್ಷೆಗಳು, ಈ ಅಧಿನಿಯಮದ ಮೇರೆಗೆ ನೋಂದಣಿಯ ಹಕ್ಕನ್ನು ಪ್ರದಾನ ಮಾಡುವ ಡಿಪ್ಲೊಮಾ ಅಥವಾ ಪದವಿಯನ್ನು ನೀಡುವ ಉದ್ದೇಶಕ್ಕಾಗಿ ನಡೆಸುವ ಅಧ್ಯಯನ ಕ್ರಮ ಮತ್ತು ಅರ್ಹತಾ ಪರೀಕ್ಷೆಗಳು ಆಗಿರತಕ್ಕದ್ದು.

(2) ಮಂಡಲಿಯು ಹೋಮಿಯೋಪತಿ ಔಷಧ ಪದ್ಧತಿಯಲ್ಲಿ ಶಿಕ್ಷಣ ಕೊಡಲು ಅಥವಾ ಅದರಲ್ಲಿ ಪರೀಕ್ಷೆಗಳನ್ನು ನಡೆಸಲು ಸಂಸ್ಥೆಗಳ ಮನ್ನಣೆಗಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

(3) (i) ಈ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನ ಕ್ರಮದ ಪ್ರತಿಯೊಂದು ವಿಷಯದಲ್ಲಿ ಶಿಕ್ಷಣದ ಸಾಕಷ್ಟು ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದನ್ನು ಖಾತ್ರಿ ಮಾಡಿಕೊಳ್ಳುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು, ಮತ್ತು ಅಂಥ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವ ಉದ್ದೇಶಗಳಿಗಾಗಿ ಅಂಥ ಶಿಕ್ಷಣವನ್ನು ಕೊಡುತ್ತಿರುವ ಆಡಳಿತ ಮಂಡಲಿ ಅಥವಾ ಯಾವುದೇ ಸಂಸ್ಥೆಯ ಪ್ರಾಧಿಕಾರಗಳನ್ನು,–

(ಎ) ಶಿಕ್ಷಣದ ವಿವರಗಳ ಬಗ್ಗೆ ಮಂಡಲಿಯು ಅಗತ್ಯಪಡಿಸಬಹುದಾದಂಥ ವಿವರಗಳನ್ನು ಒದಗಿಸುವಂತೆ;

(ಬಿ) ಆ ಸಂಸ್ಥೆಯನ್ನು ಪರಿಶೀಲಿಸಲು ಪರಿಶೀಲಕರಿಗೆ ಅನುಮತಿಸುವಂತೆ ಕೋರಲು ಮಂಡಲಿಗೆ ಅಧಿಕಾರವಿರತಕ್ಕದ್ದು;

(ii) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ಅರ್ಹತಾದಾಯಕ ಪರೀಕ್ಷೆಯಲ್ಲಿ ಸಾಕಷ್ಟು ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದನ್ನು ಖಾತ್ರಿ ಮಾಡಿಕೊಳ್ಳುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು

ಮತ್ತು ಅಂಥ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮಂಡಲಿಯು ಆಡಳಿತ ಮಂಡಲಿಯನ್ನು ಅಥವಾ ಯಾವುದೇ ಅಂಥ ಪರೀಕ್ಷೆಯನ್ನು ನಡೆಸಲು ಅಧಿಕೃತಗೊಂಡ ಯಾವುದೇ ಸಂಸ್ಥೆಯ ಪ್ರಾಧಿಕಾರಿಗಳನ್ನು,-

(ಎ) ಅಂಥ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಂಡಲಿಯು ಅಗತ್ಯಪಡಿಸಬಹುದಾದಂಥ ವಿವರಗಳನ್ನು ಒದಗಿಸುವಂತೆ;

(ಬಿ) ಪರೀಕ್ಷೆಗಳಲ್ಲಿ ಪರೀಶೀಲಕರು ಹಾಜರಿರಲು ಅನುಮತಿಸುವಂತೆ ಮತ್ತು ಕೇಳಲಾದ ಪ್ರಶ್ನೆಗಳ ಸ್ವರೂಪ, ಮತ್ತು ಅಂಕಗಳನ್ನು ಕೊಡುವ ಗುಣಮಟ್ಟ ಮತ್ತು ಮಂಡಲಿಗೆ ಅಗತ್ಯವಾಗಬಹುದಾದಂಥ ಇತರ ವಿವರಗಳ ಬಗ್ಗೆ ವರದಿ ಮಾಡುವಂತೆ ಕೋರಲು ಮಂಡಲಿಗೆ ಅಧಿಕಾರವಿರತಕ್ಕದ್ದು.

(4) 28ನೇ ಪ್ರಕರಣದ ಮೇರೆಗೆ ಮನ್ನಣೆ ಪಡೆದ ಎಲ್ಲ ಸಂಸ್ಥೆಗಳನ್ನೂ ಎರಡು ವರ್ಷಗಳಲ್ಲಿ ಕನಿಷ್ಠ ಪಕ್ಷ ಒಮ್ಮೆಯಾದರೂ ಪರೀಶೀಲಿಸುವುದು ಸಹ ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

**28. ಸಂಸ್ಥೆಗಳಿಗೆ ಮನ್ನಣೆ.-** (1) ಈ ಅಧಿನಿಯಮದ ಮೇರೆಗೆ ಮನ್ನಣೆಗಾಗಿ ಅರ್ಜಿ ಸಲ್ಲಿಸುವ ಯಾವುದೇ ಸಂಸ್ಥೆಯು ರಿಜಿಸ್ಟ್ರಾರನಿಗೆ ಅರ್ಜಿಯನ್ನು ಕಳುಹಿಸತಕ್ಕದ್ದು ಮತ್ತು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಪೂರ್ಣ ಮಾಹಿತಿಯನ್ನು ಕೊಡತಕ್ಕದ್ದು:-

(ಎ) ಆಡಳಿತ ಅಥವಾ ವ್ಯವಸ್ಥಾಪನಾ ಮಂಡಲಿಯ ರಚನೆ ಮತ್ತು ಸಿಬ್ಬಂದಿ;

(ಬಿ) ಯಾವ ವಿಷಯಗಳು ಮತ್ತು ಅಧ್ಯಯನ ಕ್ರಮದಲ್ಲಿ ಅದು ಶಿಕ್ಷಣವನ್ನು ಕೊಡುತ್ತದೆಯೋ ಅಥವಾ ಕೊಡಲು ಉದ್ದೇಶಿಸಿದೆಯೋ ಆ ವಿಷಯಗಳು ಮತ್ತು ಅಧ್ಯಯನ ಕ್ರಮಗಳು;

(ಸಿ) ಯಾವ ವಿದ್ಯಾರ್ಥಿಗಳಿಗಾಗಿ ಸ್ಥಳಾವಕಾಶ, ಸಾಧನ ಸಾಮಗ್ರಿ ಮತ್ತು ವ್ಯವಸ್ಥೆಯನ್ನು ಮಾಡಲಾಗಿದೆಯೋ ಅಥವಾ ಮಾಡಲು ಉದ್ದೇಶಿಸಲಾಗಿದೆಯೋ, ಆ ವಿದ್ಯಾರ್ಥಿಗಳ ಸಂಖ್ಯೆ;

(ಡಿ) ಸಿಬ್ಬಂದಿ ವರ್ಗದ ಸಂಖ್ಯಾಬಲ: ಅವರ ಅರ್ಹತೆಗಳು ಮತ್ತು ಸಂಬಳಗಳು ಹಾಗೂ ಅವರು ಮಾಡಿದ ಸಂಶೋಧನಾ ಕೆಲಸ;

(ಇ) ವಿಧಿಸಲಾದ ಅಥವಾ ವಿಧಿಸಲು ಉದ್ದೇಶಿಸಿದ ಫೀಜುಗಳು, ಮತ್ತು ಕಟ್ಟಡಗಳು ಹಾಗೂ ಸಾಧನ ಸಾಮಗ್ರಿಗಳ ಮೇಲೆ ಬಂಡವಾಳ ವೆಚ್ಚಕ್ಕಾಗಿ ಮತ್ತು ಸಂಸ್ಥೆಯ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯಕ್ಕಾಗಿ ಮಾಡಿರುವ ಹಣಕಾಸಿನ ವ್ಯವಸ್ಥೆ.

(2) ಅರ್ಹತಾದಾಯಕ ಪರೀಕ್ಷೆಗಳನ್ನು ನಡೆಸಲು ಮನ್ನಣೆಗಾಗಿ ಅರ್ಜಿ ಸಲ್ಲಿಸುವ ಯಾವುದೇ ಸಂಸ್ಥೆಯು ರಿಜಿಸ್ಟ್ರಾರನಿಗೆ ಅರ್ಜಿಯನ್ನು ಕಳುಹಿಸತಕ್ಕದ್ದು ಮತ್ತು (1)ನೇ ಉಪಪ್ರಕರಣದ (ಬಿ) ಯಿಂದ (ಇ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿವರಗಳಿಗೆ ಸಂಬಂಧಿಸಿದಂತೆ ಪೂರ್ಣ ಮಾಹಿತಿಯನ್ನು ಮತ್ತು ಮಂಡಲಿಯು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ಕೊಡತಕ್ಕದ್ದು.

(3) ರಿಜಿಸ್ಟ್ರಾರನು ಅರ್ಜಿಯನ್ನು ಮಂಡಲಿಯ ಮುಂದೆ ಇಡತಕ್ಕದ್ದು ಮತ್ತು ಮಂಡಲಿಯು ತಾನು ಅವಶ್ಯವೆಂದು ಭಾವಿಸಬಹುದಾದಂಥ ಯಾವುದೇ ಇನ್ನೂ ಹೆಚ್ಚಿನ ಮಾಹಿತಿಗಾಗಿ ಕೋರಲು ರಿಜಿಸ್ಟ್ರಾರನಿಗೆ ನಿರ್ದೇಶಿಸಬಹುದು. ಮಂಡಲಿಯು ಈ ಬಗ್ಗೆ ಅದು ಅಧಿಕೃತಗೊಳಿಸಿದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳು ಸ್ಥಳೀಯ ವಿಚಾರಣೆಯನ್ನು ಮಾಡಲು ಸಹ ನಿರ್ದೇಶಿಸಬಹುದು.

(4) ಅಂಥ ಸ್ಥಳೀಯ ವಿಚಾರಣೆಯ ವರದಿಯನ್ನು ದಾಖಲು ಮಾಡಿದ ತರುವಾಯ ಮತ್ತು ಅವಶ್ಯವಾಗಬಹುದಾದಂಥ ಇನ್ನು ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮಂಡಲಿಯು, ಕೋರಲಾದ ಮನ್ನಣೆಯನ್ನು ಕೊಡಬಹುದೇ ಅಥವಾ ಕೊಡಬಾರದೇ ಎಂಬ ಬಗ್ಗೆ ತನ್ನ ಅಭಿಪ್ರಾಯವನ್ನು ನಿರೂಪಿಸಿದ ವರದಿಯೊಂದಿಗೆ ಅರ್ಜಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ಆ ತರುವಾಯ ಮನ್ನಣೆಯನ್ನು ಮಂಜೂರು ಮಾಡಬಹುದು ಅಥವಾ ಅದನ್ನು ನಿರಾಕರಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಷರತ್ತುಗಳಿಗೆ ಒಳಪಟ್ಟು ಅದನ್ನು ಮಂಜೂರು ಮಾಡಬಹುದು ಮತ್ತು ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**29. ಅರ್ಹತಾದಾಯಕ ಪರೀಕ್ಷೆಗಳನ್ನು ನಡೆಸಲು ಅಧಿಕೃತಗೊಳಿಸಿದ ಸಂಸ್ಥೆಯ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು.-** ಮಂಡಲಿಯ ವರದಿಯ ಮೇಲೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ, ಯಾವುದೇ ಮನ್ನಣೆ ಪಡೆದ ಸಂಸ್ಥೆಯಲ್ಲಿ ಕೊಡುತ್ತಿರುವ ಶಿಕ್ಷಣವು ಅಥವಾ ಅರ್ಹತಾದಾಯಕ ಪರೀಕ್ಷೆಗಳನ್ನು ನಡೆಸಲು ಮನ್ನಣೆ ಪಡೆದ ಯಾವುದೇ ಸಂಸ್ಥೆಯು ನಡೆಸುತ್ತಿರುವ ಅಂಥ ಪರೀಕ್ಷೆಗಳು, ಶಸ್ತ್ರಚಿಕಿತ್ಸೆ ಮತ್ತು ಪ್ರಸವ ಚಿಕಿತ್ಸೆ ಮತ್ತು ಹೋಮಿಯೋಪತಿ ಔಷಧ ವೃತ್ತಿಯನ್ನು ನಡೆಸುವುದಕ್ಕಾಗಿನ ಸಾಕಷ್ಟು ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದನ್ನು ಖಾತ್ರಿಗೊಳಿಸುವಷ್ಟಿಲ್ಲವೆಂದು ಕಂಡುಬಂದರೆ 27ನೇ ಪ್ರಕರಣದ ಮೇರೆಗೆ ಶಿಕ್ಷಣವನ್ನು ನೀಡುವ

ಅಥವಾ ಪರೀಕ್ಷೆಯನ್ನು ನಡೆಸುವ ಉದ್ದೇಶಕ್ಕಾಗಿ ನೀಡಲಾದ ಯಾವುದೇ ಸಂಸ್ಥೆಯ ಮನ್ನಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದೆಂದು ಮತ್ತು ಸಂದರ್ಭಾನುಸಾರ ಶಿಕ್ಷಣವನ್ನು ಕೊಡಲು ಅಥವಾ ಪರೀಕ್ಷೆಯನ್ನು ನಡೆಸಲು ಸದರಿ ಸಂಸ್ಥೆಯನ್ನು ಅಧಿಕೃತಗೊಳಿಸತಕ್ಕುದಲ್ಲವೆಂದು ರಾಜ್ಯ ಸರ್ಕಾರವು, ಕಾಲಕಾಲಕ್ಕೆ ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಸಂಸ್ಥೆಯ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದಕ್ಕಾಗಿನ ಯಾವುದೇ ನಿರ್ದೇಶನವನ್ನು ಮಾಡುವುದಕ್ಕೆ ಮುಂಚೆ ಆ ದೋಷವನ್ನು ಪರಿಹರಿಸಲು, ರಾಜ್ಯ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಕ್ರಮಗಳನ್ನು ಕೈಗೊಳ್ಳಲು ಸದರಿ ಸಂಸ್ಥೆಯನ್ನು ಅಗತ್ಯಪಡಿಸತಕ್ಕದ್ದು.

**30. ಅನುಸೂಚಿಯ ಬದಲಾವಣೆ.**- ಮಂಡಲಿಯ ವರದಿಯ ಮೇಲೆ ಅಥವಾ ಅನ್ಯಥಾ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನ ಕ್ರಮದಲ್ಲಿ ಅಥವಾ ಪರೀಕ್ಷೆಗಳಲ್ಲಿ ಯಾವುದನ್ನಾದರೂ ಸೇರಿಸುವ ಅಥವಾ ಬದಲಾಯಿಸುವ ಮೂಲಕ, ಅನುಸೂಚಿಯನ್ನು ಮಾರ್ಪಾಟು ಮಾಡುವುದು ಅವಶ್ಯ ಅಥವಾ ವಿಹಿತವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ರಾಜ್ಯ ಸರ್ಕಾರವು ಮಂಡಲಿಯು ವರದಿಯನ್ನು ಈಗಾಗಲೇ ಸಲ್ಲಿಸಿಲ್ಲದಿದ್ದರೆ ಅದರ ವರದಿಯನ್ನು ತರಿಸಿಕೊಂಡ ತರುವಾಯ ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ, ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ಸೇರಿಸಬಹುದು ಅಥವಾ ಬದಲಾವಣೆಯನ್ನು ಮಾಡಬಹುದು ಮತ್ತು ಹಾಗೆ ಸೇರಿಸಿದ ಅಥವಾ ಬದಲಾವಣೆ ಮಾಡಿದ ಮೇಲೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಅನುಸೂಚಿಯನ್ನು ಹಾಗೆ ಮಾರ್ಪಾಡು ಮಾಡಿರುವುದಾಗಿ ಭಾವಿಸತಕ್ಕದ್ದು.

## ಅಧ್ಯಾಯ - VI

### ಸಂಕೀರ್ಣ

**31. ಮರಣ ವಿಚಾರಣೆ, ಇತ್ಯಾದಿಗಳ ಸಂಬಂಧದಲ್ಲಿ ಸೇವೆ ಸಲ್ಲಿಸುವುದರಿಂದ ವಿನಾಯಿತಿ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಪ್ರತಿಯೊಬ್ಬ ನೋಂದಾಯಿತ ವೃತ್ತಿಗಾರನಿಗೆ, ದಂಡ ಪ್ರಕ್ರಿಯಾ ಸಂಹಿತೆ, 1898ರ (ಕೇಂದ್ರ ಅಧಿನಿಯಮ 1898ರ V) ಮೇರೆಗೆ ಮರಣ-ವಿಚಾರಣೆ ಸಂಬಂಧದಲ್ಲಿ ಅಥವಾ ಜ್ಯೂರಿ ಸದಸ್ಯನಾಗಿ ಸೇವೆ ಸಲ್ಲಿಸುವುದರಿಂದ ವಿನಾಯಿತಿ ಪಡೆಯಲು ಅವನು ಇಚ್ಛಿಸಿದರೆ, ವಿನಾಯಿತಿ ಕೊಡತಕ್ಕದ್ದು.

**32. ಸದಸ್ಯರಿಗೆ ಫೀಜುಗಳು ಮತ್ತು ಭತ್ಯೆಗಳು.**- ಮಂಡಲಿಯ ಮತ್ತು ಸಮಿತಿಯ ಸದಸ್ಯರಿಗೆ ಕಾಲಕಾಲಕ್ಕೆ ನಿಯಮಿಸತಕ್ಕ ಹಾಜರಾತಿ ಫೀಜುಗಳು ಮತ್ತು ಭತ್ಯೆಗಳನ್ನು ಮತ್ತು ಅಂಥ ಯುಕ್ತ ಪ್ರಯಾಣ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**33. ಮಂಡಲಿಯ ಆದಾಯ ಮತ್ತು ವೆಚ್ಚಗಳು.**- (1) ಮಂಡಲಿಯ ಆದಾಯವು,-

(ಎ) ವೃತ್ತಿಗಾರರು ಮತ್ತು ಪರೀಕ್ಷಾರ್ಥಿಗಳಿಂದ ಸ್ವೀಕರಿಸಿದ ಫೀಜುಗಳು;

(ಬಿ) ಸಮಿತಿಯು ಸಂಗ್ರಹಿಸಿದ ಫೀಜುಗಳು ಯಾವುವಾದರೂ ಇದ್ದರೆ ಅವು;

(ಸಿ) ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳು;

(ಡಿ) ಮಂಡಲಿಯು ಸ್ವೀಕರಿಸಿದ ದೇಣಿಗೆಗಳು ಮತ್ತು ಇತರ ಮೊತ್ತಗಳು

- ಇವುಗಳನ್ನು ಒಳಗೊಳ್ಳತಕ್ಕದ್ದು.

(2) ಮಂಡಲಿಯ ವೆಚ್ಚಗಳಲ್ಲಿ, ರಿಜಿಸ್ಟ್ರಾರನ, ಪರಿಶೀಲಕರೂ ಸೇರಿದಂತೆ ಮಂಡಲಿಯು ನೇಮಕ ಮಾಡಿದ ಸಿಬ್ಬಂದಿಯ ಸಂಬಳಗಳು ಮತ್ತು ಭತ್ಯೆಗಳು ಮತ್ತು ಮಂಡಲಿ ಮತ್ತು ಸಮಿತಿಯ ಸದಸ್ಯರಿಗೆ ಸಂದಾಯ ಮಾಡಿದ ಫೀಜುಗಳು ಮತ್ತು ಭತ್ಯೆಗಳು, ಪರೀಕ್ಷೆಗಳನ್ನು ನಡೆಸುವ ವೆಚ್ಚಗಳು ಹಾಗೂ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಿರುವಂಥ ಇತರ ವೆಚ್ಚಗಳು ಒಳಗೊಳ್ಳತಕ್ಕದ್ದು. ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಆಲೋಚಿಸುವಂಥ ಇತರ ವೆಚ್ಚಗಳನ್ನು ಸಮಿತಿಗೆ ಸಂದಾಯ ಮಾಡಲು ಸಹ ಮಂಡಲಿಗೆ ನಿರ್ದೇಶಿಸಬಹುದು.

**34. ವೃತ್ತಿಗಾರರ ಪಟ್ಟಿಯ ಪ್ರಕಟಣೆ.**- (1) ರಿಜಿಸ್ಟ್ರಾರನು, ಪ್ರತಿವರ್ಷ ಜೂನ್ ತಿಂಗಳ ಮೂವತ್ತನೆಯ ದಿವಸದಂದು ಅಥವಾ ಅದಕ್ಕೆ ಮುಂಚೆ ರಾಜಪತ್ರದಲ್ಲಿ ಆ ವರ್ಷದ ಜನವರಿ ಮೊದಲನೆಯ ದಿವಸದಂದು ರಿಜಿಸ್ಟರಿನಲ್ಲಿ ನಮೂದಿಸಿರುವ ಎಲ್ಲ ವೃತ್ತಿಗಾರರ ಹೆಸರುಗಳು ಮತ್ತು ಅರ್ಹತೆಗಳ ಸರಿಯಾದ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಪಟ್ಟಿಯ ಒಂದು ಪ್ರತಿಯು, ಅದರಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿತರಾಗಿರುವುದರ ಬಗ್ಗೆ ಎಲ್ಲ ನ್ಯಾಯಾಲಯಗಳು ಮತ್ತು ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿರತಕ್ಕದ್ದು; ಮತ್ತು ಅಂಥ ಪ್ರತಿಯಲ್ಲಿ ಯಾರೇ ವ್ಯಕ್ತಿಯ ಹೆಸರು ಇಲ್ಲದಿರುವಲ್ಲಿ ತದ್ವಿರುದ್ಧವಾದುದು ರುಜುವಾತು ಆಗುವವರೆಗೆ, ಅಂಥ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿತನಾಗಿಲ್ಲವೆಂಬುದರ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು:

ಪರಂತು, ಅಂಥ ಪ್ರತಿಯಲ್ಲಿ ಯಾರೇ ವ್ಯಕ್ತಿಯ ಹೆಸರಿಲ್ಲದಿರುವ ಸಂದರ್ಭದಲ್ಲಿ ರಿಜಿಸ್ಟರಿನಲ್ಲಿ ಅಂಥ ವ್ಯಕ್ತಿಯ ಹೆಸರಿನ ನಮೂದಿನ ಬಗ್ಗೆ ರಿಜಿಸ್ಟ್ರಾರನ ಸಹಿಯುಳ್ಳ ಪ್ರಮಾಣಿತ ಪ್ರತಿಯು, ಅಂಥ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೋಂದಾಯಿತನಾಗಿರುವನೆಂಬ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

**35. ನಿಯಮಗಳು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಯಾವುದೇ ವಿಷಯಕ್ಕಾಗಿ ನಿಯಮಗಳನ್ನು ರಚಿಸಬಹುದು.–

(ಎ) [1][* * * * *][1] 5ನೆಯ ಪ್ರಕರಣದ ಮೇರೆಗೆ ಚುನಾವಣೆಯನ್ನು ನಡೆಸತಕ್ಕ ರೀತಿ;

1. 1972ರ ಅಧಿನಿಯಮ ಸಂಖ್ಯೆ 14ರ ಮೂಲಕ 11.10.1972 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) 7ನೆಯ ಪ್ರಕರಣದ ಮೇರೆಗೆ ಖಾಲಿ ಸ್ಥಾನಗಳನ್ನು ಭರ್ತಿ ಮಾಡತಕ್ಕ ರೀತಿ;

(ಸಿ) 14ನೆಯ ಪ್ರಕರಣದ ಮೇರೆಗೆ ರಿಜಿಸ್ಟ್ರಾರನ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಡಿ) 15ನೆಯ ಪ್ರಕರಣದ ಮೇರೆಗೆ ಮಂಡಲಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನೆರವೇರಿಸಬೇಕಾದ ಪ್ರಕಾರ್ಯಗಳು;

(ಇ) (3)ನೆಯ ಉಪಪ್ರಕರಣದ ಮೇರೆಗೆ ಖಾಲಿ ಸ್ಥಾನವನ್ನು ಭರ್ತಿ ಮಾಡುವ ರೀತಿ, (5)ನೆಯ ಉಪಪ್ರಕರಣದ ಮೇರೆಗೆ ಸಮಿತಿಯು ನೆರವೇರಿಸಬೇಕಾದ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಮತ್ತು ಸಭೆಯ ಕಾಲ ಮತ್ತು ಸ್ಥಳ ಮತ್ತು 16ನೆಯ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಅದರ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯ ವಿಧಾನ;

(ಎಫ್) 17ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ರಿಜಿಸ್ಟರಿನಲ್ಲಿ ನಮೂದಿಸಬೇಕಾದ ವಿವರಗಳು;

(ಜಿ) (3)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ಮಾಡುವ ರೀತಿ ಮತ್ತು 18ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗಿನ ಪ್ರಮಾಣ ಪತ್ರದ ನಮೂನೆ;

(ಎಚ್) 22ನೆಯ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಹೆಚ್ಚಿನ ಅರ್ಹತೆಗೆ ಸಂಬಂಧಿಸಿದಂತೆ ನಮೂದುಗಳನ್ನು ಬದಲಾಯಿಸುವುದಕ್ಕಾಗಿ ವಿಧಿಸಬಹುದಾದ ಫೀಜು;

(ಐ) ನವೀಕರಣ ಫೀಜನ್ನು ಸಂದಾಯ ಮಾಡುವ ರೀತಿ ಮತ್ತು 24ನೇ ಪ್ರಕರಣದ (2)ನೆಯ ಉಪಪ್ರಕರಣದ ಪರಂತುಕದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಫೀಜನ್ನು ಸಂದಾಯ ಮಾಡತಕ್ಕದ್ದೋ ಆ ಷರತ್ತುಗಳು;

(ಜೆ) 32ನೇ ಪ್ರಕರಣದ ಮೇರೆಗೆ ಮಂಡಲಿ ಮತ್ತು ಸಮಿತಿಯ ಸದಸ್ಯರ ಫೀಜುಗಳು ಮತ್ತು ಇತರ ಭತ್ಯೆಗಳು; ಮತ್ತು

(ಕೆ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸ ಬಹುದಾದಂಥ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕುದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು

ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು, ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಿಲ್ಲದೇ ಇರತಕ್ಕದ್ದು.

**36. ವಿನಿಯಮಗಳು.**- (1) ಮಂಡಲಿಯು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಮುಂದಿನ ಯಾವುದೇ ವಿಷಯಕ್ಕಾಗಿ ಈ ಅಧಿನಿಯಮ ಅಥವಾ ನಿಯಮಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) 12ನೇ ಪ್ರಕರಣದ ಮೇರೆಗೆ ಮಂಡಲಿಯು ತನ್ನ ಸಭೆಗಳನ್ನು ನಡೆಸತಕ್ಕ ಕಾಲ ಮತ್ತು ಸ್ಥಳ ಮತ್ತು ರೀತಿ;

(ಬಿ) ರಿಜಿಸ್ಟ್ರಾರನನ್ನು ಹೊರತುಪಡಿಸಿ 14ನೇ ಪ್ರಕರಣದ ಮೇರೆಗೆ ಮಂಡಲಿಯ ಮತ್ತು ಸಮಿತಿಯ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಸಿ) ಪರೀಕ್ಷೆಗಳನ್ನು ನಡೆಸತಕ್ಕ ಮತ್ತು ಶಿಕ್ಷಣವನ್ನು ಕೊಡತಕ್ಕ ಭಾಷೆ;

(ಡಿ) ವಿವರವಾದ ಪಠ್ಯ ವಿಷಯ, ಉಪನ್ಯಾಸಗಳ ಸಂಖ್ಯೆ ಮತ್ತು ಪ್ರತಿಯೊಂದು ವಿಷಯದಲ್ಲಿ ಪ್ರಾಯೋಗಿಕ ಮತ್ತು ಚಿಕಿತ್ಸಕ ಅಧ್ಯಯನ ಕ್ರಮಗಳಿಗೆ ಮೀಸಲಿಟ್ಟ ವ್ಯಾಸಂಗದ ಅವಧಿ ಮತ್ತು ಪಠ್ಯ ಪುಸ್ತಕಗಳ ಬಗ್ಗೆ ಶಿಫಾರಸ್ಸುಗಳೇನಾದರೂ ಇದ್ದರೆ ಅದು;

(ಇ) ಪರೀಕ್ಷಕರ ನೇಮಕಾತಿ ಷರತ್ತುಗಳು ಮತ್ತು ಅವರಿಗೆ ಸಂದಾಯ ಮಾಡಬೇಕಾದ ಫೀಜುಗಳು, ಪರೀಕ್ಷೆಗಳನ್ನು ನಡೆಸುವುದು ಮತ್ತು ಅಂಥ ಪರೀಕ್ಷೆಗಳನ್ನು ನಡೆಸಲು ವಿಧಿಸಬೇಕಾದ ಫೀಜುಗಳು;

(ಎಫ್) ನಿಯಮಗಳ ಮೂಲಕ ನಿಯಮಿಸಿಲ್ಲದ, ಆದರೆ ಈ ಅಧಿನಿಯಮದ ಉದ್ದೇಶವನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅವಶ್ಯವಿರುವ ಎಲ್ಲ ಇತರ ವಿಷಯಗಳು:

ಪರಂತು, ಮಂಡಲಿಯು (ಬಿ), (ಸಿ), (ಡಿ), (ಇ) ಅಥವಾ (ಎಫ್) ಖಂಡಗಳ ಮೇರೆಗೆ ಯಾವುದೇ ವಿನಿಯಮವನ್ನು ಪ್ರಸ್ತಾವಿಸುವುದಕ್ಕೆ ಮುಂಚೆ ಸಮಿತಿಯೊಡನೆ ಸಮಾಲೋಚಿಸತಕ್ಕದ್ದು ಮತ್ತು ಯಾವುದೇ ಅಂಥ ವಿನಿಯಮಕ್ಕೆ ಸಂಬಂಧಿಸಿದಂತೆ ಮಂಡಲಿ ಮತ್ತು ಸಮಿತಿಯ ನಡುವಣ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಮಂಡಲಿಯು, ಆ ವಿನಿಯಮವನ್ನು ರಾಜ್ಯ ಸರ್ಕಾರಕ್ಕೆ ಮಂಜೂರಾತಿಗಾಗಿ ಒಪ್ಪಿಸುವಲ್ಲಿ ಅಂಥ ಭಿನ್ನಾಭಿಪ್ರಾಯದ ಕಾರಣಗಳನ್ನು ವರದಿ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು ಕರಡು ವಿನಿಯಮಗಳನ್ನು ಸ್ವೀಕರಿಸಿದ ಮೇಲೆ ಅವುಗಳಿಗೆ ಒಪ್ಪಿಗೆ ಕೊಡಬಹುದು ಅಥವಾ ಒಪ್ಪಿಗೆ ಕೊಡಲು ನಿರಾಕರಿಸಬಹುದು ಅಥವಾ ತಾನು ಸೂಕ್ತವೆಂದು ಆಲೋಚಿಸುವಂಥ ಮಾರ್ಪಾಟುಗಳಿಗೆ ಒಳಪಟ್ಟು ಒಪ್ಪಿಗೆ ಕೊಡಬಹುದು ಅಥವಾ ಇನ್ನೂ ಹೆಚ್ಚಿನ ಪರ್ಯಾಲೋಚನೆಗಾಗಿ ಮಂಡಲಿಗೆ ಅವುಗಳನ್ನು ಹಿಂತಿರುಗಿಸಬಹುದು.

(3) ಎಲ್ಲ ವಿನಿಯಮಗಳಿಗೆ ಮಾರ್ಪಾಟು ಸಹಿತ ಅಥವಾ ಮಾರ್ಪಾಟಿಲ್ಲದೇ ಒಪ್ಪಿಗೆ ಕೊಟ್ಟಾಗ ಅವುಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ವಿನಿಯಮವನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ರದ್ದುಪಡಿಸುವುದು ಅಥವಾ ಬದಲಾಯಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**37. ರಾಜ್ಯ ಸರ್ಕಾರದ ನಿಯಂತ್ರಣ.**- (1) ರಾಜ್ಯ ಸರ್ಕಾರಕ್ಕೆ ಯಾವುದೇ ಕಾಲದಲ್ಲಿ ಮಂಡಲಿಯು ಈ ಅಧಿನಿಯಮದ ಮೂಲಕ ಅಥವಾ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸಲು ತಪ್ಪಿದೆ ಅಥವಾ ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದಾನ ಮಾಡಿದ ಯಾವುದೇ ಕರ್ತವ್ಯಗಳನ್ನು ನೆರವೇರಿಸಲು ತಪ್ಪಿದೆಯೆಂದು ಕಂಡುಬಂದರೆ ರಾಜ್ಯ ಸರ್ಕಾರವು ಅಂಥ ತಪ್ಪುವಿಕೆ, ಮೀರುವಿಕೆ ಅಥವಾ ದುರುಪಯೋಗವು ಗಂಭೀರ ಸ್ವರೂಪದ್ದೆಂದು ಅದು ಪರಿಗಣಿಸಿದರೆ ಅದರ ವಿವರಗಳನ್ನು ಮಂಡಲಿಗೆ ತಿಳಿಸಬಹುದು, ಮತ್ತು ಮಂಡಲಿಯು, ಅಂಥ ತಪ್ಪುವಿಕೆ, ಮೀರುವಿಕೆ ಅಥವಾ ದುರುಪಯೋಗವನ್ನು ರಾಜ್ಯ ಸರ್ಕಾರವು ಈ ಬಗ್ಗೆ ನಿಗದಿಪಡಿಸಬಹುದಾದಂಥ ಕಾಲದೊಳಗೆ ಪರಿಹರಿಸಲು ತಪ್ಪಿದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಮಂಡಲಿಯನ್ನು ವಿಸರ್ಜಿಸಬಹುದು ಮತ್ತು ಮಂಡಲಿಯ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಅಥವಾ ಕರ್ತವ್ಯವನ್ನು ಅದು ಸೂಕ್ತವೆಂದು ಆಲೋಚಿಸಬಹುದಾದಂಥ ವ್ಯಕ್ತಿಯು ಎರಡು ವರ್ಷಗಳಿಗೆ ಮೀರದಂಥ

ಅವಧಿಗಾಗಿ ಚಲಾಯಿಸುವಂತೆ ಮತ್ತು ನೆರವೇರಿಸುವಂತೆ ಮಾಡಬಹುದು ಮತ್ತು ಹೊಸ ಮಂಡಲಿಯನ್ನು ರಚಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಈ ಅಧಿನಿಯಮ, ನಿಯಮಗಳು ಅಥವಾ ವಿನಿಯಮಗಳಲ್ಲಿ ಏನೇ ಇದ್ದರೂ, ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರಕ್ಕೆ ಮಂಡಲಿ ಅಥವಾ ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಶಕ್ತಗೊಳಿಸಿದ ಯಾವುದೇ ಇತರ ಪ್ರಾಧಿಕಾರವು ಸಿಂಧುವಾಗಿ ರಚಿತವಾಗಿಲ್ಲ ಅಥವಾ ನೇಮಕಗೊಂಡಿಲ್ಲವೆಂದು ಕಂಡುಬಂದರೆ ರಾಜ್ಯ ಸರ್ಕಾರವು ಅಂಥ ಯಾವುದೇ ಅಧಿಕಾರ ಅಥವಾ ಪ್ರಕಾರ್ಯವನ್ನು ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಆಲೋಚಿಸುವಂಥ ವ್ಯಕ್ತಿಯು ಅಂಥ ರೀತಿಯಲ್ಲಿ ಮತ್ತು ಆರು ತಿಂಗಳುಗಳಿಗೆ ಮೀರದಂಥ ಅವಧಿಗಾಗಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಚಲಾಯಿಸುವಂತೆ ಅಥವಾ ನೆರವೇರಿಸುವಂತೆ ಅಧಿಸೂಚನೆ ಮೂಲಕ ನಿರ್ದೇಶಿಸಬಹುದು.

[1][**37ಎ. ಮಂಡಲಿಯನ್ನು ರಚಿಸದೇ ಇರುವಾಗ ಉಪಬಂಧ.**- ಈ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಮೊದಲ ಬಾರಿಗೆ ಮಂಡಲಿಯನ್ನು ರಚಿಸುವವರೆಗೆ, ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡಿದ, [2][ಕರ್ನಾಟಕ ರಾಜ್ಯದ ಭಾರತೀಯ ಔಷಧ ಮತ್ತು ಹೋಮಿಯೋಪತಿ ಪದ್ಧತಿಗಳ ನಿರ್ದೇಶಕನನ್ನು][2] ಅಧ್ಯಕ್ಷನನ್ನಾಗಿ ಮತ್ತು ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ನಮೂದಿಸಿಕೊಳ್ಳಲು ಅರ್ಹರಾದ ವೃತ್ತಿಗಾರರಾಗಿರತಕ್ಕ ನಾಲ್ವರು ಸದಸ್ಯರನ್ನು ಒಳಗೊಂಡ ಸಮಿತಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.][1]

1. 1969ರ ಅಧಿನಿಯಮ ಸಂಖ್ಯೆ 9ರ ಮೂಲಕ 24.4.1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1976ರ ಅಧಿನಿಯಮ ಸಂಖ್ಯೆ 8ರ ಮೂಲಕ 16.4.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**38. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.**- ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ಸಮಿತಿಗೆ ಅಥವಾ ರಿಜಿಸ್ಟ್ರಾರ್‌ಗೆ ಅಥವಾ ರಾಜ್ಯ ಸರ್ಕಾರದ, ಮಂಡಲಿಯ ಅಥವಾ ಸಮಿತಿಯ ನಿರ್ದೇಶನದ ಮೇರೆಗೆ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಮಾಡಿದ ಯಾವುದೇ ಕಾರ್ಯವನ್ನು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**39. ನಿರಸನ.**- [1][ಬೆಳಗಾವಿ ಪ್ರದೇಶದಲ್ಲಿ][1] ಜಾರಿಯಲ್ಲಿರುವ ಮುಂಬಯಿ ಹೋಮಿಯೋಪತಿ ಅಧಿನಿಯಮ, 1951 (ಮುಂಬಯಿ ಅಧಿನಿಯಮ 1951ರ XLVIII)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅನುಸೂಚಿ

## (27ನೇ ಪ್ರಕರಣ)

## I. ಅಧ್ಯಯನ ಕ್ರಮಗಳು

[1][**1. ಎಫ್.ಸಿ.ಇ.ಎಚ್.**- (ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961 ಅಥವಾ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿಗಾರರ ನೋಂದಣಿ ಮತ್ತು ವೃತ್ತಿಗಾರರ ಸಂಕೀರ್ಣದ ಉಪಬಂಧಗಳ ಅಧಿನಿಯಮ, 1961 ಇವುಗಳ ಮೇರೆಗೆ ನೋಂದಾಯಿತರಾದವರಿಗಾಗಿ.)

**ಅಧ್ಯಯನದ ಅವಧಿ.**- ಒಂದು ವರ್ಷ.

**ವಿಷಯಗಳು.**- ಹೋಮಿಯೋಪತಿ ಚಿಕಿತ್ಸಾ ಶಾಸ್ತ್ರ, ಸಂಗ್ರಹಾಲಯ, ಔಷಧಾಲಯ ಮತ್ತು ವಿತರಣೆ - ಇವುಗಳನ್ನು ಒಳಗೊಂಡ, ಹೋಮಿಯೋಪತಿ ತತ್ವ, ಹೋಮಿಯೋಪತಿ ಔಷಧ ವಸ್ತುಶಾಸ್ತ್ರ, ದೀರ್ಘಕಾಲಿಕ ಸೋಂಕು, ಹೋಮಿಯೋಪತಿ ಅಭಿವೃದ್ಧಿ ಮತ್ತು ಅದರಲ್ಲಿ ಸಂಶೋಧನೆ.

**ಪರೀಕ್ಷೆ.**- ಮೂರು ಗಂಟೆಗಳ ಅವಧಿಯ ನಾಲ್ಕು ಪ್ರಶ್ನೆಪತ್ರಿಕೆಗಳು ಮತ್ತು ಚಿಕಿತ್ಸಾ, ಪ್ರಾಯೋಗಿಕ ಮತ್ತು ಮೌಖಿಕ ಪರೀಕ್ಷೆ.

**ಪ್ರಶ್ನೆ ಪತ್ರಿಕೆ I.**- ಜ್ಞಾನ ಸಾಧನ, ಹೋಮಿಯೋಪತಿ ತತ್ವ, ದೀರ್ಘಕಾಲಿಕ ಸೋಂಕು.

**ಪ್ರಶ್ನೆ ಪತ್ರಿಕೆ II.**- ಹೋಮಿಯೋಪತಿ ಔಷಧ ವಸ್ತು ಶಾಸ್ತ್ರ, ಔಷಧಾಲಯ ಮತ್ತು ವಿತರಣೆ.

**ಪ್ರಶ್ನೆ ಪತ್ರಿಕೆ III.**- ಚಿಕಿತ್ಸಾ ಶಾಸ್ತ್ರ, ಸಂಗ್ರಹಣೆ ಮತ್ತು ರೋಗ ಪ್ರಕರಣ ನಿರ್ವಹಣೆ.

**ಪ್ರಶ್ನೆ ಪತ್ರಿಕೆ IV.-** ವೈಜ್ಞಾನಿಕ ವಿಧಾನ ಮತ್ತು ಹೋಮಿಯೋಪತಿ ಅಭಿವೃದ್ಧಿ ಮತ್ತು ಅದರಲ್ಲಿ ಸಂಶೋಧನೆ.

**2. ಬಿ.ಎಚ್.ಎಂ.ಎಸ್.-** ಬ್ಯಾಚುಲರ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ.

ಮೇಲ್ಕಂಡ ಅಧ್ಯಯನಗಳಿಗಾಗಿ ಅಸ್ತಿತ್ವದಲ್ಲಿರುವ ಕೇಂದ್ರ ಪರಿಷತ್ತಿನ ಪಠ್ಯ ವಿಷಯಗಳು ಅನ್ವಯವಾಗತಕ್ಕದ್ದು ಮತ್ತು ಆ ಪಠ್ಯ ವಿಷಯಗಳಿಗೆ ಯಾವುದೇ ತಿದ್ದುಪಡಿಯನ್ನು ಹೊರಡಿಸಿದಾಗಲೆಲ್ಲಾ ಆ ಮೇರೆಗೆ ಅನ್ವಯವಾಗತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ. ಹೆಚ್‌ಎಫ್‌ಡಬ್ಲ್ಯು 44 ಐಎಂಇ 87 ದಿನಾಂಕ: 12.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

## II. ಅರ್ಹತಾದಾಯಕ ಪರೀಕ್ಷೆಗಳು

ಲೈಸೆನ್ಸಿಯೇಟ್ ಆಫ್ ದಿ ಕೋರ್ಟ್ ಆಫ್ ಎಕ್ಸಾಮಿನರ್ಸ್ ಇನ್ ಹೋಮಿಯೋಪತಿ (ಎಲ್.ಸಿ.ಇ.ಎಚ್).

ಗ್ರಾಜ್ಯುಯೇಟ್ ಆಫ್ ದಿ ಕೋರ್ಟ್ ಆಫ್ ಎಕ್ಸಾಮಿನರ್ಸ್ ಇನ್ ಹೋಮಿಯೋಪತಿ (ಜಿ.ಸಿ.ಇ.ಎಚ್).

ಫೆಲೋ ಆಫ್ ದಿ ಕೋರ್ಟ್ ಆಫ್ ಎಕ್ಸ್ಯಾಮಿನರ್ಸ್ ಇನ್ ಹೋಮಿಯೋಪತಿ (ಎಫ್.ಸಿ.ಇ.ಎಚ್).

[1][ಡಿಪ್ಲೊಮಾ ಇನ್ ಮೆಡಿಸಿನ್ ಅಂಡ್ ಸರ್ಜರಿ ಡಿ.ಎಂ.ಎಸ್. ಪಶ್ಚಿಮ ಬಂಗಾಳ.

ಡಿಪ್ಲೊಮಾ ಇನ್ ಹೋಮಿಯೋಪತಿ ಮೆಡಿಸಿನ್ ಡಿ.ಎಚ್.ಎಂ. ಆಂಧ್ರಪ್ರದೇಶ.

ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ ಡಿ.ಎಚ್.ಎಂ. ಕೇರಳ.

ಲೈಸೆನ್ಸ್‌ಯೇಟ್ ಸರ್ಟಿಫಿಕೇಟ್ ಆಫ್ ಎಕ್ಸಾಮಿನೇಷನ್ ಇನ್ ಹೋಮಿಯೋಪತಿ ಎಲ್.ಸಿ.ಇ.ಎಚ್. ಮಹಾರಾಷ್ಟ್ರ][1]

1. ಅಧಿಸೂಚನೆ ಸಂಖ್ಯೆ. ಎಚ್‌ಎಂಎ 303 ಪಿಬಿಎಂ 72 ಇದರ ಮೂಲಕ 18.8.72 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

### [1][ಎ. ಭಾರತದ ವಿಶ್ವವಿದ್ಯಾನಿಲಯಗಳು, ಮಂಡಲಿಗಳು, ಅಥವಾ ವೈದ್ಯಕೀಯ ಸಂಸ್ಥೆಗಳು ಮನ್ನಣೆ ನೀಡಿದ ಹೋಮಿಯೋಪತಿ ವೈದ್ಯಕೀಯ ಅರ್ಹತೆಗಳು.

1. ಅಧಿಸೂಚನೆ ಸಂಖ್ಯೆ: ಎಸ್.ಓ. 274 ದಿನಾಂಕ: 11.10.1974ರ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

| **ವಿಶ್ವವಿದ್ಯಾನಿಲಯ, ಮಂಡಲಿ ಅಥವಾ ವೈದ್ಯಕೀಯ ಸಂಸ್ಥೆಯ ಹೆಸರು** | **ಮನ್ನಣೆ ಪಡೆದ ವೈದ್ಯಕೀಯ ಅರ್ಹತೆ** | **ನೋಂದಣಿಗಾಗಿ ಸಂಕ್ಷಿಪ್ತ ರೂಪ** | **ಷರಾ** |
|---|---|---|---|
| 1 | 2 | 3 | 4 |
| 1. ಡಾ: ಗುರುರಾಜು ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಗುಡಿವಾಡ. | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಡಿ.ಎಚ್.ಎಂ.ಎಸ್. | 1970ರ ಏಪ್ರಿಲ್‌ನಿಂದ. |
| 2. ಭಾರತೀಯ ಔಷಧ ಮಂಡಲಿ ಹೈದರಾಬಾದ್. | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸನ್ ಅಂಡ್ ಸರ್ಜರಿ. | ಡಿ.ಎಚ್.ಎಂ. ಎಸ್. | 1971ರ ಅಕ್ಟೋಬರ್ ನಿಂದ |
| 3. ಬಿಹಾರ ರಾಜ್ಯ ಹೋಮಿಯೋಪತಿಕ್ ಔಷಧ ಮಂಡಲಿ. | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಸೈನ್ಸ್<br>ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಡಿ.ಎಂ.ಎಸ್.<br>ಡಿ.ಎಚ್.ಎಂ.ಎಸ್. | 1961 ರಿಂದ<br>1971 ರಿಂದ |

| | | | |
|---|---|---|---|
| 4. ಹೋಮಿಯೋಪತಿಕ್ ಔಷಧ ಪದ್ಧತಿ ಮಂಡಲಿ, ದೆಹಲಿ. | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಸೈನ್ಸ್. | ಡಿ.ಎಚ್.ಎಸ್ | 1965 ರಿಂದ 1970-71ರವರೆಗೆ |
| | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಡಿ.ಎಚ್.ಎಂ.ಎಸ್ | 1971ರಿಂದ |
| 5. ರಾಯಲ್ ಕಾಲೇಜ್ ಆಫ್ ಹೋಮಿಯೋಪತಿಕ್ ಫಿಸಿಷಿಯನ್ಸ್, ಎರ್ನಾಕುಲಂ. | ಲೈಸೆನ್ಸಿಯೇಟ್ ಆಫ್ ರಾಯಲ್ ಕಾಲೇಜ್ ಆಫ್ ಹೋಮಿಯೋಪತಿಕ್ ಫಿಸಿಷಿಯನ್ಸ್. | ಎಲ್.ಆರ್.ಸಿ. ಎಚ್.ಪಿ | 1966-67ರ ವರೆಗೆ |
| 6. ಹೋಮಿಯೋಪತಿ ಮತ್ತು ಜೀವ ರಸಾಯನಿಕ ಔಷಧ ಪದ್ಧತಿಗಳ ಮಂಡಲಿ, ಮಧ್ಯಪ್ರದೇಶ. | ಡಿಪ್ಲೊಮಾ ಇನ್ ಹೋಮಿಯೋಪತಿ ಅಂಡ್ ಬಯೋ ಕೆಮಿಸ್ಟ್ರಿ. | ಡಿ.ಎಚ್.ಬಿ. | 1960 ರಿಂದ |
| 7. ಹೋಮಿಯೋಪತಿ ಪರೀಕ್ಷಕರ ಸಮಿತಿ. | ಫೆಲೋ ಆಫ್ ದಿ ಕೋರ್ಟ್ ಆಫ್ ಎಕ್ಸಾಮಿನರ್ ಇನ್ ಹೋಮಿಯೋಪತಿ. | ಎಫ್.ಸಿ.ಇ.ಎಚ್. | 1958ನೇ ಮೇ ತಿಂಗಳಲ್ಲಿ ಮಾತ್ರ |
| 8. ಒರಿಸ್ಸಾ ಹೋಮಿಯೋಪತಿ ಔಷಧ ಮಂಡಲಿ, ಭುವನೇಶ್ವರ. | ಡಿಪ್ಲೊಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಡಿ.ಎಚ್.ಎಂ.ಎಸ್. | 1972 ರಿಂದ |
| 9. ರಾಜ್ಯ ಹೋಮಿಯೋಪತಿ ಔಷಧ ಮಂಡಲಿ, ಉತ್ತರ ಪ್ರದೇಶ, ಲಕ್ನೊ. | ಗ್ರಾಜುಯೇಟ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಜಿ.ಎಚ್.ಎಂ.ಎಸ್. | 1961 ರಿಂದ 1963ರ ವರೆಗೆ |
| | ಬ್ಯಾಚುಲರ್ ಆಫ್ ಮೆಡಿಸಿನ್ ಅಂಡ್ ಸರ್ಜರಿ. | ಬಿ.ಎಂ.ಎಸ್. | 1958 ರಿಂದ 1960ರ ವರೆಗೆ |
| | ಸರ್ಟಿಫಿಕೇಟ್ ಆಫ್ ಹೋಮಿಯೋಪತಿಕ್ ಪ್ರಾಕ್ಟೀಸ್. | ಸಿ.ಎಚ್.ಪಿ. | 1970 ರಿಂದ |
| 10. ಆಗ್ರಾ ವಿಶ್ವವಿದ್ಯಾನಿಲಯ, ಆಗ್ರಾ. | ಗ್ರಾಜ್ಯುಯೇಟ್ ಆಫ್ ಹೋಮಿಯೋಪತಿಕ್ ಮೆಡಿಸನ್ ಅಂಡ್ ಸರ್ಜರಿ | ಜಿ.ಎಚ್.ಎಂ.ಎಸ್. | 1965 ರಿಂದ 1967ರ ವರೆಗೆ |
| 11. ಕಾನ್ಪುರ ವಿಶ್ವವಿದ್ಯಾನಿಲಯ, ಕಾನ್ಪುರ. | ಗ್ರಾಜ್ಯುಯೇಟ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಜಿ.ಎಚ್.ಎಂ.ಎಸ್. | 1967 ರಿಂದ |
| 12. ರಾಷ್ಟ್ರೀಯ ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಲಕ್ನೋ. | - | ಎಚ್.ಎಲ್.ಎಂ.ಎಸ್. | 1923 ರಿಂದ 1936 ರವರೆಗೆ |
| | - | ಎಚ್.ಎಂ.ಡಿ. | 1925 ರಿಂದ 1942ರ ವರೆಗೆ |
| | | ಎಚ್.ಎಂ.ಬಿ. | 1924 ರಿಂದ 1949ರ ವರೆಗೆ |
| | | ಬಿ.ಎಂ.ಎಸ್. | 1950 ರಿಂದ 1957 ರವರೆಗೆ |
| 13. ಹೋಮಿಯೋಪತಿ ವೈದ್ಯಕೀಯ ಕಾಲೇಜು, ಲಕ್ನೋ. | - | ಎಚ್.ಎಂ.ಬಿ. | 1931 ರಿಂದ 1936 |

| | | | |
|---|---|---|---|
| 14. ಹೋಮಿಯೋಪತಿ ಔಷಧ ಸಮಿತಿ, ಪಶ್ಚಿಮ ಬಂಗಾಳ. | ಡಿಪ್ಲೊಮಾ ಇನ್ ಮೆಡಿಸಿನ್ ಅಂಡ್ ಸರ್ಜರಿ. | ಡಿ.ಎಂ.ಎಸ್. | 1965 ರಿಂದ |
| 15. ಕಲ್ಕತ್ತ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಕಲ್ಕತ್ತ. | ಬ್ಯಾಚುಲರ್ ಆಫ್ ಹೋಮಿಯೋಪತಿಕ್ ಮೆಡಿಸಿನ್. | ಎಚ್.ಎಂ.ಬಿ. | 1936ರ ವರೆಗೆ |
| | ಬ್ಯಾಚುಲರ್ ಆಫ್ ಮೆಡಿಸಿನ್ ಅಂಡ್ ಬ್ಯಾಚುಲರ್ ಆಫ್ ಸರ್ಜರಿ | ಬಿ.ಎಂ.ಬಿ.ಎಸ್. | 1936 ರಿಂದ 1942ರ ವರೆಗೆ |
| 16. ಬಂಗಾಳ ಅಲೆನ್ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಕಲ್ಕತ್ತ. | ಬ್ಯಾಚುಲರ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಬಿ.ಎಚ್.ಎಂ.ಎಸ್. | 1942ರ ವರೆಗೆ |
| | ಮಾಸ್ಟರ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಎಂ.ಎಚ್.ಎಂ.ಎಸ್. | 1942ರ ವರೆಗೆ |
| | ಲೈಸೆನ್ಸಿಯೇಟ್ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಎಲ್.ಎಚ್.ಎಂ.ಎಸ್. | 1942ರ ವರೆಗೆ |
| 17. ಡನ್‌ಹ್ಯಾಮ್ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಕಲ್ಕತ್ತ. | ಮೆಂಬರ್ ಆಫ್ ಡನ್‌ಹ್ಯಾಮ್ ಕಾಲೇಜು ಆಫ್ ಹೋಮಿಯೋಪತಿ. | ಎಂ.ಡಿ.ಸಿ.ಎಚ್. | 1942ರ ವರೆಗೆ |
| 18. ಆಶುತೋಷ್ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಕಲ್ಕತ್ತ. | ಪ್ರಾ್ಯಕ್ಟೀಶನರ್ಸ್ ಆಫ್ ರ್‍ಯಾಶನಲ್ ಸಿಸ್ಟಂ ಆಫ್ ಮೆಡಿಸಿನ್ | ಪಿ.ಆರ್.ಎಸ್.ಎಂ. | 1942ರ ವರೆಗೆ |
| | ಪ್ರಾಕ್ಟೀಶನರ್ ಆಫ್ ಹೆಡ್ಡಿಂಗ್ ಆರ್ಟ್. | ಪಿ.ಎಚ್.ಎ. | 1942ರ ವರೆಗೆ |
| 19. ಹೆರ್‍ರಿಂಗ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜ್, ಕಲ್ಕತ್ತ. | ಲೈಸೆನ್ಸಿಯೇಟ್ ಆಫ್ ದಿ ರ್‍ಯಾಷನಲ್ ಹೋಮಿಯೋಪತಿಕ್ ಸೊಸೈಟಿ. | ಎಲ್.ಆರ್. ಎಚ್.ಎಸ್. | 1942ರ ವರೆಗೆ |
| 20. ರೆಗ್ಯೂಲರ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜ್, ಕಲ್ಕತ್ತ. | ಲೈಸೆನ್ಸಿಯೇಟ್ ಇನ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ. | ಎಚ್.ಎಲ್. ಎಂ.ಎಸ್. | 1942ರ ವರೆಗೆ |
| 21. ಸೆಂಟ್ರಲ್ ಹೋಮಿಯೋಪತಿಕ್ ಕಾಲೇಜ್, ಕಲ್ಕತ್ತ. | – | ಎಚ್.ಎಲ್. ಎಂ.ಎಸ್. | 1910 |
| 22. ಬಂಗಾಳ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಕಲ್ಕತ್ತ | ಬ್ಯಾಚುಲರ್ ಆಫ್ ಹೋಮಿಯೋಪತಿಕ್ ಮೆಡಿಸಿನ್. | ಎಚ್.ಎಂ.ಬಿ. ಎಚ್.ಎಂ.ಬಿ | 1910 1942ರ ವರೆಗೆ][2] |
| [1][23. ಕೋರ್ಟ್ ಆಫ್ ಎಕ್ಸಾಮಿನರ್ಸ್ ಇನ್ ಹೋಮಿಯೋಪತಿಕ್ ಎಜುಕೇಶನ್, ಬೆಂಗಳೂರು. | ಬ್ಯಾಚುಲರ್ ಆಫ್ ಹೋಮಿಯೋಪತಿಕ್ ಮೆಡಿಸಿನ್ ಅಂಡ್ ಸರ್ಜರಿ | ಬಿ.ಎಚ್.ಎಂ.ಎಸ್. | 1985 ರಿಂದ |
| 24. ಬೆಂಗಳೂರು ವಿಶ್ವವಿದ್ಯಾನಿಲಯ. | –ಅದೇ– | –ಅದೇ– | 1990ರ ಅಕ್ಟೋಬರ್‌ದಿಂದ |
| 25. ಮಂಗಳೂರು ವಿಶ್ವವಿದ್ಯಾನಿಲಯ. | –ಅದೇ– | –ಅದೇ– | 1990ರ ಡಿಸೆಂಬರ್‌ದಿಂದ |

| | | | |
|---|---|---|---|
| 26. ಗುಲ್ಬರ್ಗಾ ವಿಶ್ವವಿದ್ಯಾನಿಲಯ. | -ಅದೇ- | -ಅದೇ- | 1990 ರ ಡಿಸೆಂಬರ್‌ದಿಂದ][1] |

1. ಅಧಿಸೂಚನೆ ಸಂ. ಎಚ್.ಎಫ್.ಡಬ್ಲ್ಯು. 2 ಐಎಂಇ 92 ದಿನಾಂಕ 10.2.1993ರ ಮೂಲಕ 18.3.1993 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**ಬಿ. ಭಾರತದ ಹೊರಗಿನ ವೈದ್ಯಕೀಯ ಸಂಸ್ಥೆಗಳು ನೀಡಿದ ಅರ್ಹತೆಗಳು**

| **ವಿಶ್ವವಿದ್ಯಾನಿಲಯ ಮಂಡಲಿ ಅಥವಾ ವೈದ್ಯಕೀಯ ಸಂಸ್ಥೆಯ ಹೆಸರು** | **ಮನ್ನಣೆ ಪಡೆದ ವೈದ್ಯಕೀಯ ವಿದ್ಯಾರ್ಹತೆ** | **ನೋಂದಣಿಗಾಗಿ ಸಂಕ್ಷಿಪ್ತ ರೂಪ** | **ಷರಾ** |
|---|---|---|---|
| 1. ಫ್ಯಾಕಲ್ಟಿ ಆಫ್ ಹೋಮಿಯೋಪತಿ, ಲಂಡನ್. | ಡಿಪ್ಲೋಮಾ ಆಫ್ ದಿ ಫ್ಯಾಕಲ್ಟಿ ಆಫ್ ಹೋಮಿಯೋಪತಿ | ಡಿ.ಎಫ್. ಹೋಮ್ | |
| 2. ಫ್ಯಾಕಲ್ಟಿ ಆಫ್ ಹೋಮಿಯೋಪತಿ, ಲಂಡನ್. | ಮೆಂಬರ್ ಆಫ್ ದಿ ಫ್ಯಾಕಲ್ಟಿ ಆಫ್ ಹೋಮಿಯೋಪತಿ | ಎಂ.ಎಫ್. ಹೋಮ್ | |
| 3. ಫ್ಯಾಕಲ್ಟಿ ಆಫ್ ಹೋಮಿಯೋಪತಿ, ಲಂಡನ್. | ಫೆಲೋ ಆಫ್ ದಿ ಫ್ಯಾಕಲ್ಟಿ ಆಫ್ ಹೋಮಿಯೋಪತಿ | ಎಫ್.ಎಫ್. ಹೋಮ್][1] | |

## ಅಧಿಸೂಚನೆಗಳು

### I

**ಬೆಂಗಳೂರು, ದಿನಾಂಕ 10ನೇ ಜುಲೈ, 1970 [ಸಂ. ಎಚ್‌ಎಂಎ 463 ಪಿಐಎಂ 69]**

**ಎಸ್‌ಒ. 1530.**- ಮೈಸೂರು ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 (1961ರ ಅಧಿನಿಯಮ ಸಂಖ್ಯೆ 35) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮೈಸೂರು ಸರ್ಕಾರವು, ಅಧ್ಯಾಯ I, IV ಮತ್ತು VIರ ಹೊರತಾಗಿ ಸದರಿ ಅಧಿನಿಯಮದ ಉಳಿದ ಉಪಬಂಧಗಳು 1970ರ ಜುಲೈ, 17ನೇ ದಿನವನ್ನು ಜಾರಿಗೆ ಬರತಕ್ಕ ದಿನಾಂಕ ಎಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

**ಕೆ. ರಂಗನಾಥಪ್ಪ,**
ಅಧೀನ ಕಾರ್ಯದರ್ಶಿ.

(ಕರ್ನಾಟಕ ರಾಜ್ಯಪತ್ರದ ಭಾಗ IV 2ಸಿ (ii) ದಿನಾಂಕ 16ನೇ ಜುಲೈ 1970ರ 3571ನೇ ಪುಟದಲ್ಲಿ ಪ್ರಕಟಿಸಲಾಗಿದೆ.)

### II

**ಬೆಂಗಳೂರು, ದಿನಾಂಕ 18ನೇ ಆಗಸ್ಟ್, 1972 [ಸಂ. ಎಚ್‌ಎಂಎ 303 ಪಿಟಿಎಂ 72]**

**ಎಸ್.ಓ. 1471.**- ಮೈಸೂರು ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 (1961ರ ಮೈಸೂರು ಅಧಿನಿಯಮ ಸಂಖ್ಯೆ 35)ರ 30ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಸದರಿ ಅಧಿನಿಯಮದ ಅನುಸೂಚಿಗೆ ಕೆಳಕಂಡ ಸೇರ್ಪಡೆಗಳನ್ನು ಈ ಮೂಲಕ ಮಾಡಿದೆ ಮತ್ತು ಮೈಸೂರು ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕವನ್ನು, ಈ ಅನುಸೂಚಿಯು ಹಾಗೆ ಮಾರ್ಪಾಡಾಗಿದೆಯೆಂದು ಭಾವಿಸತಕ್ಕ ದಿನಾಂಕವೆಂಬುದಾಗಿ ನಿರ್ದಿಷ್ಟಪಡಿಸಿದೆ, ಎಂದರೆ:-

ಸದರಿ ಅಧಿನಿಯಮದ ಅನುಸೂಚಿಯಲ್ಲಿ, "II ಅರ್ಹತಾದಾಯಕ ಪರೀಕ್ಷೆಗಳು" ಶೀರ್ಷಿಕೆಯ ಅಡಿಯಲ್ಲಿನ ನಮೂದುಗಳಿಗೆ ಬದಲಾಗಿ ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

| | |
|---|---|
| ಡಿಪ್ಲೋಮಾ ಇನ್ ಮೆಡಿಸಿನ್ ಅಂಡ್ ಸರ್ಜರಿ | ಡಿ.ಎಂ.ಎಸ್. ಪಶ್ಚಿಮ ಬಂಗಾಳ |
| ಡಿಪ್ಲೋಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ | ಡಿ.ಎಚ್.ಎಂ. ಆಂಧ್ರಪ್ರದೇಶ |
| ಡಿಪ್ಲೋಮಾ ಇನ್ ಹೋಮಿಯೋಪತಿಕ್ ಮೆಡಿಸಿನ್ | ಡಿ.ಎಚ್.ಎಂ. ಕೇರಳ |
| ಲೈಸನ್ಸೀಯಟಿ ಸರ್ಟಿಫಿಕೇಟ್ ಆಫ್ ಎಕ್ಸಾಮಿನೇಷನ್ ಇನ್ ಹೋಮಿಯೋಪತಿ | ಎಲ್.ಸಿ.ಇ.ಎಚ್. ಮಹಾರಾಷ್ಟ್ರ |

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಪಿ. ರಾಮಕೃಷ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.

(ಕರ್ನಾಟಕ ರಾಜಪತ್ರದ ಭಾಗ IV 2ಸಿ (ii) ದಿನಾಂಕ 24ನೇ ಆಗಸ್ಟ್, 1972ರ 2937ನೇ ಪುಟದಲ್ಲಿ ಪ್ರಕಟಿಸಲಾಗಿದೆ)

### III

**ಬೆಂಗಳೂರು, ದಿನಾಂಕ 11ನೇ ಅಕ್ಟೋಬರ್, 1974**

**ಎಸ್.ಓ. 274.**- ಕರ್ನಾಟಕ ಹೋಮಿಯೋಪತಿಕ್ ವೃತ್ತಿಗಾರರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35)ರ 30ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರವು

ಸದರಿ ಅಧಿನಿಯಮದ ಅನುಸೂಚಿಗೆ ಕೆಳಕಂಡ ಸೇರ್ಪಡೆಗಳನ್ನು ಈ ಮೂಲಕ ಮಾಡಿದೆ. ಮತ್ತು ಕರ್ನಾಟಕ ರಾಜಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕವನ್ನು ಈ ಅನುಸೂಚಿಯು ಹಾಗೆ ಮಾರ್ಪಾಡಾಗಿದೆಯೆಂದು ಭಾವಿಸತಕ್ಕ ದಿನಾಂಕವೆಂಬುದಾಗಿ ನಿರ್ದಿಷ್ಟಪಡಿಸಿದೆ, ಎಂದರೆ:-

ಸದರಿ ಅಧಿನಿಯಮದ ಅನುಸೂಚಿಯಲ್ಲಿ, "ಅರ್ಹತಾದಾಯಕ ಪರೀಕ್ಷೆಗಳು" ಶೀರ್ಷಿಕೆಯ ಅಡಿಯಲ್ಲಿನ ನಮೂದುಗಳಿಗೆ ಬದಲಾಗಿ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

(ಎ) ಭಾರತದ ವಿಶ್ವವಿದ್ಯಾನಿಲಯಗಳು, ಮಂಡಲಿಗಳು ಅಥವಾ ವೈದ್ಯಕೀಯ ಸಂಸ್ಥೆಗಳು ಮನ್ನಣೆ ನೀಡಿದ ಹೋಮಿಯೋಪತಿ ವೈದ್ಯಕೀಯ ಅರ್ಹತೆಗಳು.

(ಟಿಪ್ಪಣಿ: 13-17ನೇ ಪುಟಗಳಲ್ಲಿರುವ ಈ ಅಧಿನಿಯಮದ ಪಾಠದಲ್ಲಿನ ನಮೂದುಗಳಿಗೆ 13ನೇ ಪುಟದಲ್ಲಿರುವ ಅಡಿ ಟಿಪ್ಪಣಿ-3 ಅನ್ವಯಿಸುತ್ತದೆ)

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಜನಾರ್ದನಗೌಡ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.

(ಕರ್ನಾಟಕ ರಾಜಪತ್ರದ ಭಾಗ IV 2ಸಿ (ii) ದಿನಾಂಕ 16ನೇ ಅಕ್ಟೋಬರ್, 1975ರ 634-637ರ ಪುಟಗಳಲ್ಲಿ ಪ್ರಕಟಿಸಲಾಗಿದೆ).

## IV

**ಬೆಂಗಳೂರು, ದಿನಾಂಕ 12ನೇ ಮೇ, 1988 [ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 44 ಐಎಂಇ 87]**

ಕರ್ನಾಟಕ ಹೋಮಿಯೋಪತಿಕ್ ವೃತ್ತಿಗಾರರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಈ ಮೂಲಕ ಸದರಿ ಅಧಿನಿಯಮದ ಅನುಸೂಚಿಗೆ ಕೆಳಕಂಡ ಬದಲಾವಣೆಗಳನ್ನು ಮಾಡಿದೆ ಮತ್ತು ಸದರಿ ಬದಲಾವಣೆಯು, 1988-89ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಅನುಸೂಚಿಯಲ್ಲಿ, 1ನೇ ಶೀರ್ಷಿಕೆಯ ಅಡಿಯಲ್ಲಿ, ಅಧ್ಯಯನ ಕ್ರಮಗಳು ಎಂಬ ನಮೂದುಗಳಿಗೆ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಟಿಪ್ಪಣಿ: 13ನೇ ಪುಟಗಳಲ್ಲಿರುವ ಅಧಿನಿಯಮದ ಪಾಠದಲ್ಲಿನ ನಮೂದುಗಳಿಗೆ 13ನೇ ಪುಟದಲ್ಲಿನ ಅಡಿ ಟಿಪ್ಪಣಿ-1 ಅನ್ವಯಿಸುತ್ತದೆ)

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಚ್.ಎಂ. ಚಿಕ್ಕಬಸವಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

## V

**ಬೆಂಗಳೂರು, ದಿನಾಂಕ 10ನೇ ಫೆಬ್ರವರಿ, 1993 [ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 2 ಐಎಂಇ 92]**

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 35) 30ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಸದರಿ ಅಧಿನಿಯಮದ ಅನುಸೂಚಿಗೆ ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ಕೆಳಕಂಡ ಸೇರ್ಪಡೆಗಳನ್ನು ಈ ಮೂಲಕ ಮಾಡಿದೆ, ಎಂದರೆ:-

ಸದರಿ ಅಧಿನಿಯಮದ ಅನುಸೂಚಿಯಲ್ಲಿ ಭಾರತದ ವಿಶ್ವವಿದ್ಯಾನಿಲಯಗಳು, ಮಂಡಲಿಗಳು ಅಥವಾ ವೈದ್ಯಕೀಯ ಸಂಸ್ಥೆಗಳು ಮನ್ನಣೆ ನೀಡಿದ ಹೋಮಿಯೋಪತಿ ವೈದ್ಯಕೀಯ ಅರ್ಹತೆಗಳು ಶೀರ್ಷಿಕೆಯ ಅಡಿಯಲ್ಲಿ 22ನೇ ಬಾಬಿನ ತರುವಾಯ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

(ಟಿಪ್ಪಣಿ: 16ನೇ ಪುಟದಲ್ಲಿನ ಅಧಿನಿಯಮದ ಪಾಠದಲ್ಲಿರುವ ನಮೂದುಗಳಿಗೆ 16ನೇ ಪುಟದಲ್ಲಿನ ಅಡಿ ಟಿಪ್ಪಣಿ-1 ಅನ್ವಯಿಸುತ್ತದೆ)

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಪಿ. ಪ್ರಸನ್ನಕುಮಾರ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

(ಕರ್ನಾಟಕ ರಾಜಪತ್ರದ ಭಾಗ IV 2ಸಿ (ii) ದಿನಾಂಕ 18ನೇ ಮಾರ್ಚ್, 1993ರ 175-176ನೇ ಪುಟಗಳಲ್ಲಿ ಪ್ರಕಟಿಸಲಾಗಿದೆ).

# ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ನೋಂದಣಿ ನಿಯಮಗಳು, 1964.

### ಅಧಿಸೂಚನೆ

### ಬೆಂಗಳೂರು, ದಿನಾಂಕ 20ನೇ ಜನವರಿ 1965

**ಜಿ.ಎಸ್.ಆರ್. 361:–** ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ (ಕರ್ನಾಟಕ ಅಧಿನಿಯಮ 1961ರ 35) 35ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಹೋಮಿಯೋಪತಿ ವೃತ್ತಿಯವರ ನೋಂದಣಿ ನಿಯಮಗಳು, 1964 ಇದನ್ನು ರಚಿಸುತ್ತದೆ; ಅದರ ಕರಡನ್ನು ಸದರಿ ಪ್ರಕರಣದ (1)ನೇ ಉಪಪ್ರಕರಣದಿಂದ ಅಗತ್ಯಪಡಿಸಿದಂತೆ 1964ರ ಮಾರ್ಚ್ 10ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಪಿಎಲ್ಎಂ 228 ಪಿಐಎಂ 64: ಭಾಗ IVರಲ್ಲಿ ಏಪ್ರಿಲ್ 9ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ IV ಭಾಗ 2ಸಿ (ii) ವಿಭಾಗದಲ್ಲಿ ಜಿಎಸ್ಆರ್ 83 ಎಂದು ಈಗಾಗಲೇ ಪ್ರಕಟಿಸಲಾಗಿದೆ.

## ಭಾಗ – I

### ಪ್ರಾರಂಭಿಕ

**1. ಚಿಕ್ಕ ಹೆಸರು.–** ಈ ನಿಯಮಗಳನ್ನು [1][ಕರ್ನಾಟಕ][1] ಹೋಮಿಯೋಪತಿ ವೃತ್ತಿಗಾರರ ನೋಂದಣಿ ನಿಯಮಗಳು, 1964 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:–

(ಎ) "ಅಧಿನಿಯಮ" ಎಂದರೆ [1][ಕರ್ನಾಟಕ][1] ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961;

(ಬಿ) "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಸಿ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ;

(ಡಿ) "ನ್ಯಾಯಾಧಿಕರಣ" ಎಂದರೆ 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನೋಂದಣಿ ನ್ಯಾಯಾಧಿಕರಣ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಭಾಗ – II

### ನೋಂದಣಿ

**3. ರಿಜಿಸ್ಟರಿನಲ್ಲಿ ಸೇರಿಸಬೇಕಾದ ಇನ್ನೂ ಹೆಚ್ಚಿನ ವಿವರಗಳು.–** ಹೋಮಿಯೋಪತಿ ವೃತ್ತಿಗಾರರ ರಿಜಿಸ್ಟರು ಈ ಮುಂದಿನ ಇನ್ನೂ ಹೆಚ್ಚಿನ ವಿವರಗಳನ್ನು ಒಳಗೊಳ್ಳತಕ್ಕದ್ದು, ಎಂದರೆ:–

(ಎ) ನೋಂದಣಿ ಸಂಖ್ಯೆ;

(ಬಿ) ವೃತ್ತಿಗಾರಳು ವಿವಾಹಿತ ಮಹಿಳೆಯಾಗಿದ್ದರೆ ಅವಳ ವಿವಾಹ ಪೂರ್ವ ಹೆಸರು ಮತ್ತು ಕುಟುಂಬ ನಾಮ;

(ಸಿ) ವೃತ್ತಿಗಾರನ ಹುಟ್ಟಿದ ದಿನಾಂಕ;

(ಡಿ) ವೃತ್ತಿಗಾರನು ಯಾವುದೇ ಅರ್ಹತೆಗಳನ್ನು ಹೊಂದಿರುವಲ್ಲಿ ಅವನ ಅರ್ಹತೆಗಳು ಅಂಥ ಅರ್ಹತೆಗಳಿಗಾಗಿ ಅವನು ತರಬೇತಿಯನ್ನು ಪಡೆದ ಸ್ಥಳ ಮತ್ತು ಅಂಥ ತರಬೇತಿಯ ಅವಧಿ;

(ಇ) ವೃತ್ತಿಗಾರನ ವಿರುದ್ಧ ಮಂಡಲಿಯು ಯಾವುದೇ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿದ್ದರೆ, ಅಂಥ ಕ್ರಮದ ವಿವರಗಳು;

(ಎಫ್) ವೃತ್ತಿಗಾರನ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಿದ್ದರೆ ಮತ್ತು ಆ ತರುವಾಯ ಅದರಲ್ಲಿ ಪುನಃ ನಮೂದಿಸಿದ್ದರೆ ಹಾಗೆ ಆ ಹೆಸರನ್ನು ಪುನಃ ನಮೂದಿಸಿದಂಥ ದಿನಾಂಕ;

(ಜಿ) ರಿಜಿಸ್ಟ್ರಾರನ ಷರಾ, ಯಾವುದಾದರೂ ಇದ್ದರೆ ಅವು.

**4. ಮೊದಲನೆಯ ರಿಜಿಸ್ಟರಿನಲ್ಲಿ ಸೇರಿಸುವುದಕ್ಕಾಗಿ ಅರ್ಜಿ.–** (1) ಮೊದಲನೆಯ ರಿಜಿಸ್ಟರನ್ನು ಸಿದ್ಧಪಡಿಸುವ ಉದ್ದೇಶಗಳಿಗಾಗಿ, ತನ್ನ ಹೆಸರನ್ನು ಸೇರಿಸಿಕೊಳ್ಳಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು, 18ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ 'ಎ' ನಮೂನೆಯಲ್ಲಿ ನ್ಯಾಯಾಧಿಕರಣದ ಕಾರ್ಯದರ್ಶಿಗೆ ಅರ್ಜಿ

ಸಲ್ಲಿಸತಕ್ಕದ್ದು. ಆ ಅರ್ಜಿಯೊಂದಿಗೆ ಪದವಿ, ಡಿಪ್ಲೊಮಾ ಅಥವಾ ಅರ್ಜಿದಾರನ ಅರ್ಹತೆಗಳನ್ನು ಸಮರ್ಥಿಸುವ ಪ್ರಮಾಣಪತ್ರದ ಪ್ರತಿಗಳು ಸಹ ಇರತಕ್ಕದ್ದು. ನ್ಯಾಯಾಧಿಕರಣದ ಕಾರ್ಯದರ್ಶಿಯು ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಿದಾಗ ಅರ್ಜಿದಾರನು ಹಾಗೆ ಹಾಜರುಪಡಿಸತಕ್ಕದ್ದು.

(2) ರಿಜಿಸ್ಟರಿನ 'ಎ' ಭಾಗದಲ್ಲಿ ತನ್ನ ಹೆಸರನ್ನು ಸೇರಿಸಬೇಕೆಂದು ಕ್ಲೇಮು ಮಾಡುವ ವ್ಯಕ್ತಿಯು ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು:-

(i) 17ನೇ ಪ್ರಕರಣದ (3)ನೇ ಉಪಪ್ರಕರಣದ (ii)ನೇ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಸಂದರ್ಭದಲ್ಲಿ:-

(ಎ) ಅಧಿನಿಯಮದ IVನೇ ಅಧ್ಯಾಯವು ಜಾರಿಗೆ ಬಂದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ ಮುಖ್ಯ ವೃತ್ತಿಯಾಗಿ ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಯಲ್ಲಿ ಅರ್ಜಿದಾರನು ತೊಡಗಿರುವನೆಂದು, ಅರ್ಜಿದಾರನು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನ ಮುಂದೆ ಮಾಡಿದ ಘೋಷಣೆ; ಮತ್ತು

(ಬಿ) ಅಧಿನಿಯಮದ IVನೇ ಅಧ್ಯಾಯವು ಜಾರಿಗೆ ಬಂದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅರ್ಜಿದಾರನು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ ಹೋಮಿಯೋಪತಿ ಔಷಧ ಪದ್ಧತಿಯಲ್ಲಿ ವೃತ್ತಿಯನ್ನು ನಡೆಸುತ್ತಿದ್ದನೆಂದು ರಾಜ್ಯ ಸರ್ಕಾರದ ಗೆಜೆಟೆಡ್ ಅಧಿಕಾರಿ ನೀಡಿದ ಪ್ರಮಾಣಪತ್ರ;

(ii) 17ನೇ ಪ್ರಕರಣದ (3)ನೇ ಉಪಪ್ರಕರಣದ (i)ನೇ ಖಂಡ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಸಂದರ್ಭದಲ್ಲಿ:-

(ಎ) ಒಳರೋಗಿಗಳನ್ನು ಇಟ್ಟುಕೊಳ್ಳುವ ಮತ್ತು ಶಸ್ತ್ರಚಿಕಿತ್ಸೆ, ಸ್ತ್ರೀ ರೋಗ ಚಿಕಿತ್ಸೆ ಮತ್ತು ಪ್ರಸವ ಚಿಕಿತ್ಸೆ ಮತ್ತು ಹೋಮಿಯೋಪತಿ ಔಷಧದಲ್ಲಿ ಸೇವೆಯನ್ನು ಒಳಗೊಳ್ಳುವ ಆಸ್ಪತ್ರೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ ವೈಯಕ್ತಿಕ ಚಿಕಿತ್ಸಾ ಶಿಕ್ಷಣವನ್ನು ವ್ಯಕ್ತಿಯು ಪಡೆದಿರುವುದನ್ನು ಸಮರ್ಥಿಸಲು ದಸ್ತಾವೇಜು ಸಾಕ್ಷ್ಯ; ಮತ್ತು

(ಬಿ) ಸದರಿ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಪ್ರಮಾಣ ಪತ್ರ

– ಇವುಗಳನ್ನು ಒಳಗೊಂಡಿರತಕ್ಕದ್ದು.

(3) ರಿಜಿಸ್ಟರಿನ (ಬಿ) ಭಾಗದಲ್ಲಿ ತನ್ನ ಹೆಸರನ್ನು ಸೇರಿಸಬೇಕೆಂದು ಕ್ಲೇಮು ಮಾಡುವ ವ್ಯಕ್ತಿಯ ನೋಂದಣಿಗಾಗಿನ ಪ್ರತಿಯೊಂದು ಅರ್ಜಿಯು ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961 ಅಥವಾ ಕರ್ನಾಟಕ ಆಯುರ್ವೇದಿಕ್ ಮತ್ತು ಯುನಾನಿ ವೃತ್ತಿಯವರ ನೋಂದಣಿ ಮತ್ತು ವೈದ್ಯಕೀಯ ವೃತ್ತಿಯ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961ರ ಮೇರೆಗೆ ತನ್ನ ಹೆಸರು ನೋಂದಾಯಿತವಾಗಿರುವುದೆಂದೂ ಮತ್ತು ತಾನು ವೈದ್ಯಕೀಯ ವೃತ್ತಿಗಾರನೆಂದು ಮತ್ತು ತಾನು ಹೋಮಿಯೋಪತಿ ಔಷಧದ ವೃತ್ತಿಯನ್ನು ನಡೆಸುತ್ತಿರುವುದಾಗಿಯೂ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಮುಂದೆ ಅರ್ಜಿದಾರನು ಮಾಡಿದ ಘೋಷಣೆಯೊಂದಿಗೆ ಇರತಕ್ಕದ್ದು.

(4) ರಿಜಿಸ್ಟರಿನ 'ಸಿ' ಭಾಗದಲ್ಲಿ ಸೇರಿಸಿಕೊಳ್ಳಬೇಕೆಂದು ಕ್ಲೇಮು ಮಾಡುವ ವ್ಯಕ್ತಿಯ ನೋಂದಣಿಗಾಗಿನ ಪ್ರತಿಯೊಂದು ಅರ್ಜಿಯು:-

(ಎ) ಅಧಿನಿಯಮದ IVನೇ ಅಧ್ಯಾಯ ಜಾರಿಗೆ ಬಂದ ದಿನಾಂಕದಂದು ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಮುಖ್ಯ ವೃತ್ತಿಯಾಗಿ ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಯನ್ನು ತಾನು ನಡೆಸಿಕೊಂಡು ಬಂದಿರುವುದಾಗಿ ಪ್ರಥಮ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಮ್ಯಾಜಿಸ್ಟ್ರೇಟನ ಮುಂದೆ ಅರ್ಜಿದಾರನು ಮಾಡಿದ ಘೋಷಣೆ; ಮತ್ತು

(ಬಿ) ಅಧಿನಿಯಮದ IVನೇ ಅಧ್ಯಾಯವು ಜಾರಿಗೆ ಬಂದ ದಿನಾಂಕದಂದು ಎರಡು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ಮುಖ್ಯ ವೃತ್ತಿಯಾಗಿ ಅರ್ಜಿದಾರನು ಹೋಮಿಯೋಪತಿ ಔಷಧ ಪದ್ಧತಿಯ ವೃತ್ತಿಯನ್ನು ನಡೆಸಿಕೊಂಡು ಬಂದಿರುವುದಾಗಿ ರಾಜ್ಯ ಸರ್ಕಾರದ ಗೆಜೆಟೆಡ್ ಅಧಿಕಾರಿಯು ರುಜು ಮಾಡಿದ ಪ್ರಮಾಣ ಪತ್ರ

– ಇವುಗಳನ್ನು ಒಳಗೊಂಡಿರತಕ್ಕದ್ದು.

ಈ ನಿಯಮಗಳ ಅಗತ್ಯತೆಗಳನ್ನು ಈಡೇರಿಸದ ಯಾವುದೇ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

**5. ನ್ಯಾಯಾಧಿಕರಣದಿಂದ ವಿಚಾರಣೆ.**- (1) ನೋಂದಣಿ ಕೋರಿ ಸಲ್ಲಿಸತಕ್ಕ ಪ್ರತಿಯೊಂದು ಅರ್ಜಿಯನ್ನು ನ್ಯಾಯಾಧಿಕರಣವು ಪರ್ಯಾಲೋಚಿಸತಕ್ಕದ್ದು.

(2) ಯಾವುದೇ ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವ ಉದ್ದೇಶಕ್ಕಾಗಿ ನ್ಯಾಯಾಧಿಕರಣವು ತಾನು ಅವಶ್ಯವೆಂದು ಪರ್ಯಾಲೋಚಿಸಿದರೆ, ಯಾರೇ ಅರ್ಜಿದಾರನಿಗೆ, ಅವನು ತನ್ನ ಖರ್ಚಿನಲ್ಲಿ ನ್ಯಾಯಾಧಿಕರಣದ ಮುಂದೆ ಹಾಜರಾಗಲು ಕರೆ ನೀಡಬೇಕೆಂದು ನ್ಯಾಯಾಧಿಕರಣದ ಕಾರ್ಯದರ್ಶಿಗೆ ನಿರ್ದೇಶಿಸಬಹುದು ಅಥವಾ ಆ ಬಗ್ಗೆ ನ್ಯಾಯಾಧಿಕರಣವು ನಿರ್ದಿಷ್ಟಪಡಿಸಬಹುದಾದಂಥ ಅರ್ಜಿಯಲ್ಲಿ, ಅರ್ಜಿದಾರನು ನಮೂದಿಸಿರುವಂಥ ಸಂಗತಿಗಳನ್ನು ಪರೀಶೀಲಿಸುವುದಕ್ಕಾಗಿ ಅರ್ಜಿದಾರನು ಯಾವ ಜಿಲ್ಲೆಯಲ್ಲಿ ವೃತ್ತಿಯನ್ನು ನಡೆಸುವುದಾಗಿ ಕ್ಲೇಮು ಮಾಡುವನೋ ಅಂಥ ಜಿಲ್ಲೆಯ ಡೆಪ್ಯೂಟಿ ಕಮೀಷನರನಿಗೆ ಯಾವುದೇ ಅರ್ಜಿಯನ್ನು ಕಳುಹಿಸಿಕೊಡಬಹುದು.

**6. ನೋಂದಣಿ ಪ್ರಮಾಣಪತ್ರ.**– 18ನೇ ಪ್ರಕರಣದ (5)ನೇ ಉಪಪ್ರಕರಣವನ್ನು ಅನುಸರಿಸಿ ನೀಡಬೇಕಾದ ನೋಂದಣಿ ಪ್ರಮಾಣಪತ್ರವು 'ಬಿ' ನಮೂನೆಯಲ್ಲಿ ಇರತಕ್ಕದ್ದು.

**7. ತರುವಾಯದ ನೋಂದಣಿಗಾಗಿ ಅರ್ಜಿ.**– 19ನೇ ಪ್ರಕರಣದ ಮೇರೆಗೆ ರಿಜಿಸ್ಟರಿನ ಅಭಿರಕ್ಷೆಯನ್ನು ಮಂಡಲಿಗೆ ಕೊಟ್ಟ ದಿನಾಂಕದ ತರುವಾಯ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಸೇರಿಸಲು ಯಾರೇ ವ್ಯಕ್ತಿಯು ಸಲ್ಲಿಸಿದ ಪ್ರತಿಯೊಂದು ಅರ್ಜಿಯು 'ಸಿ' ನಮೂನೆಯಲ್ಲಿ ಇರತಕ್ಕದ್ದು ಮತ್ತು ಅದರೊಂದಿಗೆ ಹದಿನೈದು ರೂಪಾಯಿಗಳ ಫೀಜನ್ನು ಸಂದಾಯ ಮಾಡಿರತಕ್ಕದ್ದು ಮತ್ತು ಅದು 17ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರಗಳು ಮತ್ತು 3ನೇ ನಿಯಮದಲ್ಲಿ ಉಲ್ಲೇಖಿಸಿದ ಇನ್ನೂ ಹೆಚ್ಚಿನ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಆ ವ್ಯಕ್ತಿಯು ಹೊಂದಿರತಕ್ಕ ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಸೂಚಿಸತಕ್ಕದ್ದು. ಮತ್ತು ಅದು, ಅರ್ಜಿದಾರನು ಹೊಂದಿರುವನೆಂದು ಕ್ಲೇಮು ಮಾಡುವಂಥ ಅರ್ಹತೆಗಳ ಸಮರ್ಥನೆಗಾಗಿ ಅವನು ಡಿಪ್ಲೊಮಾ, ಪದವಿ ಅಥವಾ ಸರ್ಟಿಫಿಕೇಟ್ – ಇವುಗಳ ಪ್ರಮಾಣಿತ ಪ್ರತಿಗಳೊಂದಿಗೂ ಸಹ ಇರತಕ್ಕದ್ದು.

**8. ಹೊಸ ನಮೂದುಗಳನ್ನು ಮಾಡುವುದು ಅಥವಾ ಇರುವ ನಮೂದುಗಳನ್ನು ಬದಲಾಯಿಸುವುದು.**– (1) ಯಾರೇ ನೋಂದಾಯಿತ ವೃತ್ತಿಗಾರನು,–

(ಎ) ರಿಜಿಸ್ಟರಿನಲ್ಲಿ ತನ್ನ ಹೆಸರಿನ ನಮೂದನ್ನು ಬದಲಾಯಿಸಲು; ಅಥವಾ

(ಬಿ) ನೋಂದಣಿ ದಿನಾಂಕದ ತರುವಾಯ ತಾನು ಆರ್ಜಿಸಿದ ಯಾವುದೇ ಹೆಚ್ಚಿನ ಅರ್ಹತೆಯ ಬಗ್ಗೆ ರಿಜಿಸ್ಟರಿನಲ್ಲಿ ನಮೂದು ಮಾಡಿಸಿಕೊಳ್ಳಲು; ಅಥವಾ

(ಸಿ) ತನ್ನ ಹೆಚ್ಚಿನ ಅರ್ಹತೆಗಳ ಬಗ್ಗೆ ನಮೂದಿನಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಸಿಕೊಳ್ಳಲು

– ಅವನು ರಿಜಿಸ್ಟ್ರಾರನಿಗೆ ಆ ಬಗ್ಗೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯು ಹೆಚ್ಚಿನ ಅರ್ಹತೆಗಳ ನಮೂದುಗಳಲ್ಲಿನ ಯಾವುದೇ ಬದಲಾವಣೆಗಳಿಗೆ ಸಂಬಂಧಪಟ್ಟಿದ್ದರೆ ಐದು ರೂಪಾಯಿಗಳ ಫೀಜನ್ನು ಸಂದಾಯ ಮಾಡತಕ್ಕದ್ದು.

**9. ನೋಂದಣಿಯ ನವೀಕರಣ.**– 24ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ನಿಗದಿತ ದಿನಾಂಕಕ್ಕೆ ಮುಂಚೆ ಹತ್ತು ರೂಪಾಯಿಗಳ ನವೀಕರಣ ಫೀಜನ್ನು ಸ್ವೀಕರಿಸಿದ ಮೇಲೆ ರಿಜಿಸ್ಟ್ರಾರನು ನೋಂದಾಯಿತ ವೃತ್ತಿಗಾರನಿಗೆ 'ಡಿ' ನಮೂನೆಯಲ್ಲಿ ನವೀಕರಣ ಚೀಟಿಯನ್ನು ಕೊಡತಕ್ಕದ್ದು. ಆ ಬಗ್ಗೆ ವೃತ್ತಿಗಾರನು ಅಂಥ ನವೀಕರಣ ಚೀಟಿಯನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ಒದಗಿಸಿದ ಜಾಗದಲ್ಲಿ ಅಂಟಿಸತಕ್ಕದ್ದು.

**10. ರಿಜಿಸ್ಟರಿನಿಂದ ತೆಗೆದುಹಾಕಿದ ವೃತ್ತಿಗಾರನ ಹೆಸರನ್ನು ಪುನಃ ನಮೂದಿಸುವುದು.**– 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ಅಂಥ ವ್ಯಕ್ತಿಯಿಂದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಹತ್ತು ರೂಪಾಯಿಗಳ ನವೀಕರಣ ಫೀಜು ಸಂದಾಯವಾದ ಮೇಲೆ ರಿಜಿಸ್ಟರಿನಲ್ಲಿ ತೆಗೆದುಹಾಕಲಾದ ಯಾರೇ ವ್ಯಕ್ತಿಯ ಹೆಸರನ್ನು ಪುನಃ ನಮೂದಿಸಬಹುದು ಮತ್ತು ಮಂಡಲಿಯು ನೋಂದಣಿಯ ಹೊಸ ಪ್ರಮಾಣ ಪತ್ರವನ್ನು ಪುನಃ ಕೊಡತಕ್ಕದ್ದು.

**ನಮೂನೆ 'ಎ'**

**(4ನೇ ನಿಯಮದ (1)ನೇ ಉಪನಿಯಮ)**

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 18ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿ ನಮೂನೆ.

ರಿಜಿಸ್ಟ್ರಾರ್,
ಹೋಮಿಯೋಪತಿ ಔಷಧ ಪದ್ಧತಿ ಮಂಡಲಿ,
ಕರ್ನಾಟಕ.* ಅವರಿಗೆ

* ಪೂರ್ಣ ವಿಳಾಸವನ್ನು ನಮೂದಿಸಿ.

ಮಾನ್ಯರೇ,

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 18ನೇ ಪ್ರಕರಣದ ಮೇರೆಗೆ ಈ ಮುಂದೆ ನಮೂದಿಸಿರುವಂತೆ ನನ್ನ ಹೆಸರು ಮತ್ತು ಇತರ ವಿವರಗಳನ್ನು ರಿಜಿಸ್ಟರಿನಲ್ಲಿ ನಮೂದು ಮಾಡಬೇಕೆಂದು ನಾನು ಈ ಮೂಲಕ ಕೋರುತ್ತೇನೆ.

1. ಅರ್ಜಿದಾರನ ಪೂರ್ಣ ಹೆಸರು
   (ಅಡ್ಡ ಹೆಸರಿನೊಂದಿಗೆ ಪ್ರಾರಂಭಿಸಿ) ಸ್ಪಷ್ಟ ಅಕ್ಷರಗಳಲ್ಲಿ
2. ಅರ್ಜಿದಾರಳು ವಿವಾಹಿತ ಮಹಿಳೆಯಾಗಿದ್ದರೆ ವಿವಾಹ ಪೂರ್ವ
   ಹೆಸರು ಮತ್ತು ಅಡ್ಡ ಹೆಸರು. (ಅಡ್ಡ ಹೆಸರಿನಿಂದ
   ಪ್ರಾರಂಭಿಸಿ ಸ್ಪಷ್ಟ ಅಕ್ಷರಗಳಲ್ಲಿ)
3. ರಾಷ್ಟ್ರೀಯತೆ
4. ನಿವಾಸದ ವಿಳಾಸ (ಸ್ಪಷ್ಟ ಅಕ್ಷರಗಳಲ್ಲಿ)
5. ವೃತ್ತಿ ವಿಳಾಸ
   (ಸ್ಪಷ್ಟ ಅಕ್ಷರಗಳಲ್ಲಿ)
6. ಜನನ ದಿನಾಂಕ (ಪದಗಳು ಮತ್ತು ಅಂಕಿಗಳಲ್ಲಿ)
7. (ಎ) ಅರ್ಜಿದಾರನು ಹೊಂದಿರುವ ಅರ್ಹತೆ;

   (ಬಿ) ಅರ್ಜಿದಾರನು ಅರ್ಹತೆಯನ್ನು ಪಡೆದ ದಿನಾಂಕ;

   (ಸಿ) ವಿದ್ಯಾರ್ಹತೆಯನ್ನು ಪ್ರದಾನ ಮಾಡಿದ ಅಥವಾ ಕೊಟ್ಟ ಪ್ರಾಧಿಕಾರ;

   (ಡಿ) ಅರ್ಜಿದಾರನು ಅಂಥ ಅರ್ಹತೆಗಾಗಿ ತರಬೇತಿಯನ್ನು
   ಪಡೆದ ಸ್ಥಳ ಮತ್ತು ತರಬೇತಿಯ ಅವಧಿ.

2. ನನ್ನ ಅರ್ಹತೆ ಎಂದರೆ ............... ಮೇರೆಗೆ (ಅರ್ಹತೆಯನ್ನು ಬರೆಯಬೇಕು)

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 20ನೇ ಪ್ರಕರಣದ ಮೇರೆಗೆ ನನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ನಾನು ಹಕ್ಕುಳ್ಳವನಾಗಿದ್ದೇನೆ.

3. ನಾನು ಇದರೊಂದಿಗೆ –

   (i) ಮೂಲ ಪ್ರತಿಯಲ್ಲಿ ನನ್ನ ಜನನ ಪ್ರಮಾಣಪತ್ರ, ಮೆಟ್ರಿಕ್ಯುಲೇಶನ್: ಎಸ್‌ಎಸ್‌ಸಿ ಪ್ರಮಾಣಪತ್ರ, ಶಾಲಾಂತ್ಯ ಪ್ರಮಾಣ ಪತ್ರ.

   (ii) ನಾನು ಹೊಂದಿರುವ ಅರ್ಹತೆಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಮತ್ತು ಅದರ ಎರಡು ನಕಲು ಪ್ರತಿಗಳನ್ನು ಕಳಿಸಿರುತ್ತೇನೆ. ಮೂಲ ಪ್ರತಿಯನ್ನು, ಅಗತ್ಯ ಇರದಿದ್ದರೆ ನನಗೆ ದಯವಿಟ್ಟು ಹಿಂದಿರುಗಿಸಿ.

** 4. 15 ರೂಪಾಯಿಗಳ (ಹದಿನೈದು ರೂಪಾಯಿಗಳು ಮಾತ್ರ) ನೋಂದಣಿ ಫೀಜನ್ನು ನಗದಾಗಿ/ಪೋಸ್ಟಲ್ ಆರ್ಡರ್: ಮನಿಯಾರ್ಡರ್ ಮೂಲಕ ಸಂದಾಯ ಮಾಡಿದೆ.

** ಅನ್ವಯವಾಗದಿರುವುದನ್ನು ಹೊಡೆದು ಹಾಕಿ.

5. ಅಧಿನಿಯಮದ 21ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಮುಚ್ಚಳಿಕೆಯನ್ನು ಇದರೊಂದಿಗೆ ಒದಗಿಸಿದೆ.

6. ಈ ನಮೂನೆಯೊಂದಿಗೆ ಕಳುಹಿಸಿದ ಸೂಚನೆಗಳನ್ನು ನಾನು ಜಾಗರೂಕತೆಯಿಂದ ಓದಿಕೊಂಡಿದ್ದೇನೆ ಮತ್ತು ಮೇಲೆ ನಾನು ಒದಗಿಸಿರುವ ವಿವರಗಳು ನನಗೆ ತಿಳಿದಿರುವಷ್ಟರಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ಸತ್ಯವಾದುದೆಂದು ನಾನು ಪ್ರಮಾಣೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

ದಿನಾಂಕ: ಅರ್ಜಿದಾರನ ಸಹಿ.

ಸ್ಥಳ:

## ಸೂಚನೆಗಳು

1. ಈ ಅರ್ಜಿ ನಮೂನೆಯಲ್ಲಿನ ಎಲ್ಲಾ ವಿವರಗಳನ್ನು ಅರ್ಜಿದಾರನು ಸ್ಫುಟವಾಗಿ ಬರೆದು ಭರ್ತಿ ಮಾಡತಕ್ಕದ್ದು ಅಥವಾ ಬೆರಳಚ್ಚು ಮಾಡಬಹುದು.

ಅಪೂರ್ಣ ಅರ್ಜಿಗಳು ತಿರಸ್ಕರಿಸುವುದಕ್ಕೆ ಗುರಿಯಾಗುತ್ತವೆ.

2. ನೋಂದಣಿಗಾಗಿ 15 ರೂಪಾಯಿಗಳ ಫೀಜನ್ನು ರಿಜಿಸ್ಟ್ರಾರ್, ಹೋಮಿಯೋಪತಿ ಔಷಧ ಪದ್ಧತಿ ಮಂಡಲಿ, ಕರ್ನಾಟಕ – ಅವರಿಗೆ ನಗದಾಗಿ ಸಂದಾಯ ಮಾಡತಕ್ಕದ್ದು ಅಥವಾ ಮನಿ ಆರ್ಡರ್ ಮೂಲಕ ಅಥವಾ ಕ್ರಾಸ್ ಮಾಡಿದ ಭಾರತೀಯ ಪೋಸ್ಟಲ್ ಆರ್ಡರ್ ಮೂಲಕ ಕಳಿಸಬಹುದು. ಫೀಜನ್ನು ಮನಿ ಆರ್ಡರ್ ಮೂಲಕ ಕಳುಹಿಸಿದಾಗ ಅಂಚೆ ರಸೀತಿಯನ್ನು ಅರ್ಜಿಗೆ ಲಗತ್ತಿಸತಕ್ಕದ್ದು.

3. ವಿವರಗಳನ್ನು ಕೊಡುವುದಕ್ಕಾಗಿ ಇರುವ ಜಾಗವು ಸಾಕಷ್ಟು ಇಲ್ಲದಿದ್ದರೆ ಅವುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಅದನ್ನು ಅರ್ಜಿಗೆ ಲಗತ್ತಿಸಬಹುದು.

---

## 17ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸುವ ಅರ್ಜಿಯ ಜೊತೆಗೆ ಇರಬೇಕಾದುದು

## ಅರ್ಜಿದಾರನು ಮಾಡಬೇಕಾದ ಘೋಷಣೆಯ ನಮೂನೆ

1961ರ ಡಿಸೆಂಬರ್ 27ನೇ ದಿವಸಕ್ಕೆ ನಿಕಟ ಪೂರ್ವದಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯಲ್ಲಿ ಹೋಮಿಯೋಪತಿ ಔಷಧ ಪದ್ಧತಿಯಲ್ಲಿ ನಿಯತವಾಗಿ ವೃತ್ತಿ ನಡೆಸುತ್ತಿದ್ದೆನೆಂದು ____________________ ಎಂಬ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

____________ ಇವರು, ____________ ಸ್ಥಳದಲ್ಲಿ ________________ ದಿವಸದಂದು ನನ್ನ ಮುಂದೆ ಶ್ರದ್ಧಾಪೂರ್ವಕವಾಗಿ ಘೋಷಿಸಿದ್ದಾರೆ.

ಸರ್ಕಾರದ ಮೊಹರು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್:

** ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್

** ಇಲ್ಲಿ ಮೊದಲನೇ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಇತರ ಮ್ಯಾಜಿಸ್ಟ್ರೇಟನನ್ನು ನಮೂದಿಸಿ.

## ಅರ್ಜಿದಾರನು ಒದಗಿಸಬೇಕಾದ ಗೆಜೆಟೆಡ್ ಅಧಿಕಾರಿ ಅಥವಾ ಶಾಂತಿಪಾಲನಾ ನ್ಯಾಯಾಧೀಶ – ಇವರ ಪ್ರಮಾಣ ಪತ್ರದ ನಮೂನೆ

ಪ್ರಮಾಣೀಕರಿಸುವ ಅಧಿಕಾರಿಯಾದ ________________ ಎಂಬ ನಾನು, *ಶ್ರೀ:ಶ್ರೀಮತಿ:ಕುಮಾರಿ ________________ (ಅರ್ಜಿದಾರನ ಹೆಸರು) – ಇವರು 1961ರ ಡಿಸೆಂಬರ್ 27ನೇ ದಿವಸಕ್ಕೆ ನಿಕಟ ಪೂರ್ವದಲ್ಲಿ ________ ______________ *** ಸ್ಥಳದಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯಲ್ಲಿ ಹೋಮಿಯೋಪತಿ ಔಷಧ ಪದ್ಧತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನಿಯತವಾಗಿ ವೃತ್ತಿ ನಡೆಸುತ್ತಿದ್ದರೆಂದು ನನಗೆ ಮನದಟ್ಟಾಗಿದೆ ಮತ್ತು ಹಾಗೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪ್ರಮಾಣೀಕರಿಸುವ ಅಧಿಕಾರಿಯ ರುಜು.

ಪ್ರಮಾಣೀಕರಿಸುವ ಅಧಿಕಾರಿಯ ಮೊಹರು
ಅಥವಾ ಮುದ್ರೆ ಅಥವಾ ಪದನಾಮ ಮತ್ತು ವಿಳಾಸ.

ದಿನಾಂಕ:

ಸ್ಥಳ:

* ಅನ್ವಯವಾಗದಿರುವುದವನ್ನು ಹೊಡೆದು ಹಾಕಿ.

*** ಇಲ್ಲಿ ಅರ್ಜಿದಾರನು ವೃತ್ತಿಯನ್ನು ನಡೆಸುತ್ತಿದ್ದ ಜಿಲ್ಲೆ ಮತ್ತು ತಾಲ್ಲೂಕಿನ ಹೆಸರಿನ ಸಹಿತ ಸ್ಥಳ ಅಥವಾ ಸ್ಥಳಗಳ ವಿವರಗಳನ್ನು ಕೊಡಿ.

## ನಮೂನೆ – ' ಬಿ '

**(ನಿಯಮ 6)**

**ನೋಂದಣಿ ಪ್ರಮಾಣ ಪತ್ರ**

ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ, ಕರ್ನಾಟಕ ——————— ಸಿಮಿಲಿಯಾ ಸಿಮಿಲಿಬಸ್ ಕ್ಯೂರಾಂಟರ್

ಪ್ರಮಾಣ ಪತ್ರದ ಸಂಖ್ಯೆ:

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1961ರ 35) ರ ಮೇರೆಗೆ ————————————— ಎಂಬುವರನ್ನು ಕ್ರಮಬದ್ಧವಾಗಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

ಅದಕ್ಕೆ ಸಾಕ್ಷಿಯಾಗಿ ಹೋಮಿಯೋಪತಿ ಔಷಧ ಪದ್ಧತಿ ಮಂಡಲಿ, ಕರ್ನಾಟಕ – ಇದರ ಮೊಹರನ್ನು ಹಾಕಲಾಗಿದೆ. ಮತ್ತು ರಿಜಿಸ್ಟ್ರಾರರು ರುಜು ಮಾಡಿದ್ದಾರೆ.

ಅಧಿನಿಯಮದ ಉಪಬಂಧಗಳಿಗೊಳಪಟ್ಟು ಈ ಪ್ರಮಾಣ ಪತ್ರವು ————— ವರೆಗೆ ಸಿಂಧುವಾಗಿರುತ್ತದೆ.

---

ಮೊಹರು

ರಿಜಿಸ್ಟ್ರಾರನ ರುಜು

---

ನವೀಕರಣ ಚೀಟಿಗಳಿಗಾಗಿ ಖಾಲಿ ಜಾಗ

---

ಇಲ್ಲಿ ಪ್ರಮಾಣ ಪತ್ರದ ಸಿಂಧುತ್ವದ ದಿನಾಂಕವನ್ನು ಬರೆಯಿರಿ.

## ನಮೂನೆ – ' ಸಿ '

(ನಿಯಮ – 7)

**ಕರ್ನಾಟಕ ಹೋಮಿಯೋಪತಿ ವೃತ್ತಿಗಾರ ಅಧಿನಿಯಮ, 1961ರ 17ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿಯ ನಮೂನೆ.**

**————————— ಗೆ**

ರಿಜಿಸ್ಟ್ರಾರ್,
ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ,
ಕರ್ನಾಟಕ.

ಮಾನ್ಯರೇ,

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 ರ 20ನೇ ಪ್ರಕರಣದ ಮೇರೆಗೆ ಕೆಳಗೆ ನಮೂದಿಸಿರುವಂತೆ ನನ್ನ ಹೆಸರು ಮತ್ತು ಇತರ ವಿವರಗಳನ್ನು ರಿಜಿಸ್ಟರಿನಲ್ಲಿ ನಮೂದಿಸಬೇಕೆಂದು ನಾನು ಈ ಮೂಲಕ ಕೋರುತ್ತೇನೆ:–

1. ಅರ್ಜಿದಾರನ ಪೂರ್ಣ ಹೆಸರು
   (ಅಡ್ಡ ಹೆಸರಿನಿಂದ ಪ್ರಾರಂಭಿಸಿ ಸ್ಪಷ್ಟ ಅಕ್ಷರಗಳಲ್ಲಿ).
2. (ಅರ್ಜಿದಾರಳು ವಿವಾಹಿತ ಮಹಿಳೆಯಾಗಿದ್ದರೆ)
   ವಿವಾಹ ಪೂರ್ವ ಹೆಸರು ಮತ್ತು ಅಡ್ಡ ಹೆಸರು.
3. ರಾಷ್ಟ್ರೀಯತೆ.

4. ನಿವಾಸದ ವಿಳಾಸ (ಬಿಡಿ ಅಕ್ಷರಗಳಲ್ಲಿ).

5. ವೃತ್ತಿ ವಿಳಾಸ (ಸ್ಪಷ್ಟ ಅಕ್ಷರಗಳಲ್ಲಿ).

6. ಜನನ ದಿನಾಂಕ (ಪದಗಳು ಮತ್ತು ಅಂಕಿಗಳಲ್ಲಿ).

7. ನಿಯತವಾಗಿ ವೃತ್ತಿ ನಡೆಸುವುದನ್ನು ಪ್ರಾರಂಭಿಸಿದ ದಿನಾಂಕ.

8. ಅರ್ಜಿದಾರನ ಹೆಸರನ್ನು ಮೊದಲ ಬಾರಿಗೆ ರಿಜಿಸ್ಟರಿನಲ್ಲಿ

   ನಮೂದಿಸಿದ ದಿನಾಂಕ.

9. ನೋಂದಣಿಗಾಗಿನ ಅರ್ಹತೆ ಮತ್ತು ಹೋಮಿಯೋಪತಿಯಲ್ಲಿ ಪದವಿ ಅಥವಾ ಡಿಪ್ಲೊಮಾ, ಯಾವುದಾದರೂ ಇದ್ದರೆ ಅದನ್ನು ಪಡೆದಂಥ ದಿನಾಂಕ ಮತ್ತು ಅದನ್ನು ಪ್ರದಾನ ಮಾಡಿದ ಅಥವಾ ನೀಡಿದ ಪ್ರಾಧಿಕಾರ.

10. (1) ಅರ್ಜಿದಾರನು ವೃತ್ತಿಯನ್ನು ನಡೆಸಿದ ತಾಲ್ಲೂಕುಗಳು ಅಥವಾ ಜಿಲ್ಲೆ ಹೆಸರಿನ ಸಹಿತ ಸ್ಥಳ ಅಥವಾ ಸ್ಥಳಗಳು ಮತ್ತು ಪ್ರತಿಯೊಂದು ಸ್ಥಳದಲ್ಲಿ ವೃತ್ತಿಯನ್ನು ಪ್ರಾರಂಭಿಸಿದ ಸರಿ ಸುಮಾರು ದಿನಾಂಕಗಳು ಮತ್ತು ಅರ್ಜಿದಾರನು ವೃತ್ತಿಯನ್ನು ನಡೆಸಿದ ಸರಿ ಸುಮಾರು ಅವಧಿ.

    (2) 1961ರ ಡಿಸೆಂಬರ್ 27ನೇ ದಿವಸಕ್ಕೆ ನಿಕಟ ಪೂರ್ವದಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಗಾಗಿ —————— ಜಿಲ್ಲೆ —————— ತಾಲ್ಲೂಕು —————————— ಸ್ಥಳದಲ್ಲಿ ಹೋಮಿಯೋಪತಿ ಔಷಧ ಪದ್ಧತಿಯಲ್ಲಿ ನಿಯತವಾಗಿ ನಾನು ವೃತ್ತಿಯನ್ನು ನಡೆಸುತ್ತಿದ್ದೆ. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್: ಮೊದಲ ದರ್ಜೆ ಮ್ಯಾಜಿಸ್ಟ್ರೇಟರ ಮುಂದೆ ನಾನು ಮಾಡಿದ ಘೋಷಣೆಯನ್ನು ಮತ್ತು ಆ ಬಗ್ಗೆ ಕರ್ನಾಟಕ ಸರ್ಕಾರದ ಗೆಜೆಟೆಡ್ ಅಧಿಕಾರಿ: ಶಾಂತಿ ಪಾಲನಾ ನ್ಯಾಯಾಧೀಶ ಇವರು ನೀಡಿದ ಪ್ರಮಾಣ ಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದೇನೆ.

    (3) ನನ್ನ ಕ್ಲೇಮಿನ ಸಮರ್ಥನೆಗಾಗಿ ಈ ಕೆಳಕಂಡ ಹೆಚ್ಚಿನ ದಸ್ತಾವೇಜು ಸಾಕ್ಷ್ಯವನ್ನು ಒದಗಿಸಿದ್ದೇನೆ.

    (4) ನನ್ನ ಜನನ ಪ್ರಮಾಣಪತ್ರ : ಮೆಟ್ರಿಕ್ಯೂಲೇಷನ್ ಪ್ರಮಾಣಪತ್ರ ಎಸ್.ಎಸ್.ಎಲ್.ಸಿ. ಪ್ರಮಾಣಪತ್ರ : ಶಾಲಾಂತ್ಯ ಪ್ರಮಾಣ ಪತ್ರ – ಇವುಗಳ ಮೂಲ ಪ್ರತಿಗಳನ್ನು ಮತ್ತು ಅವುಗಳ ಎರಡೆರಡು ಪ್ರತಿಗಳನ್ನು ಈ ಮೂಲಕ ಕಳುಹಿಸಿದ್ದೇನೆ. ಮೂಲ ಪ್ರಮಾಣ ಪತ್ರವನ್ನು ಅವಶ್ಯವಿಲ್ಲದಿರುವಾಗ ದಯವಿಟ್ಟು ನನಗೆ ಹಿಂದಿರುಗಿಸಿ.

    (5) 15 ರೂಪಾಯಿಗಳ (ಹದಿನೈದು ರೂಪಾಯಿಗಳು ಮಾತ್ರ) ನೋಂದಣಿ ಫೀಜನ್ನು ನಗದಾಗಿ ಸಂದಾಯ ಮಾಡಲಾಗಿದೆ. ಪೋಸ್ಟಲ್ ಆರ್ಡರ್: ಮನಿಯಾರ್ಡರ್ ಮೂಲಕ ಕಳುಹಿಸಲಾಗಿದೆ.

    (6) ಅಧಿನಿಯದ 21ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಮುಚ್ಚಳಿಕೆಯನ್ನು ಈ ಮೂಲಕ ಒದಗಿಸಲಾಗಿದೆ.

    (7) ಈ ನಮೂನೆಯೊಡನೆ ಕಳುಹಿಸಿದ ಸೂಚನೆಗಳನ್ನು ನಾನು ಜಾಗರೂಕತೆಯಿಂದ ಓದಿಕೊಂಡಿದ್ದೇನೆ ಮತ್ತು ಮೇಲೆ ಒದಗಿಸಿರುವ ವಿವರಗಳು ನನಗೆ ತಿಳಿದಿರುವ ಮತ್ತು ನಾನು ನಂಬಿರುವಷ್ಟರ ಮಟ್ಟಿಗೆ ಸತ್ಯವಾದುದೆಂದು ನಾನು ಪ್ರಮಾಣೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

ದಿನಾಂಕ: ಅರ್ಜಿದಾರನ ಸಹಿ

ಸ್ಥಳ:

**ನಮೂನೆ – ' ಡಿ '**
**(ನಿಯಮ – 9)**
**ನವೀಕರಣ ಚೀಟಿ**

ಸಂಖ್ಯೆ ——————————————————*/** ಎಂಬುವರ ನೋಂದಣಿ: ಸೇರ್ಪಡೆಯನ್ನು ——————————————————* * * ವರೆಗೆ ನವೀಕರಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

ಮೊಹರು.

ರಿಜಿಸ್ಟ್ರಾರನ ರುಜು.

* ಇಲ್ಲಿ ವ್ಯಕ್ತಿಯವರ ಹೆಸರನ್ನು ಬರೆಯಿರಿ.
** ಅನ್ವಯವಾಗದಿರುವುದನ್ನು ಪರ್ಯಾಯವನ್ನು ಹೊಡೆದುಹಾಕಿ.
*** ಇಲ್ಲಿ ದಿನಾಂಕವನ್ನು ಬರೆಯಿರಿ.

(ಪಿಎಲ್‌ಎಂ 356 ಪಿಐಎಂ 64)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಲ್.ಎ. ಧಮಣಗಿ,**
ಸರ್ಕಾರದ ಉಪ ಕಾರ್ಯದರ್ಶಿ,
ಸಾರ್ವಜನಿಕ ಆರೋಗ್ಯ, ಕಾರ್ಮಿಕ
ಮತ್ತು ಪೌರ ಆಡಳಿತ ಇಲಾಖೆ.

# ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿ (ಚುನಾವಣೆ) ನಿಯಮಗಳು, 1964.

## ವಿಷಯಾನುಕ್ರಮಣಿಕೆ

**ನಿಯಮ ಸಂಖ್ಯೆ**

### ಭಾಗ – I

### ಪ್ರಾರಂಭಿಕ


1. ಹೆಸರು
2. ಪರಿಭಾಷೆಗಳು


### ಭಾಗ – II

### ಮಂಡಳಿಯ ಸದಸ್ಯರ ಚುನಾವಣೆ


3. ಸದಸ್ಯರ ಚುನಾವಣೆಗಾಗಿ ಮತದಾರರ ಪಟ್ಟಿ
4. ನಾಮನಿರ್ದೇಶನ ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು
5. ಸದಸ್ಯರಾಗಿ ಚುನಾಯಿತರಾಗಲು ಅರ್ಹತೆಗಳು
6. ಅಭ್ಯರ್ಥಿಗಳ ನಾಮನಿರ್ದೇಶನ

6ಎ. ಠೇವಣಿ ಮೊಬಲಗು

7. ನಾಮ ಪತ್ರವನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ
8. ನಾಮಗಳ ಪರಿಶೀಲನೆ
9. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು
10. ಸ್ಪರ್ಧಿಸಲಾದ ಮತ್ತು ಅವಿರೋಧ ಚುನಾವಣೆಗಳಲ್ಲಿನ ಪ್ರಕ್ರಿಯೆ
11. ಮತದಾರರಿಗೆ ಮತಪತ್ರಗಳನ್ನು ರವಾನಿಸುವುದು
12. ರಿಟರ್ನಿಂಗ್ ಆಫೀಸರನಿಗೆ ಮತಪತ್ರಗಳನ್ನು ರವಾನಿಸುವುದು
13. ಮತಗಳ ಎಣಿಕೆ
14. ವ್ಯವಹರಣೆಗಳ ದಾಖಲೆ ಮತ್ತು ಚುನಾವಣಾ ಫಲಿತಾಂಶದ ಪ್ರಕಟಣೆ
15. ಚುನಾವಣಾ ಕಾಗದ ಪತ್ರಗಳನ್ನು ಮೊಹರು ಮಾಡುವುದು ಮತ್ತು ಅವುಗಳ ಅಭಿರಕ್ಷೆ
16. ಚುನಾವಣೆ ಬಗ್ಗೆ ವಿವಾದ
17. ಚುನಾವಣಾ ತಕರಾರು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ
18. ಚುನಾಯಿತ ಉಮೇದುವಾರನ ಚುನಾವಣೆಯನ್ನು ಅನೂರ್ಜಿತವಾಗಿದೆ ಎಂದು ಘೋಷಿಸುವುದಕ್ಕೆ ಆಧಾರಗಳು
19. ಯಾವ ಆಧಾರಗಳ ಮೇಲೆ ಚುನಾಯಿತ ಉಮೇದುವಾರನನ್ನು ಹೊರತುಪಡಿಸಿ ಇತರ ಉಮೇದುವಾರನು ಚುನಾಯಿತನಾಗಿರುವನೆಂದು ಘೋಷಿಸಬಹುದೊ ಅಂಥ ಆಧಾರಗಳು
20. ಆಕಸ್ಮಿಕ ಖಾಲಿ ಸ್ಥಾನಗಳು


### ಭಾಗ – III

### ಅಧ್ಯಕ್ಷನ ಚುನಾವಣೆ


21. ಅಧ್ಯಕ್ಷನ ಚುನಾವಣೆಗಾಗಿ ರಿಟರ್ನಿಂಗ್ ಆಫೀಸರ್
22. ಅಧ್ಯಕ್ಷನ ಚುನಾವಣೆಗಾಗಿ ನಾಮಪತ್ರ ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು

23. ನಾಮಪತ್ರದ ದಿನಾಂಕದ ತರುವಾಯ ಅಧ್ಯಕ್ಷನ ಚುನಾವಣೆಯನ್ನು ನಡೆಸುವುದಕ್ಕಾಗಿ ಅನ್ವಯವಾಗುವ ನಿಯಮಗಳು

24. ಮಂಡಲಿಯ ಕಚೇರಿಯಲ್ಲಿ ಮತಗಳನ್ನು ತೆಗೆದುಕೊಳ್ಳತಕ್ಕದ್ದು

25. ಚುನಾವಣೆಗಳನ್ನು ನಡೆಸುವುದಕ್ಕಾಗಿ ಪ್ರಕ್ರಿಯೆ

26. ಮತಗಳ ಎಣಿಕೆ

27. ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳುವುದು

28. ಚುನಾವಣಾ ಅರ್ಜಿಗಳು

29. ಆಕಸ್ಮಿಕ ಖಾಲಿ ಸ್ಥಾನಗಳು

**ಭಾಗ - IV**

**ಮಂಡಲಿಯಿಂದ ಪರೀಕ್ಷಕರ ಸಮಿತಿಯ ಸದಸ್ಯರ ಚುನಾವಣೆ**

30. ರಿಜಿಸ್ಟ್ರಾರನು ರಿಟರ್ನಿಂಗ್ ಆಫೀಸರನಾಗಿರುವುದು

31. ಪರೀಕ್ಷಕರ ಸಮಿತಿಗೆ ಸದಸ್ಯರ ಚುನಾವಣೆಗಾಗಿ ನಿಯಮಗಳ ಅನ್ವಯ

ನಮೂನೆ I ರಿಂದ VI ವರೆಗೆ

**ಅಧಿಸೂಚನೆ**

**ಬೆಂಗಳೂರು, ದಿನಾಂಕ 20ನೇ ಜನವರಿ 1965**

**ಜಿ.ಎಸ್.ಆರ್. 362.**- ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1961ರ 35)ರ 35ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿ (ಚುನಾವಣೆ) ನಿಯಮಗಳು, 1964 ಇದನ್ನು ರಚಿಸುತ್ತದೆ. ಇದರ ಕರಡನ್ನು ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ 1964ರ ಏಪ್ರಿಲ್ 9ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ IVನೇ ಭಾಗ - (i)ನೇ ವಿಭಾಗದಲ್ಲಿ ಜಿ.ಎಸ್.ಆರ್.82ರ ಸಂಖ್ಯೆಯಲ್ಲಿ 1964ರ ಮಾರ್ಚ್ 10ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಪಿ.ಎಲ್.ಎಂ. 228 ಪಿಐಎಂ 64: ಭಾಗ - I ರಲ್ಲಿ ಈ ಹಿಂದೆಯೇ ಪ್ರಕಟಿಸಲಾಗಿದೆ.

## ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿ (ಚುನಾವಣೆ) ನಿಯಮಗಳು, 1964.

### ಭಾಗ - I

### ಪ್ರಾರಂಭಿಕ

**1. ಹೆಸರು.**- ಈ ನಿಯಮಗಳನ್ನು ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿ (ಚುನಾವಣೆ) ನಿಯಮಗಳು, 1964 ಎಂದು ಕರೆಯತಕ್ಕದ್ದು.

2. ಪರಿಭಾಷೆಗಳು:- ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) " ಅಧಿನಿಯಮ " ಎಂದರೆ ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961.

(ಬಿ) " ನಮೂನೆ " ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ.

(ಸಿ) " ಪ್ರಕರಣ " ಎಂದರೆ ಈ ಅಧಿನಿಯಮದ ಪ್ರಕರಣ.

### ಭಾಗ - II

### ಮಂಡಲಿಯ ಸದಸ್ಯರ ಚುನಾವಣೆ

[1][3. ಸದಸ್ಯರ ಚುನಾವಣೆಗಾಗಿ ಮತದಾರರ ಪಟ್ಟಿ:- (1) 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರ ಚುನಾವಣೆಯ ಉದ್ದೇಶಗಳಿಗಾಗಿ ಚುನಾವಣಾಧಿಕಾರಿಯಾಗಿರತಕ್ಕ ರಿಜಿಸ್ಟ್ರಾರನು ಪ್ರಾರಂಭಿಕ ಮತದಾರರ ಪಟ್ಟಿಯನ್ನು ತಯಾರಿಸತಕ್ಕುದು. 34ನೇ ಪ್ರಕರಣದ ಮೇರೆಗೆ ಪ್ರಕಟಿಸಿದ ಪಟ್ಟಿಯಲ್ಲಿ ಒಳಗೊಂಡಿರುವ 'ಎ' ಭಾಗ ಮತ್ತು 'ಬಿ' ಭಾಗದಲ್ಲಿ ನಮೂದಿಸಲಾದ ನೋಂದಾಯಿತ ವೃತ್ತಿಗಾರರ ಹೆಸರುಗಳನ್ನು ಪ್ರತಿಯೊಂದು ಭಾಗಕ್ಕೆ ಸಂಬಂಧಿಸಿದಂತೆ ಅಕ್ಷರಾನುಕ್ರಮದಲ್ಲಿ ನಮೂದಿಸತಕ್ಕುದು ಮತ್ತು 'ಬಿ' ಭಾಗಕ್ಕೆ ಸಂಬಂಧಿಸಿದಂತೆ ಅಂಥ ನೋಂದಾಯಿತ ವೃತ್ತಿಗಾರರ ಹೆಸರುಗಳು, ಸಂದರ್ಭಾನುಸಾರ 'ಎ' ಅಥವಾ 'ಬಿ' ಭಾಗದಲ್ಲಿ ನಮೂದಿಸಿದ ಹೆಸರುಗಳ ವೃತ್ತಿಗಾರರ ಪೈಕಿ ಸದಸ್ಯರ ಚುನಾವಣೆಯ ಉದ್ದೇಶಗಳಿಗಾಗಿ ಪ್ರಾರಂಭಿಕ ಮತದಾರರ ಪಟ್ಟಿಯಾಗಿರತಕ್ಕದ್ದು ಮತ್ತು ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು:

ಪರಂತು, ಅಧಿನಿಯಮದ ಮೇರೆಗೆ ಮೊದಲನೆಯ ಬಾರಿಗೆ ನಡೆಸಬೇಕಾದ ಚುನಾವಣೆಗಳ ಸಂದರ್ಭದಲ್ಲಿ, 22ನೇ ಪ್ರಕರಣದ ಮೇರೆಗೆ ಇಟ್ಟಿರುವ ವೃತ್ತಿಗಾರರ ರಿಜಿಸ್ಟರಿನ ಎ ಮತ್ತು ಬಿ ಭಾಗದಲ್ಲಿ ಕಂಡುಬರುವ ನೋಂದಾಯಿತ ವೃತ್ತಿಗಾರರ ಹೆಸರುಗಳನ್ನು ಪ್ರತಿಯೊಂದು ಭಾಗಕ್ಕೆ ಸಂಬಂಧಿಸಿದಂತೆ ಅಕ್ಷರಾನುಕ್ರಮದಲ್ಲಿ ನಮೂದಿಸತಕ್ಕುದು. ಎ ಮತ್ತು ಬಿ ಭಾಗಕ್ಕೆ ಸಂಬಂಧಿಸಿದಂತೆ ಅಂಥ ನೋಂದಾಯಿತ ವೃತ್ತಿಗಾರರ ಹೆಸರುಗಳು, ಸಂದರ್ಭಾನುಸಾರ ರಿಜಿಸ್ಟರಿನ ಎ ಅಥವಾ ಬಿ ಭಾಗದಲ್ಲಿ ನಮೂದಿಸಲಾದ ಹೆಸರಿನ ವೃತ್ತಿಗಾರರ ಪೈಕಿ ಸದಸ್ಯರ ಚುನಾವಣೆಯ ಉದ್ದೇಶಗಳಿಗಾಗಿ ಪ್ರಾರಂಭಿಕ ಮತದಾರರ ಪಟ್ಟಿಯಾಗಿರತಕ್ಕದ್ದು: ಮತ್ತು ಅದನ್ನು ಮಂಡಲಿಯ ಕಛೇರಿಯ ನೋಟೀಸ್ ಬೋರ್ಡಿನ ಮೇಲೆ ಮತ್ತು ಆ ಉದ್ದೇಶಕ್ಕಾಗಿ ಚುನಾವಣಾ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂತಹ ಇತರ ಸ್ಥಳ ಅಥವಾ ಸ್ಥಳಗಳಲ್ಲಿ ಪ್ರಕಟಿಸತಕ್ಕುದು ಮತ್ತು ನೋಟೀಸ್ ಬೋರ್ಡಿನ ಮೇಲೆ ಪ್ರಾರಂಭಿಕ ಮತದಾರರ ಪಟ್ಟಿಯ ಅಂಥ ಪ್ರಕಟಣೆಯ ಸಂಗತಿಯನ್ನು ರಾಜ್ಯದಲ್ಲಿ ಅತಿ ಹೆಚ್ಚು ಪ್ರಸಾರವನ್ನು ಹೊಂದಿರುವ ಕನ್ನಡ ಮತ್ತು ಇಂಗ್ಲೀಷ್ ಸುದ್ದಿಪತ್ರಿಕೆಗಳಲ್ಲಿ ನೋಟೀಸನ್ನು ಪ್ರಕಟಿಸುವ ಮೂಲಕ, ಅಂಥ ನೋಟೀಸಿನಲ್ಲಿ ಪ್ರಾರಂಭಿಕ ಮತದಾರರ ಪಟ್ಟಿಯಲ್ಲಿನ ನಮೂದುಗಳು ಅಥವಾ ಲೋಪಗಳಿಗೆ ಸಂಬಂಧಪಟ್ಟಂತೆ

ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಯಾವ ಕೊನೆಯ ದಿನಾಂಕದ ಒಳಗಾಗಿ ಮಾಡಿಕೊಳ್ಳತಕ್ಕುದೋ ಆ ದಿನಾಂಕವನ್ನು ಸಹ ನಿರ್ದಿಷ್ಟಪಡಿಸಿ ಏಕಕಾಲದಲ್ಲಿ ಪ್ರಕಟಿಸತಕ್ಕದ್ದು.

(2) ರಿಟರ್ನಿಂಗ್ ಆಫೀಸರನು, (1)ನೇ ಉಪನಿಯಮದ ಮೇರೆಗೆ ಸೂಚಿಸಿರುವಂತೆ ಮತದಾರರ ಮಂಡಲಿಗಾಗಿ ಎಲ್ಲಾ ಮತದಾರರ ಹೆಸರುಗಳನ್ನೊಳಗೊಂಡ ಪ್ರಾರಂಭಿಕ ಮತದಾರರ ಪಟ್ಟಿಯನ್ನು (1)ನೇ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಬೇಕಾದ ದಿನಾಂಕದಂದು ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(3) ರಿಟರ್ನಿಂಗ್ ಆಫೀಸರನು, ಪ್ರಾರಂಭಿಕ ಮತದಾರರ ಪಟ್ಟಿಯಲ್ಲಿನ ನಮೂದುಗಳು ಅಥವಾ ಲೋಪಗಳಿಗೆ ಸಂಬಂಧಪಟ್ಟಂತೆ ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಯಾವ ವಿಧಾನದಲ್ಲಿ ಮತ್ತು ಯಾವ ಕಾಲದ ಒಳಗೆ ಸಲ್ಲಿಸಬೇಕೋ ಆ ವಿಧಾನ ಮತ್ತು ಕಾಲವನ್ನು ನಿರ್ದಿಷ್ಟಪಡಿಸಿ ರಾಜಪತ್ರದಲ್ಲಿ ನೋಟೀಸನ್ನು ಏಕಕಾಲದಲ್ಲಿ ಪ್ರಕಟಿಸತಕ್ಕದ್ದು.

(4) ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಸ್ವೀಕೃತಿಗಾಗಿ ನಿಗದಿಪಡಿಸಿದ ದಿನಾಂಕದಂದು ಅಥವಾ ಆ ತರುವಾಯ ರಿಟರ್ನಿಂಗ್ ಆಫೀಸರನು ಪ್ರತಿಯೊಂದು ಕ್ಲೇಮು ಅಥವಾ ಆಕ್ಷೇಪಣೆಯ ಮೇಲೆ ಲಿಖಿತದಲ್ಲಿ ಆದೇಶಗಳನ್ನು ಹೊರಡಿಸತಕ್ಕದ್ದು ಮತ್ತು ಅಂಥ ಆದೇಶಗಳಿಗನುಸಾರವಾಗಿ ರಿಜಿಸ್ಟರಿನ ಎ ಮತ್ತು ಬಿ ಭಾಗಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕ ಮತದಾರರ ಪಟ್ಟಿಯನ್ನು ಪರಿಷ್ಕರಿಸತಕ್ಕದ್ದು ಮತ್ತು ಹಾಗೆ ಪರಿಷ್ಕರಿಸಿದ ಪಟ್ಟಿಗಳನ್ನು ಸಂದರ್ಭಾನುಸಾರ ರಿಜಿಸ್ಟರಿನ ಎ ಭಾಗ ಅಥವಾ ಬಿ ಭಾಗದಲ್ಲಿ ನಮೂದಿಸಲಾದ ಹೆಸರುಗಳ ವೃತ್ತಿಗಾರರಿಗೆ ಹಂಚಲಾದ ಸ್ಥಾನಗಳಿಗೆ ಸದಸ್ಯರ ಚುನಾವಣೆಗಾಗಿ ಇರುವ ಅಂತಿಮ ಮತದಾರರ ಪಟ್ಟಿಯಾಗಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.][1]

1. ಅಧಿಸೂಚನೆ ಸಂ: ಜಿಎಸ್ಆರ್ 7 ದಿನಾಂಕ: 4.12.1973ರ ಮೂಲಕ ಪ್ರತಿಯೋಜಿಸಲಾಗಿದೆ.

**4. ನಾಮನಿರ್ದೇಶನ ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು.–**

(1) ರಿಟರ್ನಿಂಗ್ ಆಫೀಸರನು, ರಾಜಪತ್ರದಲ್ಲಿ ಮತ್ತು ಮಂಡಲಿಯ ಕಛೇರಿಯ ನೋಟೀಸ್ ಬೋರ್ಡಿನ ಮೇಲೆ ಪ್ರಕಟಿಸಿದ (1)ನೇ ನಮೂನೆಯಲ್ಲಿನ ನೋಟೀಸಿನ ಮೂಲಕ 3ನೇ ಪ್ರಕರಣದ (2)ನೇ ಉಪಪ್ರಕರಣದ (iii)ನೇ ಖಂಡದ ಅನುಕ್ರಮವಾಗಿ (ಎ) ಮತ್ತು (ಬಿ) ಉಪಖಂಡಗಳಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಚುನಾವಣೆಗಾಗಿ,–

(ಎ) ರಾಜಪತ್ರದಲ್ಲಿ ಆ ನೋಟೀಸಿನ ಪ್ರಕಟಣೆಯ ದಿನಾಂಕದ ತರುವಾಯದ ಎಂಟನೇ ದಿನವನ್ನು ಮೀರದ ದಿನಾಂಕವಾಗಿರತಕ್ಕ ಎಂದರೆ, ನಾಮನಿರ್ದೇಶನಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು;

(ಬಿ) ನಾಮನಿರ್ದೇಶನಪತ್ರಗಳನ್ನು ಸಲ್ಲಿಸುವುದಕ್ಕಾಗಿ ನಿರ್ದಿಷ್ಟ ಪಡಿಸಿದ ಕೊನೆಯ ದಿನಾಂಕದ ತರುವಾಯದ ಮೂರನೇ ದಿನವನ್ನು ಮೀರದ ದಿನಾಂಕವಾಗಿರತಕ್ಕ ಪತ್ರಗಳನ್ನು ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸುವ ದಿನಾಂಕ;

(ಸಿ) ನಾಮಪತ್ರಗಳ ಪರಿಶೀಲನೆಯ ದಿನಾಂಕದ ತರುವಾಯದ ಮೂರನೇ ದಿನವಾಗಿರತಕ್ಕ ಎಂದರೆ, ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ನಿರ್ದಿಷ್ಟಪಡಿಸಿರುವ ಕೊನೆಯ ದಿನಾಂಕವನ್ನು; ಮತ್ತು

[1][(ಡಿ) ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕದ ತರುವಾಯದ ಏಳನೇ ದಿನಕ್ಕಿಂತ ಮುಂಚಿತವಲ್ಲದ ದಿನಾಂಕವಾಗಿರತಕ್ಕ, ಎಂದರೆ ಮತಪತ್ರಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು; ಮತ್ತು

(ಇ) ಮತಗಳ ಎಣಿಕೆಗಾಗಿ ಇರುವ ದಿನಾಂಕವನ್ನು][1]

– ಗೊತ್ತುಪಡಿಸತಕ್ಕದ್ದು.

1. ಅಧಿಸೂಚನೆ ಸಂ: ಜಿಎಸ್ಆರ್ 7 ದಿನಾಂಕ: 4.12.1973ರ ಮೂಲಕ ಪ್ರತಿಯೋಜಿಸಲಾಗಿದೆ.

**5. ಸದಸ್ಯರಾಗಿ ಚುನಾಯಿತರಾಗಲು ಅರ್ಹತೆಗಳು.–** [1][3ನೇ ನಿಯಮದ (4)ನೇ ಉಪನಿಯಮದ ಮೇರೆಗೆ ಪ್ರಕಟಿಸಲಾದ ಅಂತಿಮ][1] ಮತದಾರರ ಪಟ್ಟಿಯಲ್ಲಿ ನಮೂದಿಸಲಾದ ಹೆಸರಿನ ಪ್ರತಿಯೊಬ್ಬ ವ್ಯಕ್ತಿಯು, 10ನೇ ಪ್ರಕರಣದ ಮೇರೆಗೆ ಅನರ್ಹನಾಗಿದ್ದ ಹೊರತು, ಅವನು ಮತದಾರನಾಗಿರುವಂಥ ಚುನಾವಣಾ ಕ್ಷೇತ್ರದಿಂದ ಸದಸ್ಯನಾಗಿ ಚುನಾವಣೆಗೆ ನಿಲ್ಲಲು ಅರ್ಹನಾಗಿರತಕ್ಕದ್ದು.

1. ಅಧಿಸೂಚನೆ ಸಂ: ಜಿಎಸ್ಆರ್ 7 ದಿನಾಂಕ: 4.12.1973ರ ಮೂಲಕ ಪ್ರತಿಯೋಜಿಸಲಾಗಿದೆ.

**6. ಅಭ್ಯರ್ಥಿಗಳ ನಾಮನಿರ್ದೇಶನ.**- (1) ಚುನಾವಣೆಗಾಗಿ ನಿಲ್ಲುವ ಪ್ರತಿಯೊಬ್ಬ ಅಭ್ಯರ್ಥಿಯು ನಮೂನೆ – II ರಲ್ಲಿ ಭರ್ತಿ ಮಾಡಿದ ಮತ್ತು ನಾಮನಿರ್ದೇಶನಕ್ಕೆ ಸ್ವತಃ ಅನುಮತಿಸಿರುವುದಾಗಿ ಅಭ್ಯರ್ಥಿಯು ಮತ್ತು ಇಬ್ಬರು ಮತದಾರರು ಸೂಚಕ ಮತ್ತು ಅನುಮೋದಕರಾಗಿ ರುಜು ಮಾಡಿದ ನಾಮನಿರ್ದೇಶನ ಪತ್ರದ ಮೂಲಕ ನಾಮ ನಿರ್ದೇಶಿತನಾಗತಕ್ಕದ್ದು.

(2) 4ನೇ ನಿಯಮದ (ಎ) ಖಂಡದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ, ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿಯಾಗಲೀ ಅಥವಾ ಅವನ ಹೆಸರನ್ನು ಸೂಚಿಸುವವನ ಅಥವಾ ಅನುಮೋದಿಸುವವನ ಮೂಲಕವಾಗಲಿ, ಅಭ್ಯರ್ಥಿಯು ರುಜು ಮಾಡಿದ ನಾಮನಿರ್ದೇಶನ ಪತ್ರವನ್ನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಪೂರ್ವಾಹ್ನ 11 ಗಂಟೆ ಮತ್ತು ಅಪರಾಹ್ನದ 3 ಗಂಟೆಯ ನಡುವಣ ವೇಳೆಯಲ್ಲಿ ರಿಟರ್ನಿಂಗ್ ಆಫೀಸರನ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಗೆ (ಇಲ್ಲಿ ಇನ್ನು ಮುಂದೆ ಅಧಿಕೃತಗೊಳಿಸಿದ ಅಧಿಕಾರಿ ಎಂದು ಉಲ್ಲೇಖಿಸಿದೆ) ಒಪ್ಪಿಸತಕ್ಕದ್ದು.

(3) 4ನೇ ನಿಯಮದ (ಎ) ಖಂಡದ ಮೇರೆಗೆ ಗೊತ್ತುಪಡಿಸಿದ ಕೊನೆಯ ದಿನಾಂಕದಂದು ಅಪರಾಹ್ನ 3 ಗಂಟೆಗೆ ಮುಂಚೆ ತಲುಪದ ಯಾವುದೇ ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸತಕ್ಕದ್ದು.

(4) ಯಾವುದೇ ಚುನಾವಣೆಯಲ್ಲಿ ಯಾರೇ ಮತದಾರನು ಒಂದಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರಕ್ಕೆ ಸೂಚಕನಂತೆ ಆಗಲಿ ಅಥವಾ ಅನುಮೋದಕನಂತೆ ಆಗಲಿ ರುಜು ಮಾಡತಕ್ಕದ್ದಲ್ಲ.

(5) ಈ ನಿಯಮದಲ್ಲಿರುವುದು ಯಾವುದೂ, ಒಂದೇ ಚುನಾವಣೆಗಾಗಿ ಒಂದಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರದ ಮೂಲಕ ನಾಮನಿರ್ದೇಶಿತನಾಗಲು ಯಾರೇ ಅಭ್ಯರ್ಥಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

[1][**6ಎ. ಠೇವಣಿ ಮೊಬಲಗು.**- (1) ಪ್ರತಿಯೊಬ್ಬ ಅಭ್ಯರ್ಥಿಯು ನಾಮನಿರ್ದೇಶನಕ್ಕಾಗಿ ಇರುವ ಸೂಚನೆಯೊಂದಿಗೆ ಐವತ್ತು ರೂಪಾಯಿಗಳನ್ನು ನಗದಾಗಿ ರಿಟರ್ನಿಂಗ್ ಆಫೀಸರ್‌ನ ಬಳಿ ಠೇವಣಿ ಇಡತಕ್ಕದ್ದು. ಅಂಥ ಠೇವಣಿಯೊಂದಿಗೆ ಇರದ ನಾಮನಿರ್ದೇಶನ ಪತ್ರವನ್ನು ರಿಟರ್ನಿಂಗ್ ಆಫೀಸರನು ಅಂಗೀಕರಿಸತಕ್ಕದ್ದಲ್ಲ. ಆ ಠೇವಣಿಯನ್ನು (2)ನೇ ಉಪ ನಿಯಮದ ಮೇರೆಗೆ ಮುಟ್ಟುಗೋಲು ಹಾಕಿಕೊಳ್ಳದಿದ್ದರೆ ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ ಆದಷ್ಟು ಬೇಗನೇ ಅಭ್ಯರ್ಥಿಗೆ,-

(ಎ) ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿತನಾಗಿದ್ದರೆ; ಅಥವಾ ಹಾಗೆ ಭಾವಿಸಲಾಗಿದ್ದರೆ;

(ಬಿ) ಅಭ್ಯರ್ಥಿಯ ನಾಮನಿರ್ದೇಶನವನ್ನು ಅಸಿಂಧುವೆಂದು ಘೋಷಿಸಲಾಗಿದ್ದರೆ; ಅಥವಾ

(ಸಿ) ಅಭ್ಯರ್ಥಿಯು, ನಾಮನಿರ್ದೇಶನ ಪತ್ರಗಳ ಪರಿಶೋಧನೆಯ ತರುವಾಯ ಮತ್ತು ಚುನಾವಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಮೃತನಾದರೆ; ಅಥವಾ

(ಡಿ) ಅಭ್ಯರ್ಥಿಯು ಚುನಾಯಿತನಾಗಲು ವಿಫಲನಾಗಿದ್ದು, ಆದರೆ, (2)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಸಿಂಧುವಾದ ಮತಗಳನ್ನು ಪಡೆದಿದ್ದರೆ

– ಹಿಂತಿರುಗಿಸತಕ್ಕದ್ದು.

ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಮತ್ತು ಅವನ ಪರವಾಗಿ ದಾಖಲಾಗಿರುವ ಸಿಂಧುವಾದ ಮತಗಳ ಸಂಖ್ಯೆಯು ದಾಖಲಾಗಿರುವ ಮತಗಳ ಒಟ್ಟು ಸಂಖ್ಯೆಯ $1/8$ ಕ್ಕಿಂತ ಕಡಿಮೆ ಇದ್ದರೆ ಅಥವಾ ಚುನಾಯಿತರಾಗಬೇಕಾದ ಸದಸ್ಯರ ಒಟ್ಟು ಸಂಖ್ಯೆಯು ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವಲ್ಲಿ ಅವನ ಪರವಾಗಿ ದಾಖಲಾದ ಸಿಂಧುವಾದ ಮತಗಳ ಸಂಖ್ಯೆಯು ದಾಖಲಾಗಿರುವ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತರಾಗಬೇಕಾದ ಸದಸ್ಯರ ಒಟ್ಟು ಸಂಖ್ಯೆಯಿಂದ ಭಾಗಿಸಿದ ಮೇಲೆ ಅದು $1/8$ ಕ್ಕಿಂತ ಕಡಿಮೆ ಇದ್ದರೆ ಠೇವಣಿಯನ್ನು ಮಂಡಲಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.][1]

1. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಸೇರಿಸಲಾಗಿದೆ.

**7. ನಾಮನಿರ್ದೇಶನ ಪತ್ರವನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ.**- ನಾಮನಿರ್ದೇಶನ ಪತ್ರವನ್ನು ಹಾಜರುಪಡಿಸಿದ ಮೇಲೆ ರಿಟರ್ನಿಂಗ್ ಆಫೀಸರನು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು,-

(ಎ) ನಾಮನಿರ್ದೇಶನ ಪತ್ರವನ್ನು ಹಾಜರುಪಡಿಸಿದ ದಿನಾಂಕ ಮತ್ತು ವೇಳೆಯನ್ನು ಉಲ್ಲೇಖಿಸಿ ಅದರ ಮೇಲೆ ರುಜು ಮಾಡಿ ಪ್ರಮಾಣೀಕರಿಸತಕ್ಕದ್ದು ಮತ್ತು ಅದರ ಕ್ರಮಸಂಖ್ಯೆಯನ್ನು ನಮೂದಿಸತಕ್ಕದ್ದು; ಮತ್ತು

(ಬಿ) ನಾಮನಿರ್ದೇಶನ ಪತ್ರವನ್ನು ಹಾಜರುಪಡಿಸುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ನಾಮನಿರ್ದೇಶನಗಳ ಪರಿಶೋಧನೆಗಾಗಿ ನಿಗದಿಪಡಿಸಿದ ದಿನಾಂಕ ಮತ್ತು ವೇಳೆಯನ್ನು ತಿಳಿಸತಕ್ಕದ್ದು.

**8. ನಾಮನಿರ್ದೇಶನಗಳ ಪರಿಶೀಲನೆ.–** (1) 4ನೇ ನಿಯಮದ ಮೇರೆಗೆ ನಾಮ ನಿರ್ದೇಶನಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು, ನಾಮನಿರ್ದೇಶನಗಳನ್ನು ಪರಿಶೀಲಿಸುವ ಕಾಲದಲ್ಲಿ ಉಮೇದುವಾರ ಮತ್ತು ಅಂಥ ಉಮೇದುವಾರನ ಒಬ್ಬ ಸೂಚಕ ಮತ್ತು ಒಬ್ಬ ಅನುಮೋದಕನು ಹಾಜರಿರಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ರಿಟರ್ನಿಂಗ್ ಆಫೀಸರನು, ಅವರಿಗೆ 6ನೇ ನಿಯಮದಲ್ಲಿ ಹೇಳಲಾದ ಸಮಯದೊಳಗೆ ಮತ್ತು ರೀತಿಯಲ್ಲಿರುವಂಥ ಎಲ್ಲ ಉಮೇದುವಾರರ ನಾಮನಿರ್ದೇಶನ ಪತ್ರಗಳನ್ನು ಪರೀಕ್ಷಿಸುವುದಕ್ಕಾಗಿ ಯುಕ್ತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(2) ರಿಟರ್ನಿಂಗ್ ಆಫೀಸರನು ತರುವಾಯ ನಾಮನಿರ್ದೇಶನ ಪತ್ರಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಅವುಗಳ ಪೈಕಿ ಯಾವುದೇ ನಾಮನಿರ್ದೇಶನ ಪತ್ರಗಳ ಸಂಬಂಧದಲ್ಲಿ ಮಾಡಬಹುದಾದಂಥ ಎಲ್ಲಾ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕದ್ದು.

(3) ರಿಟರ್ನಿಂಗ್ ಆಫೀಸರನು ಅಂಥ ಆಕ್ಷೇಪಣೆ ಮೇಲೆ ಆಗಲಿ ಅಥವಾ ತಾನಾಗಿಯೇ ಮತ್ತು ತಾನು ಅವಶ್ಯವೆಂದು ಆಲೋಚಿಸುವಂಥ ಕ್ಷಿಪ್ರ ವಿಚಾರಣೆ ಯಾವುದಾದರೂ ಇದ್ದರೆ, ಅನಂತರ ನಾಮನಿರ್ದೇಶನ ಪತ್ರವನ್ನು ಕೆಳಕಂಡ ಯಾವುದೇ ಕಾರಣದ ಮೇಲೆ ತಿರಸ್ಕರಿಸಬಹುದು, ಎಂದರೆ:–

(ಎ) ಸೂಚಕ ಅಥವಾ ಅನುಮೋದಕನು ನಾಮನಿರ್ದೇಶನ ಪತ್ರಕ್ಕೆ ರುಜು ಮಾಡಲು ಅನರ್ಹನಾಗಿರುವುದು; ಅಥವಾ

(ಬಿ) ರುಜು ನೈಜವಾಗಿಲ್ಲದಿರುವುದು ಅಥವಾ ಅದನ್ನು ಮೋಸದಿಂದ ಪಡೆದಿರುವುದು; ಅಥವಾ

(ಸಿ) ನಾಮನಿರ್ದೇಶನ ಪತ್ರವನ್ನು ಕ್ರಮಬದ್ಧವಾಗಿ ಭರ್ತಿ ಮಾಡದಿರುವುದು ಮತ್ತು ನ್ಯೂನತೆ ಅಥವಾ ಅಕ್ರಮತೆ ಗಣನೀಯ ಸ್ವರೂಪದ್ದಾಗಿರುವುದು; ಅಥವಾ

(ಡಿ) ಸೂಚಕ ಅಥವಾ ಅನುಮೋದಕನು ಅದೇ ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರನು, ಈ ಮೊದಲೇ ಸ್ವೀಕರಿಸಿದ ಯಾವುದೇ ಇತರ ನಾಮನಿರ್ದೇಶನ ಪತ್ರಕ್ಕೆ ಸೂಚಕನಾಗಿ ಆಗಲಿ ಅಥವಾ ಅನುಮೋದಕನಾಗಿ ಆಗಲಿ ರುಜು ಮಾಡಿರುವುದು.

(4) ರಿಟರ್ನಿಂಗ್ ಆಫೀಸರನು, 4ನೇ ನಿಯಮದ ಮೇರೆಗೆ ಈ ಬಗ್ಗೆ ಗೊತ್ತುಪಡಿಸಿದ ದಿನಾಂಕದಂದು ಪರಿಶೀಲನೆಯನ್ನು ನಡೆಸತಕ್ಕದ್ದು ಮತ್ತು ಅಂಥ ವ್ಯವಹರಣೆಗಳು ಬಹಿರಂಗ ಹಿಂಸೆ ಅಥವಾ ತನ್ನ ನಿಯಂತ್ರಣಕ್ಕೆ ಮೀರಿದ ಕಾರಣಗಳ ಮೂಲಕ ವಿಘ್ನಗೊಂಡಿದ್ದಾಗ ಅಥವಾ ಅಡ್ಡಿಯಾಗಿದ್ದಾಗ ಹೊರತು, ಆ ವ್ಯವಹರಣೆಗಳ ಯಾವುದೇ ಮುಂದೂಡುವಿಕೆಗೆ ಅನುಮತಿಸತಕ್ಕದ್ದಲ್ಲ.

(5) ರಿಟರ್ನಿಂಗ್ ಆಫೀಸರನು, ಪ್ರತಿಯೊಂದು ನಾಮನಿರ್ದೇಶನ ಪತ್ರದ ಮೇಲೆ ಅದನ್ನು ತಾನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಬಗ್ಗೆ ತನ್ನ ತೀರ್ಮಾನದ ಬಗ್ಗೆ ಹಿಂಬರಹ ಮಾಡತಕ್ಕದ್ದು ಮತ್ತು ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸಿದರೆ, ಅದನ್ನು ತಿರಸ್ಕರಿಸುವುದಕ್ಕಾಗಿ ಇರುವ ತನ್ನ ಕಾರಣದ ಸಂಕ್ಷಿಪ್ತ ನಿರೂಪಣೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕುದು.

**9. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು.–** (1) ಯಾರೇ ಉಮೇದುವಾರನು, ತಾನು ರುಜು ಮಾಡಿದ ನಮೂನೆ III ರಲ್ಲಿ ಮತ್ತು 4ನೇ ನಿಯಮದ (ಸಿ) ಖಂಡದ ಮೇರೆಗೆ ನಿಗದಿಪಡಿಸಿದ ದಿವಸದಂದು ಅಪರಾಹ್ನ 3 ಗಂಟೆಗೆ ಮುಂಚೆ ರಿಟರ್ನಿಂಗ್ ಆಫೀಸರನಿಗೆ ಅಥವಾ ಅಧಿಕೃತಗೊಳಿಸಿದ ಅಧಿಕಾರಿಗೆ ಅಂಥ ಉಮೇದುವಾರನು ಖುದ್ದಾಗಿ ಅಥವಾ ಈ ಬಗ್ಗೆ ಲಿಖಿತದಲ್ಲಿ ಅಧಿಕೃತಗೊಳಿಸಲಾದ ಅವನ ಸೂಚಕ ಅಥವಾ ಅನುಮೋದಕನ ಮೂಲಕ ನೀಡಿದಂಥ ಲಿಖಿತದಲ್ಲಿನ ನೋಟೀಸಿನ ಮೂಲಕ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪನಿಯಮದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸನ್ನು ನೀಡಿರುವ ಯಾರೇ ವ್ಯಕ್ತಿಯು ಆ ನೋಟೀಸನ್ನು ರದ್ದುಪಡಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) (1)ನೇ ಉಪನಿಯಮದ ಮೇರೆಗೆ ಹಿಂದಕ್ಕೆ ತೆಗೆದುಕೊಳ್ಳುವ ನೋಟೀಸನ್ನು ಸ್ವೀಕರಿಸಿದ ಮೇಲೆ, ರಿಟರ್ನಿಂಗ್ ಆಫೀಸರನು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಅದರ ಮೇಲೆ ಅದನ್ನು ನೀಡಿದಂಥ ದಿನಾಂಕ ಮತ್ತು ಸಮಯವನ್ನು ಬರೆಯತಕ್ಕದ್ದು.

**10. ಸ್ಪರ್ಧಿಸಲಾದ ಮತ್ತು ಅವಿರೋಧ ಚುನಾವಣೆಗಳಲ್ಲಿನ ಪ್ರಕ್ರಿಯೆ.–** 9ನೇ ನಿಯಮದ (1)ನೇ ಉಪನಿಯಮದ ಮೇರೆಗೆ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದಾದ ಅವಧಿಯು ಮುಕ್ತಾಯದ ತರುವಾಯ ರಿಟರ್ನಿಂಗ್ ಆಫೀಸರನಿಗೆ,–

(ಎ) ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುವ, ಆದರೆ ತಮ್ಮ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳದೇ ಇರುವ ಉಮೇದುವಾರರ ಸಂಖ್ಯೆಯು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗೆ

ಸಮನಾಗಿದೆಯೆಂದು ಕಂಡುಬಂದರೆ ಅವನು ತತ್‍ಕ್ಷಣವೇ ಆ ಸ್ಥಾನಗಳನ್ನು ಭರ್ತಿ ಮಾಡಲು ಎಲ್ಲಾ ಅಂಥ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸತಕ್ಕದ್ದು; ಅಥವಾ

(ಬಿ) ಸಿಂಧುವಾಗಿ ನಾಮನಿರ್ದೇಶಿತನಾಗಿರುವ ಮತ್ತು ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಳ್ಳದೇ ಇರುವ ಉಮೇದುವಾರರ ಸಂಖ್ಯೆಯು ಚುನಾಯಿತರಾಗಬೇಕಾಗಿರುವ ಸದಸ್ಯರ ಸಂಖ್ಯೆಗಿಂತ ಕಡಿಮೆ ಎಂದು ಕಂಡುಬಂದರೆ ಅವನು ಅಂಥ ಉಮೇದುವಾರ ಅಥವಾ ಉಮೇದುವಾರರು ಕ್ರಮಬದ್ಧವಾಗಿ ಚುನಾಯಿತರಾಗಿರುವರೆಂದು ಘೋಷಿಸತಕ್ಕದ್ದು ಮತ್ತು ಉಳಿದಿರುವ ಖಾಲಿ ಸ್ಥಾನಗಳಿಗೆ ಸದಸ್ಯರನ್ನು ಚುನಾಯಿಸಲು ಮತದಾರರು ವಿಫಲರಾಗಿರುವುದರಿಂದಾಗಿ 4ನೇ ಪ್ರಕರಣದ ಮೇರೆಗೆ ಕ್ರಮ ಕೈಗೊಳ್ಳಲು ವರದಿ ಮಾಡತಕ್ಕದ್ದು; ಅಥವಾ

(ಸಿ) ಕ್ರಮಬದ್ಧವಾಗಿ ನಾಮನಿರ್ದೇಶಿತರಾದ, ಆದರೆ ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಳ್ಳದೇ ಇರುವ ಉಮೇದುವಾರರ ಸಂಖ್ಯೆಯು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿದ್ದರೆ, ಅವನು ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕಾಗಿ ಇರುವ ಕಾಲವು ಮುಕ್ತಾಯವಾದ ತರುವಾಯ ಅವನು, ಸ್ಪರ್ಧಿಸುವ ಉಮೇದುವಾರರ ಪಟ್ಟಿಯನ್ನು ನಮೂನೆ IV ರಲ್ಲಿ ಅಭ್ಯರ್ಥಿಗಳ ಹೆಸರನ್ನು ಅವರ ವಿಳಾಸದೊಂದಿಗೆ ಅಕ್ಷರಾನುಕ್ರಮದಲ್ಲಿ ನಮೂದಿಸಿ ಸಿದ್ಧಪಡಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು ಮತ್ತು ಆ ಪಟ್ಟಿಯ ಪ್ರತಿಯನ್ನು ಮಂಡಲಿಯ ಕಛೇರಿಯ ನೋಟೀಸು ಬೋರ್ಡಿನ ಮೇಲೆ ಅಂಟಿಸುವ ವ್ಯವಸ್ಥೆ ಮಾಡತಕ್ಕದ್ದು.

[1][11. ಮತದಾರರಿಗೆ ಮತಪತ್ರಗಳನ್ನು ರವಾನಿಸುವುದು:- (1) ಮತದಾನವು ಅವಶ್ಯವೆಂದು ಕಂಡುಬಂದರೆ, ರಿಟರ್ನಿಂಗ್ ಆಫೀಸರನು, ಅದಕ್ಕಾಗಿ ಗೊತ್ತುಪಡಿಸಿದ ದಿನಾಂಕಕ್ಕೆ ಎರಡು ವಾರಗಳಿಗೆ ಮುಂಚೆ ಪ್ರತಿಯೊಬ್ಬ ಮತದಾರನಿಗೆ ನಮೂನೆ - II ರಲ್ಲಿ ಒಂದು ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ,-

1. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಪ್ರತಿಯೋಜಿಸಲಾಗಿದೆ.

(i) ಸಂಖ್ಯೆ ಹಾಕಲಾದ ಘೋಷಣಾ ಪತ್ರ;

(ii) ನಮೂನೆ IV ರಲ್ಲಿ ಅಕ್ಷರಾನುಕ್ರಮದಲ್ಲಿ ನಮೂದಿಸಿದ ಉಮೇದುವಾರರ ಹೆಸರುಗಳನ್ನು ಒಳಗೊಂಡ ಮತ್ತು ರಿಟರ್ನಿಂಗ್ ಆಫೀಸರನ ಸಂಕ್ಷಿಪ್ತ ಸಹಿ ಅಥವಾ ಹಸ್ತಾಕ್ಷರ ಪಡಿಯಚ್ಚನ್ನು ಹೊಂದಿರುವ ಮತಪತ್ರ;

(iii) " ಮತಪತ್ರಗಳು " ಎಂಬ ಪದಗಳನ್ನು ಒಳಗೊಂಡ ಮತ್ತು ಅದರ ಮೇಲೆ ರಿಟರ್ನಿಂಗ್ ಆಫೀಸರನಿಗೆ ಸಂಬೋಧಿಸಿದ ಸಣ್ಣ ಖಾಲಿ ಲಕೋಟೆ; ಮತ್ತು

(iv) ಮೇಲೆ, ಮೇಲಿನ ಎಡಗಡೆ ಮೂಲೆಯಲ್ಲಿ ಅಕ್ಷರಾನುಕ್ರಮಸಂಖ್ಯೆ ಮತ್ತು ಕೆಳಗಡೆಯ ಎಡಗಡೆ ಮೂಲೆಯಲ್ಲಿ ಹೆಸರು ಮತ್ತು ರುಜುವಿನ ಮತ್ತು ಅಂಕಣ ಮಧ್ಯದಲ್ಲಿ ಕೆಳಕಂಡಂತೆ ಎಂದರೆ,-

.......................... ಗೆ,
ರಿಟರ್ನಿಂಗ್ ಆಫೀಸರ್,
ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಮಂಡಲಿ,
ಬೆಂಗಳೂರು.

ಎಂದು ರಿಟರ್ನಿಂಗ್ ಆಫೀಸರನ ವಿಳಾಸವನ್ನು ಮುದ್ರಿಸಲಾಗಿದೆಯೋ ಆ ದೊಡ್ಡ ಹೊರ ಲಕೋಟೆ ಇವುಗಳೊಂದಿಗೆ ಕಳುಹಿಸತಕ್ಕುದು.

ಮತದಾರನಿಗೆ ಕಳುಹಿಸಿದ ಅಂಥ ತಿಳುವಳಿಕೆ ಪತ್ರಕ್ಕೆ ಸಂಬಂಧಿಸಿದಂತೆ ಅಂಚೆಗೆ ಹಾಕಿದ ಬಗ್ಗೆ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು.

(2) (1)ನೇ ಉಪನಿಯಮದಲ್ಲಿ ಉಪಬಂಧಿಸಿದಂತೆ ತನ್ನ ಮತಪತ್ರವನ್ನು ಮತ್ತು ಇತರೆ ಸಂಬಂಧಪಟ್ಟ ಇತರ ಪತ್ರಗಳನ್ನು ಸ್ವೀಕರಿಸದಿರುವ ಅಥವಾ ರಿಟರ್ನಿಂಗ್ ಆಫೀಸರನಿಗೆ ಹಿಂದಿರುಗಿಸುವುದಕ್ಕೆ ಮುಂಚೆಯೇ ಯಾರ ಪತ್ರಗಳನ್ನು ಅನುಕೂಲಕರವಾಗಿ ಅವುಗಳನ್ನು ಉಪಯೋಗಿಸಲಾಗದಂಥ ರೀತಿಯಲ್ಲಿ ಅಜಾಗರೂಕತೆಯಿಂದ ಕೆಡಿಸಲಾಗಿದೆಯೋ ಅಥವಾ ಯಾರ ಪತ್ರಗಳು ಕಳೆದುಹೋಗಿರುವುವೋ ಆ ಮತದಾರನು ಆ ಬಗ್ಗೆ ತಾನು ರುಜು ಮಾಡಿದ ಘೋಷಣೆಯನ್ನು ರಿಟರ್ನಿಂಗ್ ಆಫೀಸರನಿಗೆ ರವಾನಿಸಿದ ಮೇಲೆ, ಸ್ವೀಕರಿಸಿಲ್ಲದ, ಕೆಟ್ಟುಹೋದ ಅಥವಾ ಕಳೆದುಹೋದ ಪತ್ರಗಳಿಗೆ ಬದಲಾಗಿ ಅವುಗಳ ದ್ವಿಪ್ರತಿಗಳನ್ನು ಅವುಗಳಿಗೆ ಬದಲಾಗಿ ಕಳುಹಿಸಲು ರಿಟರ್ನಿಂಗ್ ಆಫೀಸರನನ್ನು ಅಗತ್ಯಪಡಿಸಬಹುದು ಮತ್ತು ಕಾಗದ ಪತ್ರಗಳನ್ನು ಕೆಡಿಸಲಾಗಿದ್ದರೆ ಅವುಗಳನ್ನು ರಿಟರ್ನಿಂಗ್ ಆಫೀಸರನಿಗೆ ಹಿಂದಿರುಗಿಸತಕ್ಕದ್ದು ಮತ್ತು ಅವನು ಅವುಗಳನ್ನು ರದ್ದುಪಡಿಸತಕ್ಕದ್ದು. ದ್ವಿಪ್ರತಿ ಪತ್ರಗಳನ್ನು ಕೊಟ್ಟಿರುವ ಪ್ರತಿಯೊಂದು ಪ್ರಕರಣದಲ್ಲಿ ಅದರ ದಾಖಲೆಯನ್ನು ರಿಟರ್ನಿಂಗ್ ಆಫೀಸರನು ಇಡತಕ್ಕದ್ದು ಮತ್ತು ದೊಡ್ಡ

ಲಕೋಟೆಯ ಮೇಲೆ "ದ್ವಿಪ್ರತಿ" ಎಂಬ ಗುರುತನ್ನು ಹಾಕತಕ್ಕದ್ದು. ಅದು ಮತದಾರನಿಗೆ ಕಳುಹಿಸಿದ ದೊಡ್ಡ ಹೊರ ಲಕೋಟೆಯ ಮೇಲೆ ಈ ಮೊದಲೇ ಕೊಟ್ಟಿರುವಂಥ ಅಕ್ಷರಾನುಕ್ರಮ ಸಂಖ್ಯೆಯನ್ನು ಹೊಂದಿರತಕ್ಕದ್ದು. ಅಂಥ ಪ್ರಕರಣಗಳಲ್ಲಿ ಕೊಟ್ಟ ಮತಪತ್ರಗಳಿಗೂ ಸಹ "ದ್ವಿಪ್ರತಿ" ಎಂಬ ಗುರುತನ್ನು ಹಾಕತಕ್ಕದ್ದು.

**12. ರಿಟರ್ನಿಂಗ್ ಆಫೀಸರನಿಗೆ ಮತಪತ್ರಗಳನ್ನು ರವಾನಿಸುವುದು.–** (1) ತನ್ನ ಮತವನ್ನು ದಾಖಲಿಸಲು ಇಚ್ಛಿಸುವ ಪ್ರತಿಯೊಬ್ಬ ಮತದಾರನು ತಿಳಿವಳಿಕೆ ಪತ್ರದಲ್ಲಿ ನೀಡಿರುವ ನಿರ್ದೇಶನಕ್ಕೆ ಅನುಸಾರವಾಗಿ 6ನೇ ನಮೂನೆಯಲ್ಲಿ ಘೋಷಣಾ ಪತ್ರವನ್ನು ಮತ್ತು ಮತಪತ್ರವನ್ನು ಭರ್ತಿ ಮಾಡಿದ ತರುವಾಯ, ಮತಪತ್ರವನ್ನು ಮತಪತ್ರದ ಲಕೋಟೆಯಲ್ಲಿ ಇಟ್ಟು ಲಕೋಟೆಯನ್ನು ಅಂಟಿಸತಕ್ಕದ್ದು, ರಿಟರ್ನಿಂಗ್ ಆಫೀಸರನ ವಿಳಾಸ ಬರೆದಿರುವ ದೊಡ್ಡ ಹೊರ ಲಕೋಟೆಯಲ್ಲಿ ಘೋಷಣಾ ಪತ್ರವನ್ನು ಇಡತಕ್ಕದ್ದು ಮತ್ತು ಅದನ್ನು ಮತದಾನಕ್ಕಾಗಿ ನಿಗದಿಪಡಿಸಿದ ದಿವಸದಂದು ನಿರ್ದಿಷ್ಟಪಡಿಸಿದ ವೇಳೆಯನ್ನು ಮೀರದಂತೆ ರಿಟರ್ನಿಂಗ್ ಆಫೀಸರನಿಗೆ ಅಂಚೆ ಮೂಲಕ ಕಳುಹಿಸತಕ್ಕದ್ದು ಅಥವಾ ಖುದ್ದಾಗಿ ಕೊಡತಕ್ಕದ್ದು.

(2) ಘೋಷಣಾ ಪತ್ರವನ್ನು ಒಳಗೊಂಡಿರುವ ಲಕೋಟೆಯನ್ನು ಮತ್ತು ಮತಪತ್ರವನ್ನು ಒಳಗೊಂಡ ಮುಚ್ಚಿದ ಲಕೋಟೆಯನ್ನು ಅಂಚೆಯ ಮೂಲಕ ಅಥವಾ ಖುದ್ದಾಗಿ ಸ್ವೀಕರಿಸಿದ ಮೇಲೆ ರಿಟರ್ನಿಂಗ್ ಆಫೀಸರನು ಹೊರ ಲಕೋಟೆಯ ಮೇಲೆ ಅವುಗಳನ್ನು ಸ್ವೀಕರಿಸಿದ ದಿನಾಂಕ ಮತ್ತು ಕಾಲದ ಬಗ್ಗೆ ಹಿಂಬರಹ ಮಾಡತಕ್ಕದ್ದು.

**13. ಮತಗಳ ಎಣಿಕೆ.–** (1) ರಿಟರ್ನಿಂಗ್ ಆಫೀಸರನು ಎಣಿಕೆಯ ಉದ್ದೇಶಕ್ಕಾಗಿ ತಾನು ಗೊತ್ತುಪಡಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮತಗಳ ಪರಿಶೀಲನೆ ಮತ್ತು ಎಣಿಕೆಯ ಉದ್ದೇಶಕ್ಕಾಗಿ ಹಾಜರಿರತಕ್ಕದ್ದು.

(2) ಮತಗಳ ಎಣಿಕೆ ನಡೆಯುವಾಗ ಯಾರೇ ಅಭ್ಯರ್ಥಿಯು ಖುದ್ದಾಗಿಯಾಗಲಿ ಅಥವಾ ತನ್ನ ನಂಬಿಕಸ್ಥ ಪ್ರತಿನಿಧಿಯ ಮೂಲಕವಾಗಿ ಆಗಲಿ ಹಾಜರಿರಬಹುದು.

(3) ರಿಟರ್ನಿಂಗ್ ಆಫೀಸರನು, ಮತಗಳ ಎಣಿಕೆಯಲ್ಲಿ ತನಗೆ ಸಹಾಯ ಮಾಡಲು ತಾನು ಸೂಕ್ತವೆಂದು ಆಲೋಚಿಸುವಂಥ ಸಂಖ್ಯೆಯ ಮಂಡಲಿ ಕಚೇರಿಯ ಸಿಬ್ಬಂದಿಯವರನ್ನು ಪರಿಶೀಲಕರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು.

(4) ರಿಟರ್ನಿಂಗ್ ಆಫೀಸರನು ಮತದಾನಕ್ಕಾಗಿ ನಿಗದಿಪಡಿಸಿದ ದಿವಸದಂದು ಎಣಿಕೆಗಾಗಿ ನಿಗದಿಪಡಿಸಿದ ಕಾಲಕ್ಕೆ ನಿಕಟೋತ್ತರದಲ್ಲಿ ಯಾರೇ ಅಭ್ಯರ್ಥಿ ಅಥವಾ ಅಭ್ಯರ್ಥಿಯನ್ನು ಪ್ರತಿನಿಧಿಸುವ ಯಾರೇ ಇತರ ವ್ಯಕ್ತಿಯ ಸಮಕ್ಷಮದಲ್ಲಿ ಹೊರ ಲಕೋಟೆಗಳನ್ನು ತೆರೆಯತಕ್ಕದ್ದು. ಮತ್ತು ಪರಿಶೀಲನೆಯ ಕಾಲದಲ್ಲಿ ಹಾಜರಿರುವ ಉಮೇದುವಾರ ಅಥವಾ ಅವರ ಪ್ರತಿನಿಧಿಗಳಿಗೆ ಅವರ ಪರವಾಗಿ ಕೋರಿಕೆಯನ್ನು ಸಲ್ಲಿಸಿದರೆ ಮತಪತ್ರಗಳನ್ನು ತೋರಿಸಬಹುದು.

(5) ರಿಟರ್ನಿಂಗ್ ಆಫೀಸರನು, ಮತಪತ್ರ ಲಕೋಟೆಯನ್ನು–

(ಎ) ಹೊರ ಲಕೋಟೆಯಲ್ಲಿ, ಮತಪತ್ರದ ಲಕೋಟೆಯ ಹೊರಗೆ, ಘೋಷಣಾ ಪತ್ರವು ಇಲ್ಲದಿದ್ದರೆ; ಅಥವಾ

(ಬಿ) ಆ ಘೋಷಣಾ ಪತ್ರವು ರಿಟರ್ನಿಂಗ್ ಆಫೀಸರನು ಕಳುಹಿಸಿದ ಘೋಷಣಾ ಪತ್ರವಾಗಿರದಿದ್ದರೆ; ಅಥವಾ

(ಸಿ) ಘೋಷಣಾ ಪತ್ರಕ್ಕೆ ಮತದಾರನು ರುಜು ಹಾಕಿಲ್ಲದಿದ್ದರೆ; ಅಥವಾ

(ಡಿ) ಅದೇ ಹೊರ ಲಕೋಟೆಯಲ್ಲಿ ಒಂದಕ್ಕಿಂತ ಹೆಚ್ಚಿನ ಘೋಷಣಾ ಪತ್ರವನ್ನು ಅಥವಾ ಮತಪತ್ರದ ಲಕೋಟೆಗಳನ್ನು ಇಟ್ಟಿದ್ದರೆ; ಅಥವಾ

(ಇ) ಒಂದು ದೊಡ್ಡ ಲಕೋಟೆಯಲ್ಲಿ ಘೋಷಣಾ ಪತ್ರಗಳು ಮತ್ತು ಮತಪತ್ರದ ಲಕೋಟೆಗಳನ್ನು ಒಳಗೊಂಡಿರುವ ಹಲವಾರು ಹೊರ ಲಕೋಟೆಗಳನ್ನು ಇಟ್ಟಿದ್ದರೆ

– ತಿರಸ್ಕರಿಸತಕ್ಕದ್ದು.

(6) ತಿರಸ್ಕರಿಸಿದ ಸಂದರ್ಭದಲ್ಲಿ " ತಿರಸ್ಕರಿಸಲಾಗಿದೆ " ಎಂಬ ಪದವನ್ನು ಮತಪತ್ರ ಲಕೋಟೆ ಮತ್ತು ಘೋಷಣಾ ಪತ್ರದ ಮೇಲೆ ಹಿಂಬರಹ ಮಾಡತಕ್ಕದ್ದು ಮತ್ತು ರಿಟರ್ನಿಂಗ್ ಆಫೀಸರನು ಸಂಕ್ಷಿಪ್ತ ಸಹಿ ಹಾಕಿರತಕ್ಕದ್ದು.

(7) (5)ನೇ ಉಪ ನಿಯಮದ ಮೇರೆಗೆ ತಿರಸ್ಕರಿಸಲಾದುವುಗಳನ್ನು ಹೊರತುಪಡಿಸಿ ಇತರ ಎಲ್ಲಾ ಮತಪತ್ರ ಲಕೋಟೆಗಳನ್ನು ತೆರೆಯತಕ್ಕದ್ದು ಮತ್ತು ಆ ತರುವಾಯ ಮತಪತ್ರಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಸಿಂಧುವಾದ ಮತಗಳನ್ನು ಎಣಿಸತಕ್ಕದ್ದು.

(ಎ) ಅದು ರಿಟರ್ನಿಂಗ್ ಆಫೀಸರನ ಸಂಕ್ಷಿಪ್ತ ಸಹಿ ಅಥವಾ ಹಸ್ತಾಕ್ಷರದ ಪಡಿಯಚ್ಚನ್ನು ಹೊಂದಿರದಿದ್ದರೆ; ಅಥವಾ

(ಬಿ) ಮತದಾರನು, ಮತಪತ್ರವು ತನ್ನದೆಂದು ಗುರುತು ಹಿಡಿಯಬಹುದಾದಂತೆ ಅದರ ಮೇಲೆ ತನ್ನ ರುಜು ಮಾಡಿದರೆ ಅಥವಾ ಯಾವುದೇ ಪದವನ್ನು ಅದರ ಮೇಲೆ ಬರೆದರೆ ಅಥವಾ ಯಾವುದೇ ಗುರುತನ್ನು ಮಾಡಿದರೆ; ಅಥವಾ

(ಸಿ) ಅದರ ಮೇಲೆ ಯಾವುದೇ ಮತದಾನವನ್ನು ದಾಖಲು ಮಾಡಿರದಿದ್ದರೆ; ಅಥವಾ

(ಡಿ) ಅದರ ಮೇಲೆ ದಾಖಲು ಮಾಡಿರುವ ಮತಗಳ ಸಂಖ್ಯೆಯು ಮತದಾರನು ಕೊಡಲು ಹಕ್ಕುಳ್ಳವನಾಗಿರುವಂಥ ಮತಸಂಖ್ಯೆಗೆ ಸಮನಾಗಿಲ್ಲದಿದ್ದರೆ; ಅಥವಾ

(ಇ) ಮತದಾರನು, ಯಾರೇ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚಿನ ಮತಗಳನ್ನು ಕೊಟ್ಟಿದ್ದರೆ; ಅಥವಾ

(ಎಫ್) ಅದು ಒಂದು ಮತವನ್ನು ಅಥವಾ ಹೆಚ್ಚಿನ ಮತಗಳನ್ನು ಚಲಾಯಿಸಿದ್ದರಿಂದ ಉಂಟಾದ ಅನಿಶ್ಚಿತತೆಯಿಂದಾಗಿ ನಿಷ್ಫಲವಾಗಿದ್ದರೆ

– ಅಸಿಂಧುವಾಗಿರತಕ್ಕದ್ದು:

ಪರಂತು, ಒಂದೇ ಮತಪತ್ರದ ಮೇಲೆ ಒಂದು ಮತಕ್ಕಿಂತ ಹೆಚ್ಚು ಮತಗಳನ್ನು ಕೊಡಬಹುದಾಗಿದ್ದರೆ, ಆ ಗುರುತುಗಳ ಪೈಕಿ ಒಂದನ್ನು ಯಾವ ಅಭ್ಯರ್ಥಿಗೆ ಅದು ಅನ್ವಯವಾಗತಕ್ಕುದೆಂಬುದು ಸಂದೇಹಾಸ್ಪದವಾಗುವಂತೆ ಹಾಕಿದ್ದರೆ, ಆ ಕಾರಣಕ್ಕಾಗಿ ಸಂಬಂಧಪಟ್ಟ ಮತವು ಮಾತ್ರ ಅಸಿಂಧುವಾಗಿರತಕ್ಕದ್ದೇ ಹೊರತು ಇಡೀ ಮತಪತ್ರವು ಅಸಿಂಧುವಾಗಿರತಕ್ಕದ್ದಲ್ಲ.

(8) ಯಾವುದೇ ಮತಪತ್ರವನ್ನು ನಿರ್ದಿಷ್ಟಪಡಿಸಿದ ಅಗತ್ಯತೆಗಳನ್ನು ಪಾಲಿಸಿರುವುದಿಲ್ಲ ಎಂಬ ಕಾರಣಕ್ಕಾಗಿ ಯಾವುದೇ ಆಕ್ಷೇಪಣೆಯನ್ನು ಎತ್ತಿದ್ದರೆ ಅಥವಾ ರಿಟರ್ನಿಂಗ್ ಆಫೀಸರನು ಮತಪತ್ರದ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಎತ್ತಿದರೆ ಆ ಬಗ್ಗೆ ಆ ಕೂಡಲೇ ಅವನು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(9) ಮತಗಳ ಎಣಿಕೆಯು ಮುಕ್ತಾಯವಾದಾಗ ರಿಟರ್ನಿಂಗ್ ಆಫೀಸರನು ಯಾರಿಗೆ ಅತಿ ಹೆಚ್ಚಿನ ಸಂಖ್ಯೆಯ ಮತಗಳನ್ನು ಕೊಡಲಾಗಿದೆಯೋ, ಸಂದರ್ಭಾನುಸಾರ ಆ ಉಮೇದುವಾರ ಅಥವಾ ಉಮೇದುವಾರರು ಚುನಾಯಿತರಾಗಿದ್ದಾರೆಂದು ಕೂಡಲೇ ಘೋಷಿಸತಕ್ಕದ್ದು ಮತ್ತು ಜಯಗಳಿಸಿದ ಉಮೇದುವಾರನಿಗೆ ತಕ್ಷಣವೇ ಅವನು ಮಂಡಲಿಗೆ ಚುನಾಯಿತನಾಗಿರುವುದನ್ನು ಪತ್ರದ ಮೂಲಕ ತಿಳಿಸತಕ್ಕದ್ದು.

(10) ಯಾರೇ ಇಬ್ಬರು ಅಥವಾ ಹೆಚ್ಚಿನ ಉಮೇದುವಾರರ ನಡುವೆ ಸಮಾನ ಮತಗಳು ಇರುವುದು ಕಂಡುಬಂದಾಗ ಮತ್ತು ಒಂದು ಹೆಚ್ಚಿನ ಮತವನ್ನು ಸೇರಿಸುವುದರಿಂದ ಯಾರೇ ಒಬ್ಬ ಅಥವಾ ಹೆಚ್ಚಿನ ಉಮೇದುವಾರರ ಚುನಾಯಿತರಾಗಿರುವುದಾಗಿ ಘೋಷಿಸಲು ಹಕ್ಕುಳ್ಳವರನ್ನಾಗಿ ಮಾಡಬಹುದಾಗಿದ್ದರೆ ಅಂಥ ಹೆಚ್ಚಿನ ಮತವನ್ನು ಯಾರಿಗೆ ಕೊಡಲಾಗಿದೆಯೆಂದು ಭಾವಿಸಬೇಕಾಗಿದೆಯೋ ಆ ಉಮೇದುವಾರ ಅಥವಾ ಉಮೇದುವಾರರ ನಿರ್ಧರಣೆಯನ್ನು ರಿಟರ್ನಿಂಗ್ ಆಫೀಸರನು ತಾನು ನಿರ್ಧರಿಸುವ ರೀತಿಯಲ್ಲಿ ಚೀಟಿ ಎತ್ತುವ ಮೂಲಕ ಮಾಡತಕ್ಕದ್ದು.

(11) ರಿಟರ್ನಿಂಗ್ ಆಫೀಸರನು ಆ ತರುವಾಯ ನಮೂನೆ VII ರಲ್ಲಿ ಚುನಾವಣಾ ವಿವರ ಪಟ್ಟಿಯನ್ನು ತಯಾರಿಸಿ ಅದನ್ನು ಪ್ರಮಾಣೀಕರಿಸತಕ್ಕದ್ದು.][1]

**14. ವ್ಯವಹರಣೆಗಳ ದಾಖಲೆ ಮತ್ತು ಚುನಾವಣಾ ಫಲಿತಾಂಶದ ಪ್ರಕಟಣೆ.**– ಮತಗಳು ಎಣಿಕೆಯಾದ ತರುವಾಯ ಕೂಡಲೇ ರಿಟರ್ನಿಂಗ್ ಆಫೀಸರನು,–

(ಎ) ವ್ಯವಹರಣೆಗಳ ದಾಖಲೆಯನ್ನು ತಯಾರಿಸತಕ್ಕದ್ದು ಮತ್ತು ಅದರಲ್ಲಿ ಮಾಡಿದ ಪ್ರತಿಯೊಂದು ಸರಿಪಡಿಕೆಗೆ ತನ್ನ ಸಂಕ್ಷಿಪ್ತ ಸಹಿಯೊಡನೆ ಅನುಪ್ರಮಾಣಿಸಿ ಅದಕ್ಕೆ ರುಜು ಹಾಕತಕ್ಕದ್ದು ಮತ್ತು ಹಾಜರಿರುವ ಯಾರೇ ಉಮೇದುವಾರನು ತನ್ನ ರುಜುವನ್ನು ಅಂಥ ದಾಖಲೆಗೆ ಹಾಕುವ ಇಚ್ಛೆಯನ್ನು ವ್ಯಕ್ತಪಡಿಸಿದರೆ ಅವನಿಗೆ ಹಾಗೆ ಮಾಡಲು ಅನುಮತಿಸತಕ್ಕದ್ದು.

(ಬಿ) ಸದಸ್ಯರಾಗಿ ಚುನಾಯಿತರಾದ ವ್ಯಕ್ತಿಗಳ ಹೆಸರುಗಳನ್ನು ರಾಜಪತ್ರದಲ್ಲಿ ಪ್ರಕಟಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**15. ಚುನಾವಣಾ ಕಾಗದ ಪತ್ರಗಳನ್ನು ಮೊಹರು ಮಾಡುವುದು ಮತ್ತು ಅವುಗಳ ಅಭಿರಕ್ಷೆ.**– (1) ರಿಟರ್ನಿಂಗ್ ಆಫೀಸರನು, ಆ ತರುವಾಯ ಸದಸ್ಯರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಪಟ್ಟ ಮತಪತ್ರಗಳನ್ನು ಅವುಗಳನ್ನು ಎಣಿಕೆ ಮಾಡಿರಲಿ ಅಥವಾ ತಿರಸ್ಕರಿಸಿರಲಿ ಪ್ರತ್ಯೇಕವಾದ ಪ್ಯಾಕೆಟ್‌ಗಳಾಗಿ

ಮಾಡತಕ್ಕದ್ದು. ಪ್ರತಿಯೊಂದು ಪ್ಯಾಕೆಟ್ಟನ್ನು ಮೊಹರು ಮಾಡತಕ್ಕದ್ದು ಮತ್ತು ಅದರ ಮೇಲೆ ಅದರ ಒಳಾಂಶಗಳ ವಿವರಣೆ, ಅದಕ್ಕೆ ಸಂಬಂಧಪಟ್ಟ ಚುನಾವಣೆ ಮತ್ತು ಅದರ ದಿನಾಂಕವನ್ನು ಬರೆಯತಕ್ಕದ್ದು.

(2) ಪ್ಯಾಕೆಟ್ಟುಗಳನ್ನು ತೆರೆಯತಕ್ಕದ್ದಲ್ಲ ಮತ್ತು ಅವುಗಳ ಒಳಾಂಶಗಳನ್ನು ರಾಜ್ಯ ಸರ್ಕಾರ ಅಥವಾ ಸಕ್ಷಮ ನ್ಯಾಯಾಲಯದ ಆದೇಶಗಳ ಮೇರೆಗೆ ಹೊರತು ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರವು ಅವುಗಳನ್ನು ಪರಿಶೀಲಿಸತಕ್ಕದ್ದಲ್ಲ ಅಥವಾ ಅವರ ಮುಂದೆ ಹಾಜರುಪಡಿಸತಕ್ಕದ್ದಲ್ಲ.

(3) ಆ ಪ್ಯಾಕೆಟ್ಟುಗಳನ್ನು ರಿಟರ್ನಿಂಗ್ ಆಫೀಸರನು ಅವನ ಕಚೇರಿಯಲ್ಲಿ ಚುನಾವಣಾ ಫಲಿತಾಂಶಗಳನ್ನು ಘೋಷಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಸುರಕ್ಷಿತ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದ್ದು ಮತ್ತು ಆ ತರುವಾಯ ಸಕ್ಷಮ ನ್ಯಾಯಾಲಯ ಅಥವಾ ರಾಜ್ಯ ಸರ್ಕಾರವು ಅವುಗಳನ್ನು ನಾಶಪಡಿಸಕೂಡದೆಂದು ನಿರ್ದೇಶನವನ್ನು ನೀಡಿದ್ದ ಹೊರತು ಅವುಗಳನ್ನು ನಾಶಪಡಿಸತಕ್ಕದ್ದು.

**16. ಚುನಾವಣೆ ಬಗ್ಗೆ ವಿವಾದ.–** (1) ಸದಸ್ಯನ ಚುನಾವಣೆಯ ಸಿಂಧುತ್ವವನ್ನು, ಅಂಥ ಚುನಾವಣೆಯಲ್ಲಿನ ಯಾರೇ ಉಮೇದುವಾರನು, ರಾಜ್ಯ ಸರ್ಕಾರವು ಫಲಿತಾಂಶಗಳ ಘೋಷಣೆಯನ್ನು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ರಾಜ್ಯ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ಪ್ರಶ್ನಿಸಬಹುದು.

(2) (1)ನೇ ಉಪನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯು, ಅರ್ಜಿಯಲ್ಲಿ ನಮೂದಿಸಿದ ಪ್ರತ್ಯರ್ಜಿದಾರರು ಎಷ್ಟು ಇರುವರೋ ಅಷ್ಟು ಸಂಖ್ಯೆಯ ಪ್ರತಿಗಳೊಡನೆ ಇರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರತಿಯನ್ನು ಅರ್ಜಿದಾರನು ಅವನ ಸಹಿಯೊಂದಿಗೆ ಅರ್ಜಿಯ ಯಥಾ ಪ್ರತಿಯಾಗಿರುವುದಾಗಿ ಅನುಪ್ರಮಾಣಿಸತಕ್ಕದ್ದು.

(3) ಅರ್ಜಿದಾರನು ಚುನಾಯಿತ ಉಮೇದುವಾರನ ಚುನಾವಣೆಯು ಅನೂರ್ಜಿತವಾದುದು ಎಂಬ ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ತಾನೇ ಅಥವಾ ಯಾರೇ ಇತರ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಇನ್ನೂ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡಿದರೆ ಅರ್ಜಿದಾರನನ್ನು ಹೊರತುಪಡಿಸಿ ಸ್ಪರ್ಧಿಸಿದ ಎಲ್ಲಾ ಉಮೇದುವಾರರನ್ನು ತನ್ನ ಅರ್ಜಿಗೆ ಪ್ರತ್ಯರ್ಜಿದಾರರನ್ನಾಗಿ ಸೇರಿಸತಕ್ಕದ್ದು ಮತ್ತು ಅಂಥ ಇನ್ನೂ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡದಿರುವಲ್ಲಿ ಚುನಾಯಿತನಾದ ಉಮೇದುವಾರನನ್ನು ಪ್ರತ್ಯರ್ಜಿದಾರನನ್ನಾಗಿ ಸೇರಿಸತಕ್ಕದ್ದು.

(4) (1)ನೇ ಉಪನಿಯಮದ ಮೇರೆಗಿನ ಅರ್ಜಿಯು,–

(ಎ) ಅರ್ಜಿದಾರನು ಆಧರಿಸುವಂಥ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು;

(ಬಿ) ವಾದ ಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ V) ರಲ್ಲಿ ವಿಧಿಸಿದ ರೀತಿಯಲ್ಲಿ ಅರ್ಜಿದಾರನು ರುಜು ಮಾಡತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು;

(ಸಿ) ಅರ್ಜಿಗೆ ಲಗತ್ತಿಸಿದ ಯಾವುದೇ ಅನುಸೂಚಿಗೆ ಅಥವಾ ಅನುಬಂಧಕ್ಕೆ ಸಹ ಅರ್ಜಿದಾರನು ಸಹಿ ಮಾಡತಕ್ಕದ್ದು ಮತ್ತು ಅವುಗಳನ್ನು ಅರ್ಜಿಯನ್ನು ಸತ್ಯಾಪನೆ ಮಾಡಿದ ರೀತಿಯಲ್ಲೇ ಸತ್ಯಾಪನೆ ಮಾಡತಕ್ಕದ್ದು.

(5) ಅರ್ಜಿದಾರನು, ಈ ಕೆಳಕಂಡ ಘೋಷಣೆಯಲ್ಲಿ ಯಾವುದೇ ಘೋಷಣೆಯನ್ನು ಕ್ಲೇಮು ಮಾಡಬಹುದು,–

(ಎ) ಚುನಾಯಿತ ಉಮೇದುವಾರನ ಚುನಾವಣೆಯು ಅನೂರ್ಜಿತವಾಗಿದೆ;

(ಬಿ) ಚುನಾಯಿತ ಉಮೇದುವಾರನ ಚುನಾವಣೆಯು ಅನೂರ್ಜಿತವಾಗಿದೆ ಮತ್ತು ತಾನೇ ಅಥವಾ ಯಾರೇ ಇತರ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆ.

**17. ಚುನಾವಣಾ ತಕರಾರು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ.–** ಚುನಾವಣಾ ತಕರಾರು ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಸರ್ಕಾರವು ದಾಖಲೆಗಳನ್ನು ತರಿಸಿಕೊಂಡ ತರುವಾಯ ಮತ್ತು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯ ತರುವಾಯ ವ್ಯವಹರಣೆಗಳ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, –

(ಎ) ಅರ್ಜಿಯನ್ನು ವಜಾ ಮಾಡಿ; ಅಥವಾ

(ಬಿ) ಚುನಾಯಿತನಾದ ಉಮೇದುವಾರನ ಚುನಾವಣೆಯನ್ನು ಅನೂರ್ಜಿತ ವಾಗಿರುವುದಾಗಿ ಘೋಷಿಸಿ; ಅಥವಾ

(ಸಿ) ಚುನಾಯಿತನಾದ ಉಮೇದುವಾರನ ಚುನಾವಣೆಯು ಅನೂರ್ಜಿತವಾಗಿರುವುದಾಗಿ ಮತ್ತು ಅರ್ಜಿದಾರ ಅಥವಾ ಇತರ ಯಾರೇ ಉಮೇದುವಾರ ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂದು ಘೋಷಿಸಿ

– ಆದೇಶವನ್ನು ಮಾಡಬಹುದು.

**18. ಚುನಾಯಿತ ಉಮೇದುವಾರನ ಚುನಾವಣೆಯನ್ನು ಅನೂರ್ಜಿತವಾಗಿದೆ ಎಂದು ಘೋಷಿಸುವುದಕ್ಕೆ ಆಧಾರಗಳು.**– ರಾಜ್ಯ ಸರ್ಕಾರವು,–

(ಎ) ಚುನಾವಣಾ ಫಲಿತಾಂಶವು,–

(i) ಮತವನ್ನು ಅನುಚಿತವಾಗಿ ಸ್ವೀಕರಿಸಿರುವುದರಿಂದಾಗಿ ಅಥವಾ ನಿರಾಕರಿಸಿರುವುದರಿಂದಾಗಿ; ಅಥವಾ

(ii) ಅಧಿನಿಯಮದ ಅಥವಾ ಈ ನಿಯಮಗಳ ಯಾವುದೇ ನಿಯಮದ ಉಪಬಂಧಗಳನ್ನು ಪಾಲಿಸದಿರುವುದರಿಂದಾಗಿ

– ವಾಸ್ತವವಾಗಿ ಬಾಧಿತವಾಗಿದೆ ಎಂದು, ಅಥವಾ

(ಬಿ) ಯಾರೇ ಉಮೇದುವಾರನ ನಾಮನಿರ್ದೇಶನವನ್ನು ತಪ್ಪಾಗಿ ತಿರಸ್ಕರಿಸಲಾಗಿದೆ ಅಥವಾ ಜಯಶಾಲಿ ಉಮೇದುವಾರನ ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದು ಕೊಂಡಿರುವ ಯಾರೇ ಇತರ ಉಮೇದುವಾರನ ನಾಮನಿರ್ದೇಶನವನ್ನು ತಪ್ಪಾಗಿ ಅಂಗೀಕರಿಸಲಾಗಿದೆ ಎಂದು

– ಅಭಿಪ್ರಾಯಪಟ್ಟರೆ, ಅದು ಚುನಾಯಿತ ಉಮೇದುವಾರನ ಚುನಾವಣೆಯನ್ನು ಅನೂರ್ಜಿತವಾಗಿರುವುದಾಗಿ ಘೋಷಿಸತಕ್ಕದ್ದು.

**19. ಯಾವ ಆಧಾರಗಳ ಮೇಲೆ ಚುನಾಯಿತ ಉಮೇದುವಾರನನ್ನು ಹೊರತುಪಡಿಸಿ ಇತರ ಉಮೇದುವಾರನು ಚುನಾಯಿತನಾಗಿರುವನೆಂದು ಘೋಷಿಸಬಹುದೋ ಅಂಥ ಆಧಾರಗಳು.**– ಚುನಾವಣಾ ತಕರಾರು ಅರ್ಜಿಯನ್ನು ಹಾಕಿರುವಂತಹ ಯಾರೇ ವ್ಯಕ್ತಿಯು, ಚುನಾಯಿತ ಉಮೇದುವಾರನ ಚುನಾವಣೆಯನ್ನು ಪ್ರಶ್ನಿಸುವುದರ ಜೊತೆಗೆ ತಾನೇ ಅಥವಾ ಯಾರೇ ಇತರ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತರಾಗಿರುವರೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದರೆ ಮತ್ತು ರಾಜ್ಯ ಸರ್ಕಾರವು ಅರ್ಜಿದಾರನು ಅಥವಾ ಅಂಥ ಇತರ ಉಮೇದುವಾರನು ಸಿಂಧುವಾದ ಮತಗಳ ಪೈಕಿ ಅಧಿಕ ಮತವನ್ನು ಪಡೆದಿರುವನೆಂದು ಅಭಿಪ್ರಾಯಪಟ್ಟರೆ ಅದು ಚುನಾಯಿತ ಉಮೇದುವಾರನ ಚುನಾವಣೆಯನ್ನು ಅನೂರ್ಜಿತ ವಾಗಿರುವುದಾಗಿ ಘೋಷಿಸಿದ ತರುವಾಯ, ಸಂದರ್ಭಾನುಸಾರ ಅರ್ಜಿದಾರನು ಅಥವಾ ಅಂಥ ಇತರ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂದು ಘೋಷಿಸತಕ್ಕದ್ದು:

ಪರಂತು, ಅಂಥ ಉಮೇದುವಾರನು ಚುನಾಯಿತ ಉಮೇದುವಾರನಾಗಿದ್ದರೆ ಮತ್ತು ಅವನ ಚುನಾವಣೆಯನ್ನು ಪ್ರಶ್ನಿಸಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದರೆ ಅವನ ಚುನಾವಣೆಯು ಅನೂರ್ಜಿತವಾಗಬಹುದಾಗಿತ್ತೆಂದು ರುಜುವಾತುಪಡಿಸಿದರೆ ಅರ್ಜಿದಾರ ಅಥವಾ ಇತರ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತನಾದ ಉಮೇದುವಾರನೆಂದು ಘೋಷಿಸತಕ್ಕದ್ದಲ್ಲ.

**20. ಆಕಸ್ಮಿಕ ಖಾಲಿ ಸ್ಥಾನಗಳು.**– (1) 3ನೇ ಪ್ರಕರಣದ (2)ನೇ ಉಪಪ್ರಕರಣದ (iii)ನೇ ಖಂಡದ (ಎ) ಉಪಖಂಡ ಅಥವಾ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಚುನಾವಣಾ ಕ್ಷೇತ್ರದಿಂದ ಚುನಾಯಿತರಾಗಿರುವ ಮಂಡಲಿಯ ಸದಸ್ಯರ ಪದದಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದಾಗ ಅದನ್ನು ಸಂದರ್ಭಾನುಸಾರ ರಿಜಿಸ್ಟರಿನ ಎ–ಭಾಗ ಅಥವಾ ಬಿ–ಭಾಗದಲ್ಲಿ ನಮೂದಿಸಲಾಗಿರುವ ಹೆಸರುಗಳ ವೃತ್ತಿಗಾರರ ಪೈಕಿ ಸದಸ್ಯನನ್ನು ಚುನಾಯಿಸುವ ಮೂಲಕ ಭರ್ತಿ ಮಾಡತಕ್ಕದ್ದು.

(2) 3 ಮತ್ತು 19ನೇ ನಿಯಮಗಳ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ (1)ನೇ ಉಪನಿಯಮದ ಮೇರೆಗೆ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಚುನಾವಣೆಗೆ ಅನ್ವಯವಾಗತಕ್ಕದ್ದು.

## ಭಾಗ – III

## ಅಧ್ಯಕ್ಷನ ಚುನಾವಣೆ

**21. ಅಧ್ಯಕ್ಷನ ಚುನಾವಣೆಗಾಗಿ ರಿಟರ್ನಿಂಗ್ ಆಫೀಸರ್.**– ರಿಜಿಸ್ಟ್ರಾರನು ಅಧ್ಯಕ್ಷನ ಚುನಾವಣೆಗಾಗಿ ರಿಟರ್ನಿಂಗ್ ಆಫೀಸರನಾಗಿರತಕ್ಕದ್ದು.

**22. ಅಧ್ಯಕ್ಷನ ಚುನಾವಣೆಗಾಗಿ ನಾಮನಿರ್ದೇಶನ ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು.**– (1) ರಿಟರ್ನಿಂಗ್ ಆಫೀಸರನು (1)ನೇ ನಮೂನೆಯಲ್ಲಿನ ನೋಟೀಸನ್ನು ಮಂಡಲಿಯ ಕಚೇರಿಯ ನೋಟೀಸ್ ಬೋರ್ಡಿನ ಮೇಲೆ ಅಂಟಿಸಿ ಪ್ರಕಟಿಸುವ ಮೂಲಕ 3ನೇ ಪ್ರಕರಣ (2)ನೇ ಉಪಪ್ರಕರಣದ ಪರಂತುಕದ (ಬಿ) ಖಂಡದ ಮೇರೆಗೆ ಅಧ್ಯಕ್ಷನ ಪ್ರತಿಯೊಂದು ಚುನಾವಣೆಗಾಗಿ,–

(ಎ) ಆ ನೋಟೀಸಿನ ಪ್ರಕಟಣೆಯ ದಿನಾಂಕದ ತರುವಾಯದ ಎಂಟನೇ ದಿವಸವನ್ನು ಮೀರದ ದಿನಾಂಕವಾಗಿರತಕ್ಕ ದಿನಾಂಕವನ್ನು ನಾಮನಿರ್ದೇಶನಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವೆಂದು ಗೊತ್ತುಪಡಿಸತಕ್ಕದ್ದು;

(ಬಿ) ನಾಮನಿರ್ದೇಶನಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ತರುವಾಯದ ಮೂರನೇ ದಿವಸವನ್ನು ಮೀರದ ದಿನಾಂಕವಾಗಿರತಕ್ಕ ದಿನಾಂಕವನ್ನು ನಾಮಪತ್ರಗಳ ಪರಿಶೀಲನೆ ಇರುವ ದಿನಾಂಕವೆಂದು ಗೊತ್ತುಪಡಿಸತಕ್ಕದ್ದು;

(ಸಿ) ಅದು ನಾಮನಿರ್ದೇಶನಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ತರುವಾಯದ ಏಳನೆಯ ದಿವಸಕ್ಕೆ ಮುಂಚಿತವಾಗಿರತಕ್ಕದ್ದಲ್ಲದ ದಿನಾಂಕವನ್ನು ಅವಶ್ಯವಿದ್ದರೆ ಸದಸ್ಯರ ಮತಗಳನ್ನು ತೆಗೆದುಕೊಳ್ಳತಕ್ಕಂಥ ದಿನಾಂಕವೆಂದು ಗೊತ್ತುಪಡಿಸತಕ್ಕದ್ದು.

(2) ಅಧ್ಯಕ್ಷನ ಪದದ ಅವಧಿಯ ಮುಕ್ತಾಯದಿಂದ ಉಂಟಾದ ಖಾಲಿಸ್ಥಾನವನ್ನು ಭರ್ತಿ ಮಾಡುವ ಚುನಾವಣೆಯ ಸಂದರ್ಭದಲ್ಲಿ, (1) ನೇ ಉಪನಿಯಮದ ಮೇರೆಗಿನ ನೋಟೀಸನ್ನು ಅನುಕೂಲಕರವಾಗಬಹುದಾದಷ್ಟು ಬೇಗನೇ ಹೊರ ಹೋಗುವ ಅಧ್ಯಕ್ಷನ ಪದದ ಅವಧಿಯ ಮುಕ್ತಾಯಕ್ಕೆ ಮುಂಚೆ, ಅರವತ್ತನೇ ದಿವಸದ ತರುವಾಯ ಪ್ರಕಟಿಸತಕ್ಕದ್ದು ಮತ್ತು ಸದರಿ ಉಪನಿಯಮದ ಮೇರೆಗೆ ದಿನಾಂಕಗಳನ್ನು ಹೊರಹೋಗುವ ಅಧ್ಯಕ್ಷನ ಪದದ ಅವಧಿಯ ಮುಕ್ತಾಯದ ತರುವಾಯದ ದಿನಾಂಕದಂದು ಅವನ ಪದವನ್ನು ವಹಿಸಿಕೊಳ್ಳಲು ಆ ಮೂಲಕ ಚುನಾಯಿತನಾದ ಅಧ್ಯಕ್ಷನಿಗೆ ಸಾಧ್ಯವಾಗುವಂತೆ ಅಂತಹ ಕಾಲದಲ್ಲಿ ಚುನಾವಣೆಯನ್ನು ಪೂರ್ಣಗೊಳಿಸುವ ಹಾಗೆ ದಿನಾಂಕಗಳನ್ನು ಗೊತ್ತುಪಡಿಸತಕ್ಕದ್ದು.

(3) ಅಧ್ಯಕ್ಷನ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅಸಮರ್ಥತೆ ಅಥವಾ ಅನರ್ಹತೆ ಅಥವಾ ಅನ್ಯಥಾ ಅವನ ಪದದಲ್ಲಿ ಉಂಟಾಗುವ ಖಾಲಿ ಸ್ಥಾನವನ್ನು ಭರ್ತಿ ಮಾಡಬೇಕಾದ ಚುನಾವಣೆಯ ಸಂದರ್ಭದಲ್ಲಿ, (1)ನೇ ಉಪನಿಯಮದ ಮೇರೆಗೆ ಒಂದು ನೋಟೀಸನ್ನು ಅಂತಹ ಖಾಲಿ ಸ್ಥಾನವು ಉಂಟಾದ ತರುವಾಯ ಆದಷ್ಟು ಬೇಗನೇ ಹೊರಡಿಸತಕ್ಕದ್ದು.

(4) (1)ನೇ ಉಪನಿಯಮದ ಮೇರೆಗೆ ಪ್ರಕಟಿಸಿದ ನೋಟೀಸಿನ ಪ್ರತಿಯನ್ನು ಮಂಡಲಿಯ ಪ್ರತಿಯೊಬ್ಬ ಸದಸ್ಯನಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

**23. ನಾಮನಿರ್ದೇಶನದ ದಿನಾಂಕದ ತರುವಾಯ ಅಧ್ಯಕ್ಷನ ಚುನಾವಣೆಯನ್ನು ನಡೆಸುವುದಕ್ಕಾಗಿ ಅನ್ವಯವಾಗುವ ನಿಯಮಗಳು.–** ಮಂಡಲಿಯ ಸದಸ್ಯರ ಚುನಾವಣೆಗೆ ಸಂಬಂಧಪಟ್ಟ ಈ ನಿಯಮಗಳ 6, 7, 8, 9 ಮತ್ತು 10ನೇ ನಿಯಮಗಳ ಉಪಬಂಧಗಳು ಮತ್ತು II, III ಮತ್ತು IVನೇ ನಮೂನೆಗಳ ಯಥೋಚಿತ ವ್ಯತ್ಯಾಸಗಳೊಂದಿಗೆ ಅಧ್ಯಕ್ಷನ ಚುನಾವಣೆಗೆ ಅನ್ವಯವಾಗತಕ್ಕದ್ದು:

ಪರಂತು,–

(i) 9ನೇ ನಿಯಮವು, "4ನೇ ನಿಯಮದ (ಸಿ) ಖಂಡದ ಮೇರೆಗೆ ನಿಗದಿಪಡಿಸಿದ" ಎಂಬ ಪದಗಳು, ಆವರಣಗಳು, ಅಕ್ಷರ ಮತ್ತು ಸಂಖ್ಯೆಗಳಿಗೆ ಬದಲಾಗಿ " 22ನೇ ನಿಯಮದ (ಸಿ) ಖಂಡದ ಮೇರೆಗೆ ನಿಗದಿಪಡಿಸಲಾದ ದಿವಸಕ್ಕೆ ನಿಕಟಪೂರ್ವದ " ಎಂಬ ಪದಗಳು, ಆವರಣಗಳು, ಅಕ್ಷರ ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸುವ ಮಾರ್ಪಾಟಿಗೆ ಒಳಪಟ್ಟು ಅನ್ವಯವಾಗತಕ್ಕದ್ದು.

(ii) ಈ ನಿಯಮಗಳ ಉದ್ದೇಶಕ್ಕಾಗಿ, 4ನೇ ನಿಯಮದ ಯಾವುದೇ ಉಪಬಂಧಗಳಿಗೆ ಮಾಡಿದ ಉಲ್ಲೇಖವನ್ನು 22ನೇ ನಿಯಮದ ಸಂವಾದಿ ಉಪಬಂಧಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**24. ಮಂಡಲಿಯ ಕಚೇರಿಯಲ್ಲಿ ಮತಗಳನ್ನು ತೆಗೆದುಕೊಳ್ಳತಕ್ಕದ್ದು.–** ಚುನಾವಣೆಯ ಉದ್ದೇಶಕ್ಕಾಗಿ ಸದಸ್ಯರ ಮತಗಳನ್ನು ತೆಗೆದುಕೊಳ್ಳಬೇಕಾಗಿರುವಲ್ಲಿ ರಿಟರ್ನಿಂಗ್ ಆಫೀಸರನು 22ನೇ ನಿಯಮದ (1)ನೇ ಉಪನಿಯಮದ (ಸಿ) ಖಂಡದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಮಂಡಲಿಯ ಕಚೇರಿಯಲ್ಲಿ ತಾನು ಸೂಕ್ತವೆಂದು ಆಲೋಚಿಸುವಂತಹ ಕಾಲದಲ್ಲಿ ಮತದಾನವನ್ನು ನಡೆಸತಕ್ಕದ್ದು ಮತ್ತು ಮತದಾನದ ದಿನಾಂಕದ ಮತ್ತು ಕಾಲದ ಬಗ್ಗೆ ನೋಟೀಸನ್ನು ಮತದಾನದ ದಿನಾಂಕಕ್ಕಿಂತ ಐದು ದಿವಸಗಳಿಗಿಂತ ಕಡಿಮೆಯಿಲ್ಲದಷ್ಟು ಮುಂಚೆ ನೋಂದಾಯಿತ ಅಂಚೆಯ ಮೂಲಕ ಮಂಡಲಿಯ ಪ್ರತಿಯೊಬ್ಬ ಸದಸ್ಯನಿಗೂ ಕಳುಹಿಸತಕ್ಕದ್ದು. ನೋಟೀಸಿನ ಪ್ರತಿಯನ್ನು ಮಂಡಲಿ ಕಚೇರಿಯ ನೋಟೀಸ್ ಬೋರ್ಡಿನ ಮೇಲೆ ಸಹ ಅಂಟಿಸತಕ್ಕದ್ದು.

**25. ಚುನಾವಣೆಗಳನ್ನು ನಡೆಸುವುದಕ್ಕಾಗಿ ಪ್ರಕ್ರಿಯೆ.–** ಚುನಾವಣೆಗಳನ್ನು ನಡೆಸುವಲ್ಲಿ ಈ ಮುಂದಿನ ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು:–

(1) ರಿಟರ್ನಿಂಗ್ ಆಫೀಸರನು, IVನೇ ನಮೂನೆಯಲ್ಲಿ ನಮೂದಿಸಿರುವಂತೆ ಕ್ರಮಬದ್ಧವಾಗಿ ನಾಮನಿರ್ದೇಶಿತರಾಗಿರುವ ಎಲ್ಲಾ ಅಭ್ಯರ್ಥಿಗಳ ಹೆಸರನ್ನು ಓದಿ ಹೇಳತಕ್ಕದ್ದು.

(2) ಮತದಾನಕ್ಕಾಗಿ ಮೀಸಲಿಟ್ಟ ಸ್ಥಳದಲ್ಲಿ ರಿಟರ್ನಿಂಗ್ ಆಫೀಸರನು, ಮತಪತ್ರಗಳನ್ನು ಒಳಕ್ಕೆ ಹಾಕಬಹುದಾದಂತೆ, ಆದರೆ, ಅದರಿಂದ ಅವುಗಳನ್ನು ಪೆಟ್ಟಿಗೆಯನ್ನು ತೆರೆಯದೆಯೇ ತೆಗೆದುಕೊಳ್ಳಲು ಆಗದಂತೆ ರಚಿಸಲಾಗಿರುವ ಒಂದು ಮತ ಪೆಟ್ಟಿಗೆಯನ್ನು ಒದಗಿಸತಕ್ಕದ್ದು.

(3) ರಿಟರ್ನಿಂಗ್ ಆಫೀಸರನು ಮತದಾನವನ್ನು ತೆಗೆದುಕೊಳ್ಳುವುದಕ್ಕೆ ನಿಕಟ ಪೂರ್ವದಲ್ಲಿ, ಹಾಜರಿರಬಹುದಾದಂಥ ಸದಸ್ಯರಿಗೆ ಮತಪೆಟ್ಟಿಗೆಯನ್ನು ಅದು ಖಾಲಿಯಾಗಿರುವುದನ್ನು ಅವರು ನೋಡುವ ಹಾಗೆ ತೋರಿಸತಕ್ಕದ್ದು ಮತ್ತು ಆ ತರುವಾಯ ಅದಕ್ಕೆ ಬೀಗ ಹಾಕತಕ್ಕದ್ದು ಮತ್ತು ಅದರ ಮೇಲೆ ಮೊಹರನ್ನು ಒಡೆಯದೇ ಅದನ್ನು ತೆರೆಯಲು ಸಾಧ್ಯವಾಗದಂಥ ರೀತಿಯಲ್ಲಿ ತನ್ನ ಮೊಹರನ್ನು ಹಾಕತಕ್ಕದ್ದು.

(4) ಮತವನ್ನು ನೀಡಲು ಬಯಸುವ ಪ್ರತಿಯೊಬ್ಬ ಸದಸ್ಯನಿಗೆ, ಮಂಡಲಿಯ ಮೊಹರನ್ನು ಮತ್ತು ರಿಟರ್ನಿಂಗ್ ಆಫೀಸರನ ರುಜುವನ್ನು ಹೊಂದಿರುವ ಮತ್ತು ಸ್ಪರ್ಧಿಸಿರುವ ಎಲ್ಲಾ ಉಮೇದುವಾರರ ಹೆಸರುಗಳನ್ನು ಅದರ ಮೇಲೆ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಮುದ್ರಿಸಿರುವ, ಬೆರಳಚ್ಚು ಮಾಡಿರುವ ಅಥವಾ ಬರೆದಿರುವಂಥ ನಮೂನೆ – V ರಲ್ಲಿನ ಮತಪತ್ರವನ್ನು ಒದಗಿಸತಕ್ಕದ್ದು. ಸದಸ್ಯನಿಗೆ ಮತಪತ್ರವನ್ನು ಕೊಡುವ ಕಾಲದಲ್ಲಿ ರಿಜಿಸ್ಟ್ರಾರನು, ಆ ಉದ್ದೇಶಕ್ಕಾಗಿ ಇಟ್ಟಿರುವ ಸದಸ್ಯರ ಪಟ್ಟಿಯ ಪ್ರತಿಯಲ್ಲಿ ಸದಸ್ಯನಿಗೆ ಸಂಬಂಧಪಟ್ಟ ನಮೂದಿನ ಮುಂದೆ ಅದರ ಕ್ರಮಸಂಖ್ಯೆಯನ್ನು ದಾಖಲು ಮಾಡತಕ್ಕದ್ದು.

(5) (4)ನೇ ಉಪನಿಯಮದ ಮೇರೆಗೆ ಯಾರಿಗೆ ಮತಪತ್ರವನ್ನು ಕೊಡಲಾಗಿದೆಯೋ ಆ ಸದಸ್ಯನು, ಮತಪತ್ರವನ್ನು ಸ್ವೀಕರಿಸಿದ ಮೇಲೆ ಆ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇಟ್ಟಿರುವ ಸ್ಥಳಕ್ಕೆ ಹೋಗತಕ್ಕದ್ದು ಮತ್ತು ಅಲ್ಲಿ ಅವನು ಯಾರಿಗೆ ಮತ ಕೊಡಲು ಇಚ್ಛಿಸುವನೋ ಆ ಅಭ್ಯರ್ಥಿಯ ಹೆಸರಿನ ಮುಂದೆ (X) ಗುರುತನ್ನು ಹಾಕತಕ್ಕದ್ದು. ಅವನು ಆ ತರುವಾಯ ತನ್ನ ಮತವು ಮರೆ ಆಗುವ ಹಾಗೆ ಮತಪತ್ರವನ್ನು ಮಂಡಿಸತಕ್ಕದ್ದು ಮತ್ತು ಅದನ್ನು ಮತ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು.

(6) ಈಗಾಗಲೇ ಮತವನ್ನು ನೀಡಿರುವ ಸದಸ್ಯರು ಇನ್ನೂ ಮತವನ್ನು ನೀಡಬೇಕಾಗಿರುವ ಸದಸ್ಯರೊಂದಿಗೆ ಸಂಪರ್ಕವನ್ನು ಹೊಂದಲಾಗದಂಥ ವ್ಯವಸ್ಥೆಗಳನ್ನು ರಿಟರ್ನಿಂಗ್ ಆಫೀಸರನು ಮಾಡತಕ್ಕದ್ದು.

(7) ಯಾವುದೇ ಶಾರೀರಿಕ ದೌರ್ಬಲ್ಯದ ಕಾರಣದಿಂದಾಗಿ ಮತಪತ್ರದ ಮೇಲೆ ಗುರುತನ್ನು ಹಾಕಲು ಸದಸ್ಯನು ಅಸಮರ್ಥನಾಗಿದ್ದರೆ ರಿಟರ್ನಿಂಗ್ ಆಫೀಸರನು ಮತದಾರನ ಇಚ್ಛೆಗನುಸಾರವಾಗಿ ಮತಪತ್ರದ ಮೇಲೆ ಮತವನ್ನು ದಾಖಲು ಮಾಡತಕ್ಕದ್ದು ಮತ್ತು ಮತವು ಮರೆ ಆಗುವ ಹಾಗೆ ಅದನ್ನು ಮಡಿಸತಕ್ಕದ್ದು ಹಾಗೂ ಅದನ್ನು ಮತಪೆಟ್ಟಿಗೆಯೊಳಗೆ ಹಾಕತಕ್ಕದ್ದು. ಈ ಖಂಡದ ಮೇರೆಗೆ ಕಾರ್ಯನಿರ್ವಹಿಸುವಾಗ ರಿಟರ್ನಿಂಗ್ ಆಫೀಸರನು ಸಾಧ್ಯವಾಗುವಂಥ ಗೌಪ್ಯತೆಯನ್ನು ಪಾಲಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಸಂದರ್ಭದ ಸಂಕ್ಷಿಪ್ತ ದಾಖಲೆಯನ್ನು ಇಡತಕ್ಕದ್ದು. ಆದರೆ ಅದರಲ್ಲಿ ಯಾವುದೇ ಮತವನ್ನು ಯಾವ ರೀತಿಯಲ್ಲಿ ಕೊಡಲಾಗಿದೆ ಎಂಬುದನ್ನು ಸೂಚಿಸತಕ್ಕದ್ದಲ್ಲ.

(8) ಸದಸ್ಯನು, ತನಗೆ ಕೊಟ್ಟಿದ್ದ ಮತಪತ್ರವನ್ನು ತನ್ನ ಅಜಾಗರೂಕತೆಯಿಂದಾಗಿ ತಕ್ಕ ರೀತಿಯಲ್ಲಿ ಬಳಸಲು ಆಗದಂತಹುದನ್ನಾಗಿ ಮಾಡಿದ್ದರೆ, ಅದನ್ನು ರಿಟರ್ನಿಂಗ್ ಆಫೀಸರನಿಗೆ ಹಿಂತಿರುಗಿಸಿದ ಮೇಲೆ, ಅದು ಅಜಾಗರೂಕತೆಯಿಂದಾಗಿ ಹಾಗಾಗಿದೆ ಎಂದು ರಿಟರ್ನಿಂಗ್ ಆಫೀಸರನು ಮನದಟ್ಟು ಮಾಡಿಕೊಂಡ ಮೇಲೆ ಸದಸ್ಯನಿಗೆ ಇನ್ನೊಂದು ಮತಪತ್ರವನ್ನು ಕೊಡತಕ್ಕದ್ದು ಮತ್ತು ಹಾಗೆ ಹಿಂತಿರುಗಿಸಿದ ಮತಪತ್ರದ ಮೇಲೆ ರಿಟರ್ನಿಂಗ್ ಆಫೀಸರನು 'ಕೆಟ್ಟಿದೆ' 'ರದ್ದುಪಡಿಸಲಾಗಿದೆ' ಎಂದು ಗುರುತು ಹಾಕತಕ್ಕದ್ದು. ಸದಸ್ಯನು ಮತಪತ್ರವನ್ನು ಪಡೆದುಕೊಂಡ ತರುವಾಯ ಅದನ್ನು ಬಳಸಕೂಡದೆಂದು ತೀರ್ಮಾನಿಸಿದರೆ ಅವನು ಅದನ್ನು ರಿಟರ್ನಿಂಗ್ ಆಫೀಸರನಿಗೆ ಹಿಂದಿರುಗಿಸತಕ್ಕದ್ದು ಮತ್ತು ಹಾಗೆ ಹಿಂದಿರುಗಿಸಿದ ಮತಪತ್ರದ ಮೇಲೆ ರಿಟರ್ನಿಂಗ್ ಆಫೀಸರನು 'ಹಿಂದಿರುಗಿಸಲಾಗಿದೆ' 'ರದ್ದುಪಡಿಸಲಾಗಿದೆ' ಎಂದು ಗುರುತು ಹಾಕತಕ್ಕದ್ದು. ಈ ಖಂಡದ ಮೇರೆಗೆ ರದ್ದುಪಡಿಸಿದ ಎಲ್ಲಾ ಮತಪತ್ರಗಳನ್ನು ಒಂದು ಪ್ರತ್ಯೇಕವಾದ ಪ್ಯಾಕೆಟ್ಟಿನಲ್ಲಿ ಇಡತಕ್ಕದ್ದು.

**26. ಮತಗಳ ಎಣಿಕೆ.**– (1) ಹಾಜರಿರುವ ಮತ್ತು ಮತವನ್ನು ಕೊಡಲು ಇಚ್ಛಿಸುವ ಸದಸ್ಯರೆಲ್ಲರೂ ಮತವನ್ನು ಕೊಟ್ಟ ತರುವಾಯ ರಿಟರ್ನಿಂಗ್ ಆಫೀಸರನು, ಹಾಜರಿರುವ ಸದಸ್ಯರ ಸಮಕ್ಷಮದಲ್ಲಿ ಮತಪೆಟ್ಟಿಗೆಯನ್ನು ತೆರೆಯತಕ್ಕದ್ದು. ಅದರಿಂದ ಹೊರತೆಗೆದ ಮತಪತ್ರಗಳ ಸಂಖ್ಯೆಯನ್ನು ಎಣಿಸತಕ್ಕದ್ದು ಮತ್ತು ಆ ಮತಪತ್ರಗಳನ್ನು ಪರಿಶೀಲಿಸತಕ್ಕದ್ದು ಮತ್ತು ತನ್ನ ಅಭಿಪ್ರಾಯದಲ್ಲಿ ಅಸಿಂಧುವಾಗಿರುವಂಥ ಮತಪತ್ರಗಳನ್ನು ಹಾಗೂ ತನ್ನ ಅಭಿಪ್ರಾಯದಲ್ಲಿ ಸಿಂಧುವಾಗಿರುವಂಥ ಮತಪತ್ರಗಳನ್ನು ಪ್ರತ್ಯೇಕಗೊಳಿಸತಕ್ಕದ್ದು. ಅಸಿಂಧುವಾದವುಗಳ ಮೇಲೆ 'ತಿರಸ್ಕರಿಸಲಾಗಿದೆ' ಎಂಬ ಪದವನ್ನು ಮತ್ತು ತಿರಸ್ಕಣೆಗೆ ಕಾರಣವನ್ನು ಹಿಂಬರಹ ಮಾಡತಕ್ಕದ್ದು ಮತ್ತು ಸಿಂಧುವಾದ ಎಲ್ಲಾ ಮತಪತ್ರಗಳನ್ನು ಒಂದು ಕಟ್ಟಿನಲ್ಲಿ ಇರಿಸತಕ್ಕದ್ದು.

(2) ರಿಜಿಸ್ಟ್ರಾರನು, ಮತಪತ್ರವನ್ನು,-

(ಎ) ಅದು ಮತದಾರನನ್ನು ಗುರುತಿಸಬಹುದಾದಂಥ ಯಾವುದೇ ಗುರುತು ಅಥವಾ ಬರಹವನ್ನು ಹೊಂದಿದ್ದರೆ; ಅಥವಾ

(ಬಿ) ಅದರ ಮೇಲೆ ಯಾವುದೇ ಮತವನ್ನು ದಾಖಲು ಮಾಡಿಲ್ಲದಿದ್ದರೆ; ಅಥವಾ

(ಸಿ) ಅದರ ಮೇಲೆ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಮತಗಳನ್ನು ಕೊಟ್ಟಿದ್ದರೆ; ಅಥವಾ

(ಡಿ) ಅದರ ಮೇಲೆ ಮತವನ್ನು ಸೂಚಿಸುವ ಗುರುತನ್ನು ಯಾವ ಉಮೇದುವಾರನಿಗೆ ಮತವನ್ನು ಕೊಡಲಾಗಿದೆ ಎಂಬುದರ ಬಗ್ಗೆ ಸಂಶಯ ಉಂಟಾಗುವಂಥ ರೀತಿಯಲ್ಲಿ ಹಾಕಲಾಗಿದ್ದರೆ; ಅಥವಾ

(ಇ) ಅದು ಖೋಟಾ ಮತಪತ್ರವಾಗಿದ್ದರೆ-

- ತಿರಸ್ಕರಿಸತಕ್ಕದ್ದು:

ಪರಂತು, ಮತಪತ್ರದಲ್ಲಿ ಗುರುತು ಮಾಡಿರುವ ರೀತಿಯಿಂದ, ಮತವನ್ನು ನಿರ್ದಿಷ್ಟ ಉಮೇದುವಾರನಿಗೆ ನೀಡಲಾಗಿದೆ ಎಂಬ ಉದ್ದೇಶವು ಸ್ಪಷ್ಟವಾಗಿ ಕಂಡುಬಂದರೆ, ಮತವನ್ನು ಸೂಚಿಸುವಂಥ ಗುರುತು ಅಸ್ಪಷ್ಟವಾಗಿದೆ ಅಥವಾ ಒಂದಕ್ಕಿಂತ ಹೆಚ್ಚು ಸಲ ಗುರುತು ಹಾಕಲಾಗಿದೆ ಎಂಬ ಕಾರಣ ಮಾತ್ರದಿಂದಲೇ ತಿರಸ್ಕರಿಸತಕ್ಕದ್ದಲ್ಲ.

(3) ಈ ನಿಯಮದ ಮೇರೆಗೆ ಯಾವುದೇ ಮತಪತ್ರವನ್ನು ತಿರಸ್ಕರಿಸುವುದಕ್ಕೆ ಮುಂಚೆ ರಿಟರ್ನಿಂಗ್ ಆಫೀಸರನು ಆ ಮತಪತ್ರವನ್ನು ಪರೀಕ್ಷಿಸಲು ಪ್ರತಿಯೊಬ್ಬ ಉಮೇದುವಾರನಿಗೆ ಒಂದು ಯುಕ್ತ ಅವಕಾಶವನ್ನು ಕೊಡತಕ್ಕದ್ದು. ಆದರೆ ಅದನ್ನು ಅಥವಾ ಇತರ ಯಾವುದೇ ಮತಪತ್ರವನ್ನು ಮುಟ್ಟಲು ಅನುಮತಿಸತಕ್ಕದ್ದಲ್ಲ.

(4) ತಿರಸ್ಕರಿಸಿದ ಪ್ರತಿಯೊಂದು ಮತಪತ್ರವನ್ನು ಒಂದು ಸಿಂಧುವಾದ ಮತವೆಂದು ಎಣಿಸತಕ್ಕದ್ದು. ಎಣಿಕೆಯನ್ನು ಮುಗಿಸಿದ ತರುವಾಯ ರಿಟರ್ನಿಂಗ್ ಆಫೀಸರನು, ಪ್ರತಿಯೊಬ್ಬ ಉಮೇದುವಾರನು ಪಡೆದ ಮತಗಳ ಒಟ್ಟು ಸಂಖ್ಯೆಯನ್ನು ಒಂದು ವಿವರಪಟ್ಟಿಯಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅದನ್ನು ಪ್ರಕಟಿಸತಕ್ಕದ್ದು.

(5) ಅಂಥ ಪ್ರಕಟಣೆಯನ್ನು ಮಾಡಿದ ತರುವಾಯ, ರಿಟರ್ನಿಂಗ್ ಆಫೀಸರನು ಸ್ವಪ್ರೇರಣೆಯಿಂದ ಅಥವಾ ಯಾರೇ ಅಭ್ಯರ್ಥಿಯ ಕೋರಿಕೆ ಮೇಲೆ ಮತಗಳನ್ನು ಮರು ಎಣಿಕೆ ಮಾಡಬಹುದು:

ಪರಂತು, ಇದರಲ್ಲಿರುವುದಾವುದೂ, ರಿಟರ್ನಿಂಗ್ ಆಫೀಸರನು ಅದೇ ಮತಗಳನ್ನು ಒಂದಕ್ಕಿಂತ ಹೆಚ್ಚು ಬಾರಿಗೆ ಮರುಎಣಿಕೆ ಮಾಡುವಂತೆ ನಿರ್ಬಂಧಿಸತಕ್ಕದ್ದಲ್ಲ.

ಈ ಉಪನಿಯಮದ ಮೇರೆಗೆ ಮತಗಳ ಮರು ಎಣಿಕೆಯನ್ನು ಮಾಡಿದಾಗ, ರಿಟರ್ನಿಂಗ್ ಆಫೀಸರನು, ಅಂಥ ಮರು ಎಣಿಕೆಯ ತರುವಾಯ ಅವಶ್ಯವಾಗುವಷ್ಟರ ಮಟ್ಟಿಗೆ (4)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ವಿವರಣ ಪಟ್ಟಿಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ತಾನು ಹಾಗೆ ಮಾಡಿದ ತಿದ್ದುಪಡಿಯನ್ನು ಪ್ರಕಟಿಸತಕ್ಕದ್ದು.

(6) ಪ್ರತಿಯೊಬ್ಬ ಉಮೇದುವಾರನು ಪಡೆದಿರುವ ಒಟ್ಟು ಮತಗಳನ್ನು (4)ನೇ ಉಪನಿಯಮ ಅಥವಾ (5)ನೇ ಉಪನಿಯಮದ ಮೇರೆಗೆ ಪ್ರಕಟಿಸಿದ ತರುವಾಯ, ರಿಟರ್ನಿಂಗ್ ಆಫೀಸರನು ಯಾವ ಉಮೇದುವಾರನಿಗೆ ಅತಿ ಹೆಚ್ಚಿನ ಸಂಖ್ಯೆಯ ಸಿಂಧುವಾದ ಮತಗಳನ್ನು ಕೊಡಲಾಗಿದೆಯೋ ಅವನು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಘೋಷಿಸತಕ್ಕದ್ದು.

(7) ಮತಗಳ ಎಣಿಕೆಯು ಪೂರ್ಣಗೊಂಡ ತರುವಾಯ ಯಾರೇ ಉಮೇದುವಾರರ ನಡುವೆ ಸಮಾನ ಮತಗಳು ಇರುವುದಾಗಿ ಕಂಡುಬಂದರೆ ಮತ್ತು ಒಂದು ಮತವನ್ನು ಸೇರಿಸುವುದರಿಂದ ಆ ಉಮೇದುವಾರರ ಪೈಕಿ ಯಾರೇ ಉಮೇದುವಾರನು ತಾನು ಚುನಾಯಿತನಾಗಿರುವುದಾಗಿ ಘೋಷಿಸಿಕೊಳ್ಳಲು ಹಕ್ಕುಳ್ಳವನಾಗಬಹುದಾಗಿದ್ದರೆ ರಿಟರ್ನಿಂಗ್ ಆಫೀಸರನು ತಕ್ಷಣವೇ ಆ ಉಮೇದುವಾರರಲ್ಲಿ ಒಬ್ಬನನ್ನು ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಯಾವ ಉಮೇದುವಾರನಿಗೆ ಚೀಟಿ ಬರುವುದೋ ಆ ಅಭ್ಯರ್ಥಿಯು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಮುಂದಿನ ವಿಧಾನವನ್ನು ಅನುಸರಿಸತಕ್ಕದ್ದು. ರಿಟರ್ನಿಂಗ್ ಆಫೀಸರನು ಆ ತರುವಾಯ ಯಾವ ಉಮೇದುವಾರನಿಗೆ ಚೀಟಿ ಬಂದಿದೆಯೋ ಆ ಉಮೇದುವಾರನು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಘೋಷಿಸತಕ್ಕದ್ದು.

(8) ರಿಟರ್ನಿಂಗ್ ಆಫೀಸರನು ಆ ತರುವಾಯ ನಮೂನೆ VIರಲ್ಲಿ ಚುನಾವಣಾ ವಿವರಪಟ್ಟಿಯನ್ನು ತಯಾರಿಸಿ ಅದನ್ನು ಪ್ರಮಾಣೀಕರಿಸತಕ್ಕದ್ದು.

(9) 14 ಮತ್ತು 15ನೇ ನಿಯಮಗಳು ಉಚಿತ ವ್ಯತ್ಯಾಸಗಳೊಂದಿಗೆ ಅಧ್ಯಕ್ಷನ ಚುನಾವಣೆಗೆ ಅನ್ವಯವಾಗತಕ್ಕದ್ದು.

**27. ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳುವುದು.**- ಈ ನಿಯಮಗಳ ಮೇರೆಗೆ ಚುನಾಯಿತನಾದ ಅಧ್ಯಕ್ಷನು, ಚುನಾಯಿತ ಅಧ್ಯಕ್ಷರು ಇಲ್ಲದಿರುವ ಸಂದರ್ಭದಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಚುನಾಯಿತನಾದ ಅಧ್ಯಕ್ಷನ ಅವಧಿಯು ಮುಕ್ತಾಯವಾದ ತರುವಾಯ ತಕ್ಷಣ ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳತಕ್ಕದ್ದು.

**28. ಚುನಾವಣಾ ತಕರಾರು ಅರ್ಜಿಗಳು.**- 16, 17, 18 ಮತ್ತು 19ನೇ ನಿಯಮಗಳ ಉಪಬಂಧಗಳು ಉಚಿತ ವ್ಯತ್ಯಾಸಗಳೊಡನೆ ಅಧ್ಯಕ್ಷನ ಚುನಾವಣೆಗೆ ಅನ್ವಯವಾಗತಕ್ಕದ್ದು ಮತ್ತು 13ನೇ ನಿಯಮದ ಯಾವುದೇ ಉಪಬಂಧಗಳಿಗೆ ಮಾಡಿದ ಉಲ್ಲೇಖವನ್ನು 26ನೇ ನಿಯಮದ ಸಂವಾದಿ ಉಪಬಂಧಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**29. ಆಕಸ್ಮಿಕ ಖಾಲಿ ಸ್ಥಾನಗಳು.**- (1) ಚುನಾಯಿತ ಅಧ್ಯಕ್ಷನ ಪದದಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದಾಗ ಅದನ್ನು ಮಂಡಲಿಯ ಸದಸ್ಯರು ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು 21 ರಿಂದ 28ರ ವರೆಗಿನ ನಿಯಮಗಳ ಉಪಬಂಧಗಳು ಮತ್ತು ಈ ಭಾಗದಲ್ಲಿ ಅಧ್ಯಕ್ಷರ ಚುನಾವಣೆಗೆ ಅನ್ವಯವಾಗುವ ಎಲ್ಲಾ ಇತರ ನಿಯಮಗಳು ಮತ್ತು ನಮೂನೆಗಳು ಉಚಿತ ವ್ಯತ್ಯಾಸಗಳೊಡನೆ ಚುನಾಯಿತ ಅಧ್ಯಕ್ಷನ ಪದದಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡುವ ಚುನಾವಣೆಗೆ ಅನ್ವಯವಾಗತಕ್ಕದ್ದು.

## ಭಾಗ - IV

## ಮಂಡಲಿಯಿಂದ ಪರೀಕ್ಷಕರ ಸಮಿತಿಯ ಸದಸ್ಯರ ಚುನಾವಣೆ

**30. ರಿಜಿಸ್ಟ್ರಾರನು ರಿಟರ್ನಿಂಗ್ ಆಫೀಸರನಾಗಿರುವುದು.**- ರಿಜಿಸ್ಟ್ರಾರನು, 16ನೇ ಪ್ರಕರಣದ (1)ನೇ ಉಪಪ್ರಕರಣದ (ii) ನೇ ಖಂಡದ ಮೇರೆಗೆ ಪರೀಕ್ಷಕರ ಸಮಿತಿಗೆ ಮಂಡಲಿಯ ಸದಸ್ಯರಿಂದ ಮೂವರು ವ್ಯಕ್ತಿಗಳ ಚುನಾವಣೆಗಾಗಿ ರಿಟರ್ನಿಂಗ್ ಆಫೀಸರನಾಗಿರತಕ್ಕದ್ದು.

**31. ಪರೀಕ್ಷಕರ ಸಮಿತಿಗೆ ಸದಸ್ಯರ ಚುನಾವಣೆಗಾಗಿ ನಿಯಮಗಳ ಅನ್ವಯ.**- ಈ ನಿಯಮಗಳ ಭಾಗ - IIರ ಉಪಬಂಧಗಳು ಮತ್ತು ಮಂಡಲಿಯ ಸದಸ್ಯರ ಚುನಾವಣೆಗೆ ಸಂಬಂಧಪಟ್ಟ ನಮೂನೆಗಳು ಉಚಿತ ವ್ಯತ್ಯಾಸಗಳೊಂದಿಗೆ 16ನೇ ಪ್ರಕರಣದ (1)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗೆ ಪರೀಕ್ಷಕರ ಸಮಿತಿಗೆ ಮಂಡಲಿಯು ನಡೆಸುವ ಸದಸ್ಯರ ಚುನಾವಣೆಗೆ ಅನ್ವಯವಾಗತಕ್ಕದ್ದು.

## [1][ನಮೂನೆ - I]

## (3(2)ನೇ ನಿಯಮವನ್ನು ನೋಡಿ)

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 3ನೇ ಪ್ರಕರಣದ (2)ನೇ ಉಪಪ್ರಕರಣದ (iii)ನೇ ಖಂಡದಲ್ಲಿ ಅನುಕ್ರಮವಾಗಿ (ಎ) ಮತ್ತು (ಬಿ) ಉಪಖಂಡಗಳ ಮೇರೆಗೆ ಮತ ಕೊಡಲು ಅರ್ಹರಾದ ವ್ಯಕ್ತಿಗಳ ಪಟ್ಟಿಯನ್ನು ಒಳಗೊಂಡಿರುವ ಪ್ರಾರಂಭಿಕ ಮತದಾರರ ಪಟ್ಟಿ.

### ಭಾಗ - ಎ

ಕ್ರಮಸಂಖ್ಯೆ

ನೋಂದಣಿ ಸಂಖ್ಯೆ

ಹೆಸರುಗಳು

ಅರ್ಹತೆಗಳು

ವಿಳಾಸ

ಷರಾ

### ಭಾಗ - ಬಿ

ಕ್ರಮಸಂಖ್ಯೆ
ನೋಂದಣಿ ಸಂಖ್ಯೆ
ಹೆಸರುಗಳು
ಅರ್ಹತೆಗಳು
ವಿಳಾಸ
ಷರಾ][1]

1. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಸೇರಿಸಲಾಗಿದೆ.

## [1][ನಮೂನೆ – 1ಎ][1]

### (4(1) 22 ಮತ್ತು 31ನೇ ನಿಯಮಗಳನ್ನು ನೋಡಿ)

### ಚುನಾವಣಾ ನೋಟೀಸು

### ಮಂಡಲಿಯ ಸದಸ್ಯರ ಅಧ್ಯಕ್ಷರ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ

(1) —————————— ಮಂಡಲಿಯ ಸದಸ್ಯರ ಅಧ್ಯಕ್ಷರ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆಯನ್ನು ನಡೆಸಬೇಕಾಗಿದೆ.

(2) —————————— ದಿನಾಂಕಕ್ಕೆ ಮೀರದಂತೆ ಯಾವುದೇ ದಿನಾಂಕದಂದು ರಿಟರ್ನಿಂಗ್ ಆಫೀಸರನ ಕಚೇರಿಯಲ್ಲಿ ಉಮೇದುವಾರ ಅಥವಾ ಅವನ ಸೂಚಕ ಅಥವಾ ಅನುಮೋದಕನು ಪೂರ್ವಾಹ್ನ 11 ಗಂಟೆ ಮತ್ತು ಅಪರಾಹ್ನ 3 ಗಂಟೆಯ ನಡುವಣ ವೇಳೆಯಲ್ಲಿ ನಾಮನಿರ್ದೇಶನ ಪತ್ರಗಳನ್ನು ಒಪ್ಪಿಸಬಹುದು.

(3) —————————— ಸ್ಥಳದಲ್ಲಿ —————————— ದಿನಾಂಕದಂದು —————————— ವೇಳೆಯಲ್ಲಿ ನಾಮನಿರ್ದೇಶನ ಪತ್ರಗಳನ್ನು ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದು.

(4) ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಉಮೇದುವಾರ ಅಥವಾ ಈ ಬಗ್ಗೆ ಅಂಥ ಉಮೇದುವಾರನಿಂದ ಬರಹದಲ್ಲಿ ಅಧಿಕೃತನಾದ ಅವನ ಸೂಚಕ ಅಥವಾ ಅನುಮೋದಕನು ರಿಟರ್ನಿಂಗ್ ಆಫೀಸರನ ಕಚೇರಿಯಲ್ಲಿ —————————— ರಂದು ಅಪರಾಹ್ನ ಮೂರು ಗಂಟೆಗೆ ಮುಂಚೆ ಒಪ್ಪಿಸಬಹುದು.

(5) ನಾಮನಿರ್ದೇಶನ ಪತ್ರಗಳು ಮತ್ತು ಹಿಂದಕ್ಕೆ ತೆಗೆದುಕೊಳ್ಳುವ ಬಗೆಗಿನ ನೋಟೀಸುಗಳನ್ನು ರಿಟರ್ನಿಂಗ್ ಆಫೀಸರನಿಗೆ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಯಾರೇ ಇತರ ಅಧಿಕಾರಿಗೆ ಅವನ ಕಚೇರಿಯಲ್ಲಿ ಒಪ್ಪಿಸಬಹುದು.

(6) ಚುನಾವಣೆಯಲ್ಲಿ ಸ್ಪರ್ಧೆ ಇರುವ ಸಂದರ್ಭದಲ್ಲಿ ಮತದಾನವನ್ನು —————————— ಇಲ್ಲಿ ——————————* ರಂದು ನಡೆಸಲಾಗುವುದು. [2][XXX][2] ಈ ಬಗ್ಗೆ ನೋಟೀಸನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು

– ಎಂದು ಈ ಮೂಲಕ ನೋಟೀಸು ಕೊಡಲಾಗಿದೆ.

* ಇಲ್ಲಿ ಸ್ಥಳದ ಹೆಸರನ್ನು ನಮೂದಿಸಿ.

1. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಪುನಃ ಅಕ್ಷರ ನೀಡಲಾಗಿದೆ.

2. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಬಿಟ್ಟುಬಿಡಲಾಗಿದೆ.

## [1][(ನಮೂನೆ – 1ಬಿ)][1]

### ಘೋಷಣಾ ಪತ್ರ

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿಗೆ ಚುನಾವಣೆ.

ಕ್ರಮಸಂಖ್ಯೆ:

ಮತದಾರನ ಹೆಸರು

ಮತದಾರರ ಪಟ್ಟಿಯ ಹೆಸರು

ಯಾವುದಾದರೂ ಇದ್ದರೆ, ಅದು

1. ಅಧಿಸೂಚನೆ ಸಂ: ಜಿಎಸ್‌ಆರ್ 7 ದಿನಾಂಕ: 4.12.1973ರ ಮೂಲಕ ಸೇರಿಸಲಾಗಿದೆ.

### ಮತದಾರನ ಘೋಷಣೆ

ಕರ್ನಾಟಕ ಹೋಮಿಯೋಪತಿ ವೃತ್ತಿಗಾರರ ಅಧಿನಿಯಮ, 1961ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ವೃತ್ತಿಗಾರ-ಮತದಾರರಿಂದ ಕರ್ನಾಟಕ ಹೋಮಿಯೋಪತಿ ಔಷಧ ಪದ್ಧತಿಯ ಮಂಡಲಿ ಮತ್ತು ಪರೀಕ್ಷಕರ ಸಮಿತಿಗೆ ಚುನಾವಣೆ ಸಂಬಂಧ ನಾನು ಒಬ್ಬ ಮತದಾರನಾಗಿದ್ದೇನೆಂದು ಮತ್ತು ಈ ಚುನಾವಣೆಯಲ್ಲಿ ಬೇರಾವುದೇ ಮತಪತ್ರಕ್ಕೆ ಸಹಿ ಮಾಡಿಲ್ಲವೆಂದು

——————————————— (ಪೂರ್ಣ ಹೆಸರು ಮತ್ತು ಪದನಾಮ ಯಾವುದಾದರೂ ಇದ್ದರೆ ಅದನ್ನು ಬರೆಯಬೇಕು) ನಾನು ಘೋಷಿಸುತ್ತೇನೆ.

ಸ್ಥಳ: ರುಜು

ದಿನಾಂಕ: ವಿಳಾಸ:

(ಸಂ. ಹೆಚ್‌ಎಂಎ 493 ಸಿಐಎಂ 72).

**ನಮೂನೆ – II**

**(6, 23 ಮತ್ತು 31ನೇ ನಿಯಮಗಳನ್ನು ನೋಡಿ)**

**ನಾಮನಿರ್ದೇಶನ ಪತ್ರ**

**ಮಂಡಲಿಯ ಸದಸ್ಯರ / ಅಧ್ಯಕ್ಷನ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ**

ಮಂಡಲಿಯ ಸದಸ್ಯರ – ಅಧ್ಯಕ್ಷನ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆಗಾಗಿ, —————————— ಇವರನ್ನು (ಉಮೇದುವಾರನ ಹೆಸರು ಮತ್ತು ವಿವರಗಳು)*ಉಮೇದುವಾರನನ್ನಾಗಿ ನಾವು ಈ ಮೂಲಕ ನಾಮನಿರ್ದೇಶನ ಮಾಡುತ್ತೇವೆ.

ನಾವಿಬ್ಬರೂ ಮತದಾರರೆಂದು : ಮಂಡಲಿಯ ಸದಸ್ಯರೆಂದು ನಾವಿಬ್ಬರೂ ಘೋಷಿಸುತ್ತೇವೆ.

——————————

ಸೂಚಕನ ರುಜು
ದಿನಾಂಕ ................

——————————

ಅನುಮೋದಕನ ರುಜು
ದಿನಾಂಕ

ಈ ನಾಮ ನಿರ್ದೇಶನಕ್ಕೆ ನಾನು ಅನುಮತಿಸಿದ್ದೇನೆ.

——————————

ಅಭ್ಯರ್ಥಿಯ ರುಜು
ದಿನಾಂಕ ...........

---

* ಉಮೇದುವಾರನ ವಿವರಗಳೆಂದರೆ, ಉಮೇದುವಾರನ ತಂದೆ ಅಥವಾ ಗಂಡನ ಹೆಸರು ಅವನ : ಅವಳ ಉದ್ಯೋಗ ಮತ್ತು ನಿವಾಸದ ಸ್ಥಳ ಇವುಗಳನ್ನು ಬರೆಯಬೇಕು.

**ನಮೂನೆ – III**

**(9, 23, 31ನೇ ನಿಯಮಗಳನ್ನು ನೋಡಿ)**

**ಹಿಂತೆಗೆದುಕೊಳ್ಳುವಿಕೆಯ ನೋಟೀಸು**

**ಮಂಡಲಿಯ ಸದಸ್ಯರ / ಅಧ್ಯಕ್ಷರ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ.**

ರಿಟರ್ನಿಂಗ್ ಆಫೀಸರ್,
——————————

ಮೇಲ್ಕಂಡ ಚುನಾವಣೆಯಲ್ಲಿ ಉಮೇದುವಾರನಾಗಿ ನಾಮನಿರ್ದೇಶನಗೊಂಡಿರುವ —————————— ಎಂಬ ನಾನು ನನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಾಗಿ ಈ ಮೂಲಕ ತಿಳಿಸಬಯಸುತ್ತೇನೆ.

ಸ್ಥಳ:

ದಿನಾಂಕ: **ಉಮೇದುವಾರನ ರುಜು.**

ಈ ನೋಟೀಸನ್ನು ನನಗೆ ———————— ಇಲ್ಲಿ ನನ್ನ ಕಚೇರಿಯಲ್ಲಿ ———————— (ವೇಳೆಯಲ್ಲಿ) ———————— ದಂದು * ———————— ಇವರು ಒಪ್ಪಿಸಿರುತ್ತಾರೆ.

ದಿನಾಂಕ:

ರಿಟರ್ನಿಂಗ್ ಆಫೀಸರ್.

* ಇಲ್ಲಿ ಈ ಕೆಳಕಂಡವುಗಳಲ್ಲಿ ಅನ್ವಯವಾಗಬಹುದಾದ ಒಂದನ್ನು ಇಲ್ಲಿ ಸೇರಿಸಿ.

1. ಉಮೇದುವಾರನಾದ.
2. ಉಮೇದುವಾರನಿಂದ ಲಿಖಿತದಲ್ಲಿ ಅಧಿಕೃತಗೊಂಡ ಮತ್ತು ಇದನ್ನು ಒಪ್ಪಿಸಿದ ಉಮೇದುವಾರನ ಸೂಚಕನಾದ.
3. ಉಮೇದುವಾರನಿಂದ ಲಿಖಿತದಲ್ಲಿ ಅಧಿಕೃತಗೊಂಡ ಮತ್ತು ಇದನ್ನು ಒಪ್ಪಿಸಿದ ಉಮೇದುವಾರನ ಅನುಮೋದಕನಾದ.

## ನಮೂನೆ - IV

**(10 (ಸಿ) 23, 31ನೇ ನಿಯಮಗಳನ್ನು ನೋಡಿ)**

**ಸಿಂಧುವಾದ ನಾಮನಿರ್ದೇಶನಗಳ ಪಟ್ಟಿ**

**ಮಂಡಲಿಯ ಸದಸ್ಯರ / ಅಧ್ಯಕ್ಷನ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ**

| ಕ್ರಮಸಂಖ್ಯೆ | ಉಮೇದುವಾರನ ಹೆಸರು | *ತಂದೆಯ:<br>*ಗಂಡನ ಹೆಸರು | ಅಭ್ಯರ್ಥಿಯ ವಿಳಾಸ |
|---|---|---|---|
| 1 | 2 | 3 | 4 |

ಸ್ಥಳ:

ದಿನಾಂಕ:

**ರಿಟರ್ನಿಂಗ್ ಆಫೀಸರ್**

* ಅನ್ವಯವಾಗದಿರುವುದನ್ನು ಹೊಡೆದುಹಾಕಿ.

## ನಮೂನೆ – V

**(12, 25 ಮತ್ತು 31ನೇ ನಿಯಮಗಳನ್ನು ನೋಡಿ)**

**ಮಂಡಲಿಯ ಸದಸ್ಯರ / ಅಧ್ಯಕ್ಷನ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ**

| **ಎದುರು ಪ್ರತಿ** | | **ಪ್ರತಿ** | |
|---|---|---|---|
| ಮತಪತ್ರದ ಕ್ರಮಸಂಖ್ಯೆ | ಉಮೇದುವಾರನ ಕ್ರಮಸಂಖ್ಯೆ | ಉಮೇದುವಾರನ ಹೆಸರು | ಮತದಾರನ ಗುರುತು |
| 1. ......... | | | |
| 2. ......... | | | |
| 3. ......... | | | |
| 4. ......... | | | |

**ಮತದಾರರಿಗೆ ಸೂಚನೆಗಳು**

1. ಭರ್ತಿ ಮಾಡಬೇಕಾದ ಸ್ಥಾನಗಳು ಎಷ್ಟು ಇವೆಯೋ ಅಷ್ಟು ಮತಗಳು: ಒಂದು ಮತ ನಿಮಗೆ ಇದೆ.
2. ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಯು ———————— ಇದೆ.

3. ನೀವು ಯಾರಿಗೆ ಮತವನ್ನು ಕೊಡಲು ಇಚ್ಛಿಸುತ್ತೀರೋ ಆ ಉಮೇದುವಾರನ ಹೆಸರಿನ ಮುಂದೆ ಅಡ್ಡ (X) ಗುರುತನ್ನು ಸ್ಪಷ್ಟವಾಗಿ ಹಾಕಬೇಕು.

4. ನೀವು ಯಾರೇ ಒಬ್ಬ ಉಮೇದುವಾರನಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡಕೂಡದು, ನೀವು ಹಾಗೆ ಮಾಡಿದರೆ ನಿಮ್ಮ ಮತಪತ್ರವನ್ನು ತಿರಸ್ಕರಿಸಲಾಗುವುದು.

5. ಯಾವ ಉಮೇದುವಾರನಿಗೆ : ಉಮೇದುವಾರರಿಗೆ, ನೀವು ನಿಮ್ಮ ಮತವನ್ನು ಕೊಟ್ಟಿರುವಿರಿ ಎಂಬುದು ಸ್ಪಷ್ಟವಾಗಿ ಮತ್ತು ಅನುಮಾನಕ್ಕೆ ಆಸ್ಪದ ಇರದಂತೆ ಗೊತ್ತಾಗುವ ಹಾಗೆ ಗುರುತನ್ನು ಹಾಕತಕ್ಕದ್ದು. ಯಾವ ಉಮೇದುವಾರನಿಗೆ : ಉಮೇದುವಾರರಿಗೆ ನೀವು ಮತವನ್ನು ಕೊಟ್ಟಿರುವಿರಿ ಎಂಬುದು ಅನುಮಾನಕ್ಕೆ ಆಸ್ಪದ ಕೊಡುವ ಹಾಗೆ ಗುರುತನ್ನು ಹಾಕಿದ್ದರೆ ಆ ಮತವು ಅಸಿಂಧುವಾಗುತ್ತದೆ.

## ನಮೂನೆ - VI

**(13, 26 ಮತ್ತು 31ನೇ ನಿಯಮಗಳನ್ನು ನೋಡಿ)**

**ಚುನಾವಣಾ ವಿವರ ಪಟ್ಟಿಕೆ**

**ಮಂಡಲಿಯ ಸದಸ್ಯರ / ಅಧ್ಯಕ್ಷನ ಪದಕ್ಕೆ : ಪರೀಕ್ಷಕರ ಸಮಿತಿಗೆ ಚುನಾವಣೆ**

| ಕ್ರಮಸಂಖ್ಯೆ | ಉಮೇದುವಾರನ ಹೆಸರು | ಕೊಟ್ಟಿರುವ ಸಿಂಧುವಾದ ಮತಗಳ ಸಂಖ್ಯೆ |
|---|---|---|
| | | |
| | | |
| | | |
| | | |

ಕೊಟ್ಟ ಸಿಂಧುವಾದ ಮತಗಳ ಒಟ್ಟು ಸಂಖ್ಯೆ

ತಿರಸ್ಕ ೃತವಾದ ಮತಗಳ ಒಟ್ಟು ಸಂಖ್ಯೆ

———————————— (ಹೆಸರು)

———————————— (ವಿಳಾಸ) ಇವರು ಮಂಡಲಿಯ ಸದಸ್ಯನಾಗಿ: ಮಂಡಲಿಯ ಅಧ್ಯಕ್ಷನಾಗಿ: ಪರೀಕ್ಷಕರ ಸಮಿತಿಯ ಸದಸ್ಯನಾಗಿ ಕ್ರಮಬದ್ಧವಾಗಿ ಚುನಾಯಿತನಾಗಿರುವರೆಂದು ನಾನು ಘೋಷಿಸುತ್ತೇನೆ.

ಸ್ಥಳ:

ದಿನಾಂಕ:

ರಿಟರ್ನಿಂಗ್ ಆಫೀಸರ್.

(ಸಂಖ್ಯೆ ಪಿಎಲ್ಎಂ 356 ಪಿಐಎಂ 1964).

The above translation of the Karnataka Homeopathic Practitioners Act, 1961 (Karnataka Act 35 of 1961) and Karnataka Homeopathic Practitioners Rules 1964 and the Karnataka Board of Homeopathic System of Medicine and Court of Examiners (Election) Rules, 1964 shall be authoritative text in Kannada Language under section 5A of the Karnataka Official Language Act, 1963 (Karnataka Act 26 of 1963).

GOVERNER OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 830